DAMAGE BOOK

THE BOOK WAS DRENCHED

TEXT FLY WITHIN THE BOOK ONLY

UNIVERSAL LIBRARY
OU_198374
UNIVERSAL LIBRARY

OSMANIA UNIVERSITY LIBRARY

Call No K86/N27L Accession No K158

Author ನಂಜುಂಡಯ್ಯ, ವಿ.

Title ಲೇಖ್ಯ ಬೋಧಿನಿ 1913

This book should be returned on or before the date last marked below

# ಲೇಖ್ಯಬೋಧಿನಿ

ಕ್ಷೇಮಸಮಾಚಾರ ಕಾಗದಗಳು ಅರ್ಜಿಗಳು ಲೇವಾದೇವಿಯ
ಪತ್ರಗಳು ಲೆಕ್ಕಗಳು ಇವನ್ನು ಬರೆಯುವ ಮಾರ್ಗ
ವನ್ನು ವಿವರಿಸುವುದು.

**ವೇ. ನಂಜುಂಡಯ್ಯನವರಿಂದ**
ರಚಿಸಲ್ಪಟ್ಟದ್ದು

ಎಂಟನೆಯ ಮುದ್ರಣ

ಬೆಂಗಳೂರು ಪ್ರೆಸ್. ಮೈಸೂರ್ ರೋಡ್, ಬೆಂಗಳೂರು ಸಿಟಿ
1919

(ಕಾಪಿರೈಟ್ ರಿಜಿಸ್ಟರ್ ಮಾಡಲ್ಪಟ್ಟಿದೆ)

PRICE 10 ANNAS] [ಕ್ರಯ ೧೦ ಆಣೆ.

CHECKED. 1951

Checked 1968

# ಲೇಖ್ಯಬೋಧಿನಿ.

## 1ನೆಯ ಭಾಗ.

### ಕ್ಷೇಮಸಮಾಚಾರ ಮುಂತಾದ ಕಾಗದಗಳು.

#### ಕಾಗದಗಳನ್ನು ಬರೆಯುವ ಮಾರ್ಗ.

ಕಾಗದಗಳನ್ನು ಬರೆಯುವುದರ ಉದ್ದೇಶವೇನೆಂದರೆ, ನಮಗೆ ಬೇಕಾದವರು ದೂರದಲ್ಲಿರುವಾಗ ಅವರೊಡನೆ ಮುಖತಃ ಮಾತನಾಡುವುದು ಅಸಾಧ್ಯವಾದುದರಿಂದ, ಅವುಗಳ ಮುಖಾಂತರವಾಗಿ ಮಾತನಾಡುವುದು. ಎದುರಿಗೆ ಮಾತನಾಡುವಾಗ ಸಮಯಾನುಸಾರ ಬೇಕಾದ ಸಂಗತಿಗಳನ್ನೇ ಅಲ್ಲದೆ, ವಿಶೇಷ ಪ್ರಯೋಜನವೇನೂ ಇಲ್ಲದೆ ಇರುವ ಅನೇಕ ಸಂಗತಿಗಳನ್ನು ಮಾತನಾಡಿಕೊಳ್ಳಬಹುದು. ಬಾಯಿಯಿಂದ ಹೊರಡುವ ಮಾತುಗಳು ಬರವಣಿಗೆಯಂತೆ ನೆಲೆಯಾಗಿ ನಿಲ್ಲತಕ್ಕುವಲ್ಲ. ಅವುಗಳಲ್ಲಿ ಸ್ವಲ್ಪ ಹೆಚ್ಚು ಕಡಮೆಯಾದರೂ ವಿಶೇಷ ಬಾಧಕವಿಲ್ಲ. ಹೆಚ್ಚು ಕಡಮೆಯೆಂದರೆ ಕಂಡವರೆದುರಿಗೆಲ್ಲಾ ಬಾಯಿಗೆ ಬಂದಂತೆ ಹರಟಬಹುದೆಂಬ ಅರ್ಥವಲ್ಲ. ಆದರೆ ಹಗಲೂ ಇರುಳೂ ಮಾತನಾಡುವಾಗೆಲ್ಲಾ ಪ್ರತಿ ಮಾತನ್ನೂ ತೂಕಮಾಡಿ ನೋಡಿ ಹೊರಡಿಸಬೇಕಾದರೆ, ಮನುಷ್ಯನಿಗೆ ಸಹಿಸಲಾರದ ತೊಂದರೆಯುಂಟಾಗುವುದು. ಮಾತುಗಳಿಗಿಂತ ಬರವಣಿಗೆಗೆ ಹೆಚ್ಚಾದ ಕಾಲ, ತೊಂದರೆ, ಮುಂತಾದವು ಬೇಕಾಗುವುದರಿಂದ, ನಾವು ಹೇಳಬೇಕಾದ ಸಂಗತಿಗಳನ್ನು ಸೂಕ್ಷ್ಮವಾಗಿ

ಬರೆಯುವುದನ್ನು ಅಭ್ಯಾಸಮಾಡಬೇಕು. ಎದುರಿಗೆ ಹೇಳುವ ಅರ್ಥವನ್ನು ಕೇಳುವವರು ಗ್ರಹಿಸಿಕೊಳ್ಳದಿದ್ದರೆ, ಕೂಡಲೇ ಸರಿಯಾಗಿ ಪುನಃ ಹೇಳಬಹುದು. ಕಾಗದದಲ್ಲಿ ಬರೆಯಲ್ಪಟ್ಟಿರುವುದು ತಿಳಿಯದೆ ಹೋದರೆ, ಪುನಃ ಆ ಕಾಗದವನ್ನು ಕೇಳಿ ತಿಳಿದುಕೊಳ್ಳುವುದಕ್ಕಿಲ್ಲ. ಬರೆದವರಿಂದ ಮತ್ತೊಂದು ಕಾಗದ ಬರಬೇಕಾದರೆ, ಅನೇಕ ದಿನಗಳಾಗಬಹುದು. ಆದುದರಿಂದ ಕಾಗದಗಳನ್ನು ಬರೆಯುವವರು ತಮ್ಮ ಅರ್ಥವನ್ನು ಓದಿಕೊಳ್ಳುವವರಿಗೆ ಸ್ವಲ್ಪವೂ ಅನುಮಾನವಿಲ್ಲದೆ ತಿಳಿದುಕೊಳ್ಳುವಂತೆ ಸ್ಪಷ್ಟವಾಗಿ ಬರೆಯಬೇಕು.

2. ಕಾಗದಗಳಲ್ಲಿ ಬರೆಯಲ್ಪಡುವ ಸಂಗತಿಗಳು ಅನೇಕ ದಿವಸಗಳ ವರೆಗೂ ನಿಲ್ಲತಕ್ಕವಾದುದರಿಂದ, ನಾವು ಯಾರಿಗೆ ಬರೆಯುವೆವೊ ಅವರ ವಿಷಯವಾಗಿ ನಮಗೆ ಇರತಕ್ಕ ಮರ್ಯಾದೆ ವಿಶ್ವಾಸ ಮುಂತಾದುದನ್ನು ವ್ಯಕ್ತಪಡಿಸಲಿಕ್ಕೆ ತಕ್ಕ ರೀತಿಯಿಂದ ಅವನ್ನು ಬರೆದಿರಬೇಕು. ಪೂರ್ವದಿಂದಲೂ ನಡೆದುಬಂದಿರುವ ಪದ್ಧತಿಯ ಪ್ರಕಾರ ಇಂತಿಂತಾ ಜನರಿಗೆ ಬರೆಯುವಾಗ ಹೀಗೆ ಹೀಗೆ ಮೇಲುವಿಳಾಸ, ಒಳಗಿನ ಅಂಕಿತ (ಒಕ್ಕಣೆ) ಮುಂತಾದವುಗಳನ್ನು ಬರೆಯಬೇಕೆಂದು ವಿಧಾಯಕವಾಗಿದೆ. ಇಂಗ್ಲೀಷ್ ಭಾಷೆಯ ಜ್ಞಾನವು ಅಭಿವೃದ್ಧಿಯಾದ ಮೇಲೆ, ಈ ಪೂರ್ವದ ರೀತಿಯು ಬಹಳ ತೊಡಕಾದುದೆಂದೂ, ಪ್ರತಿ ಕಾಗದದಲ್ಲಿಯೂ ಈ ವಿಧವಾಗಿ ಬರೆಯುವುದು ಕೆಲಸಕೇಡೆಂದೂ, ಅನೇಕರು ಮೊದಲಿನ ಪದತಿಯ ಸರಣಿಯನ್ನು ತ್ಯಜಿಸುತಲಿದಾರೆ. ಪೂರ್ವದಲ್ಲಿ ಜನರಿಗಿದ್ದಷ್ಟು ಕಾಲವಿರಾಮವು ಈಗಿನವರಿಗೆ ಇಲ್ಲವಾದುದರಿಂದ, ಕಾಗದ ಬರೆಯುವ ಕೆಲಸವನ್ನು ಸಾಧ್ಯವಾದಮಟ್ಟಿಗೆ ಕಡಮೆ ಮಾಡಿಕೊಳ್ಳಬೇಕೆಂಬ ಕುತೂಹಲವು ಸಹಜವಾದುದೇ ಸರಿ. ಮತ್ತು ಕಾಗದಗಳನ್ನು ಬರೆಯುವುದರಲ್ಲಿ, ಬರೆಯುವವನ ಅವಸರ, ಓದಿಕೊಳ್ಳುವವನಿಗೂ ಅವನಿಗೂ ಇರುವ ಬಳಿಕೆ, ವಿಷಯ, ಗೌರವ, ಇವೆಲ್ಲಾ ನೋಡತಕ್ಕವುಗಳು. ಸಾಧಾರಣವಾದ ವಿಷಯದಲ್ಲಿ ಒಂದು ಮಾತನ್ನು ಬರೆಯಬೇಕೆಂದು ಬರೆಯುವ ಚೀಟಿಯಲ್ಲಿ, ಅತಿ ದೀರ್ಘವಾದ ಒಕ್ಕಣೆಯನ್ನು ಬರೆದರೆ, ನಾಲ್ಕು ವರ್ಷದ ಹುಡುಗನ ತಲೆಯ ಮೇಲೆ ಒಂದು ಥಡಿಯ ಭಾರದ

ರುಮಾಲನ್ನು ಹೊರಿಸಿದ ಅಲಂಕಾರದಂತಾಗುವುದು. ಆದರೂ ಕಾಗದಗಳನ್ನು ಬರೆಯುವಾಗ, ಮರ್ಯಾದೆಯನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟು, ಅವನ್ನು ಕೇವಲ ಸ್ವಭಾವೋಕ್ತಿಯಾಗಿ ಮಾಡತಕ್ಕದ್ದಲ್ಲ. ಮುಖ್ಯವಾಗಿ ಹತ್ತು ಮಂದಿಯಲ್ಲಿ ಶೋಭಿಸತಕ್ಕ ನಾಗರಿಕತೆಯು ಇಂತಾ ಸಂಗತಿಗಳಲ್ಲಿ ತಕ್ಕ ಮರ್ಯಾದೆಗಳನ್ನು ಆಚರಿಸುವುದೇ ಆದುದರಿಂದ, ಕಾಗದಗಳನ್ನು ಬರೆಯುವಾಗ ಸ್ವಲ್ಪ ಉಪಚಾರದ ಮಾತುಗಳನ್ನು ಹೆಚ್ಚು ಮಾಡಿದರೂ ತಪ್ಪಲ್ಲ, ತಕ್ಕ ಮರ್ಯಾದೆಯನ್ನು ಎಂದಿಗೂ ಬಿಟ್ಟು ನಡೆಯಬಾರದು. ಈ ವಿಷಯದಲ್ಲಿ ಎಷ್ಟು ಜಾಗ್ರತೆಯಾಗಿದ್ದರೆ, ಅಷ್ಟು ನೀವು ಕಾಗದವನ್ನು ಓದಿಕೊಳ್ಳುವವರ ವಿಷಯದಲ್ಲಿ ಗೌರವವನ್ನು ಇಟ್ಟಿರುವಿರೆಂದು ವ್ಯಕ್ತಪಡುವುದು. ಮತ್ತೊಬ್ಬರಿಂದ ತಾವು ಮರ್ಯಾದೆಯನ್ನು ಹೊಂದಬೇಕೆಂದಿರುವವರೆಲ್ಲರೂ, ಅವರಿಗೆ ಮೊದಲು ಮರ್ಯಾದೆಯನ್ನು ತೋರಿಸಬೇಕು.

3. ಕಾಗದಗಳನ್ನು ಬರೆಯುವ ವಿಷಯದಲ್ಲಿ ತಿಳಿಸತಕ್ಕ ಸಂಗತಿ ಇನ್ನೊಂದಿದೆ. ಕಟ್ಟಕಾಗದ, ಕೆಟ್ಟಮಸಿ, ಸೊಟ್ಟಸೊಟ್ಟಾಗಿ ಮಡಿಸುವುದು, ಇವೆಲ್ಲಾ ಅನುಚಿತವಾದವುಗಳು. ಪೂರ್ವದಲ್ಲಿ ಬಿಳೀ ಕಾಗದ ದೊರಕುವುದು ಕಷ್ಟವಾಗಿಯೂ ಅದು ಬೆಲೆಯುಳ್ಳದ್ದಾಗಿಯೂ ಇತ್ತು. ಈಗ ಬಿಳೀ ಕಾಗದವು ಸುಲಭವಾಗಿ ಎಲ್ಲೆಲ್ಲಿಯೂ ಸಿಕ್ಕುತ್ತದೆ. ಆಚಾರ ಕಟ್ಟರೂ ಆಕಾರ ಕೆಡಬಾರದೆಂದು ಒಂದು ಗಾದೆಯುಂಟು. ಚೊಕ್ಕಟವಾಗಿರುವ ಕಾಗದ, ಮಿಂಚುತಿರುವ ಮಸಿ, ಇವುಗಳಲ್ಲಿ ಬರೆಯಲ್ಪಟ್ಟಿರುವ ಬರವಣಿಗೆಯಲ್ಲಿ ಇತರ ಕೊರತೆಗಳಿದ್ದರೂ ಇದು ಸ್ವಲ್ಪ ಮಟ್ಟಿಗೆ ಅವನ್ನು ಮುಚ್ಚಿಬಿಡುವುದು. ಇಂಗ್ಲೀಷಿನಲ್ಲಿ ದೊಡ್ಡ ಮನುಷ್ಯರಿಗೆ ಬರೆಯುವ ಕಾಗದಗಳನ್ನು ಯಾವಾಗಲೂ ಇಮ್ಮಡಿಕೆಯಾಗಿ ಮಡಿಸಿರುವ ಕಾಗದದಲ್ಲಿಯೇ ಬರೆಯಬೇಕು. ವಿಷಯವು ಸ್ವಲ್ಪವಾದರೂ, ಕಾಗದವನ್ನು ಸಂಕೋಚ ಮಾಡಕೂಡದು. ಹೀಗೆ ಮಾಡಿದರೆ ಅದನ್ನು ಓದಿಕೊಳ್ಳತಕ್ಕವರ ಮರ್ಯಾದೆಗಿಂತ ಬರೆಯುವವರಿಗೆ ಕಾಗದದ ಬೆಲೆಯೇ ಹೆಚ್ಚಾದುದೆಂದು ಸೂಚಿಸಿದಂತಾಗುವುದು.

4. ಕಾಗದಗಳಲ್ಲಿ ಇರಬೇಕಾದ ಸಂಗತಿಗಳು ಯಾವುವೆಂದರೆ-

1. ಕಾಗದವನ್ನು ಯಾರಿಗೆ ಬರೆಯಬೇಕೋ ಅವರ ಹೆಸರು
2. ಬರೆಯುವವರ ಹೆಸರು
3. ಸ್ಥಳ ಮತ್ತು ಕಾಲ (ಮೊಕ್ಕಾಂ ಮತ್ತು ತಾರೀಖು)
4. ಮರ್ಯಾದೆಯ ಮಾತುಗಳು
5. ಕಾಗದದಲ್ಲಿ ಬರೆಯಬೇಕಾದ ವಿಷಯ
6. ಕೊನೆಯಲ್ಲಿ ಬರೆಯುವ ಮಾತುಗಳು
7. ಮೇಲಿನ ವಿಳಾಸ

## ಕಾಗದವನ್ನು ಓದಿಕೊಳ್ಳುವವರ ವಿಳಾಸ.

5. ಇದನ್ನು, ಯಾರಿಗೆ ಕಾಗದ ಬರೆಯುವುದೊ ಅವರಿಗೂ ಬರೆಯುವವರಿಗೂ ಇರುವ ಪರಸ್ಪರ ಬಂಧುತ್ವ, ಸ್ನೇಹ, ಮುಂತಾದ ಸಂಬಂಧಗಳನ್ನು ಸೂಚಿಸುವಂತೆ, ಬೇರೆ ಬೇರೆಯ ವಿಧವಾಗಿ ಬರೆಯಬೇಕು. ಕೆಲವು ಸಂದರ್ಭಗಳಲ್ಲಿ ಕೇವಲ ಪೂರ್ವ ಪದ್ಧತಿಯನ್ನೇ ಅನುಸರಿಸುವವರು ಈ ಬಿಕ್ಕಣೆಯನ್ನು ಅತಿ ದೀರ್ಘವಾಗಿ ಬರೆಯುತ್ತಾರೆ. ಮಠದ ಗುರುಗಳಿಗೆ, ಮಹಾರಾಜರಿಗೆ, ಇಂತವರಿಗೆ ಬರೆಯುವಾಗ, ಈ ಬಿಕ್ಕಣೆಯನ್ನೆಲ್ಲಾ ಸಾಂಗವಾಗಿ ಬರೆಯತಕ್ಕದ್ದಾಗಿರುವ ಸಂದರ್ಭಗಳು ಬೀಳಬಹುದು. ಸಾಧಾರಣ ಜನರಿಗೆ ಬರೆಯುವಾಗ ಇದನ್ನು ವಿಶೇಷವಾಗಿ ಹೆಚ್ಚಿಸಿ ಬರೆಯುವುದರಿಂದ ತಕ್ಕ ಫಲವೇನೂ ಇಲ್ಲ. ಈ ಕೆಳಗೆ ಸಾಧಾರಣವಾಗಿ ಉಪಯೋಗಿಸಬಹುದಾದ ರೂಪಗಳನ್ನು ವಿವರಿಸಿದೆ.

6. ತಂದೆ ಮೊದಲಾದ ಹಿರಿಯ ಬಂಧುಗಳಿಗೆ :—

ತೀರ್ಥರೂಪರಾದ ಯಜಮಾನರವರ ದಿವ್ಯ ಶ್ರೀ ಚರಣಸನ್ನಿಧಾನಂಗಳಿಗೆ
ತೀರ್ಥರೂಪರವರು ಪರಾಮರಿಸತಕ್ಕ ಬಗ್ಗೆ.
ತೀ|| ಯಜಮಾನರವರ ಸನ್ನಿಧಾನಕ್ಕೆ.
ತೀರ್ಥರೂಪರಾದ ಮಾವನವರ................
ತೀ|| ಅಣ್ಣನವರ..................................

ಮೇಲೆ ನಾಲ್ಕನೆಯ ನಮೂನೆಯಲ್ಲಿ........ಹೀಗೆ ಚುಕ್ಕೆಗಳನ್ನು ಹಾಕಿ ಬಿಟ್ಟಿರುವುದಕ್ಕೆ ಅರ್ಥವೇನೆಂದರೆ :—ಮುಂದಿನ ಮಾತುಗಳನ್ನು ಮೇಲೆ ಸೂಚಿಸಿರುವ ರೀತಿಯಾಗಿ ತಿಳಿದುಕೊಳ್ಳಬೇಕೆಂದು ಬಿಟ್ಟಿರುವುದು. 'ತೀರ್ಥರೂಪರಾದ ಮಾವನವರ........' ಎಂದರೆ "ತೀರ್ಥರೂಪರಾದ ಮಾವನವರ ದಿವ್ಯ ಚರಣಸನ್ನಿಧಾನಕ್ಕೆ" ಅಥವಾ "ತೀರ್ಥರೂಪರಾದ ಮಾವನವರ ಸನ್ನಿಧಾನಂಗಳಿಗೆ" ಹೀಗೆ ಇಷ್ಟ ಬಂದಂತೆ ಬರೆಯಬಹುದು ಎಂದು ಸೂಚಿಸುವುದು.

7. ಮಗ, ಅಳಿಯ, ಮುಂತಾದ ತಮಗಿಂತ ಕಿರಿಯರಾದ ಬಂಧುಗಳಿಗೆ:—

ಚಿರಂಜೀವಿ ಸಹಸ್ರಾಯುಷ್ಯನಾದಂತ ರಾಮುಸ್ವಾಮಿಗೆ.
ಚಿರಂಜೀವಿ ರಾಮುಸ್ವಾಮಿಗೆ.
ಚಿ॥ ಸ॥ ರಾಮುಸ್ವಾಮಿಗೆ.
ಚಿರಂಜೀವಿಗಳು ನೋಡಿಕೊಳ್ಳತಕ್ಕ ಬಗ್ಗೆ. (ಇದನ್ನು ಅಳಿಯ ಮುಂತಾದವರಿಗೆ ಬರೆಯಬಹುದು)

8. ಹಿರಿಯರಾದ ತಾಯಿ ಮುಂತಾದ ಸ್ತ್ರೀ ಬಂಧುಜನರಿಗೆ ಬರೆಯಬೇಕಾದರೆ :—

ಮಾತೃಶ್ರೀಯವರ ಪಾದಪದ್ಮಂಗಳಿಗೆ
ಮಾತೃಶ್ರೀ ಹರಿದ್ರಾ ಕುಂಕುಮ ಶೋಭಿತರಾದ ಲಕ್ಷ್ಮಮ್ಮನವರಿಗೆ.

9. ಹೆಂಗಸರಲ್ಲಿ ಬಂಧುಗಳಾದ ಚಿಕ್ಕವರಿಗ.

ಚಿರಂಜೀವಿ ಸೌಭಾಗ್ಯವತಿ ಕುಂಕುಮಶೋಭಿತೆಯಾದ ಸಾವಿತ್ರಮ್ಮನಿಗೆ
ಚಿ॥ ಸೌ॥ ಲಕ್ಷ್ಮಿಯು ನೋಡಿಕೊಳ್ಳತಕ್ಕ ಬಗ್ಗೆ.

10. ಪರರಿಗೆ ಬರೆಯತಕ್ಕ ಮರ್ಯಾದೆ :—

ಮಹಾರಾಜ ರಾಜಶ್ರೀ ರಾಮರಾಯರವರ ಚರಣಸನ್ನಿಧಾನಂಗಳಿಗೆ
ಮಹಾರಾಜಶ್ರೀ ರಾಮಣ್ಣನವರ ಸನ್ನಿಧಾನಕ್ಕೆ.
ಮಹಾರಾಜಶ್ರೀ ರಾಮಣ್ಣನವರ ಸಮಕ್ಷಮಕ್ಕೆ.

ರಾಜಮಾನ್ಯ ರಾಜಶ್ರೀ.................................................

ರಾಜಶ್ರೀ ನಮ್ಮ ರಾಮಣ್ಣನವರಿಗೆ.

ಇವೆಲ್ಲಾ ಲೌಕಿಕರಿಗೆ ಬರೆಯತಕ್ಕ ವಿಳಾಸಗಳು. 'ರಾಜಶ್ರೀ' ಎಂದು ಬರೆಯುವುದು ವಯಸ್ಸಿನಲ್ಲಿಯೋ ಅಥವಾ ಸ್ಥಿತಿಯಲ್ಲಿಯೋ ಸ್ವಲ್ಪ ಕಡಮೆಯಾಗಿರುವವರಿಗೆ ಮಾತ್ರ ಬರೆಯತಕ್ಕುದು. "ಚಿರಂಜೀವಿ ರಾಜಶ್ರೀ ನಮ್ಮ ರಂಗಣ್ಣನಿಗೆ" ಎಂದು ಬರೆಯಬಹುದು.

11. ವೈದಿಕರಿಗೆ :—

ವೇದಮೂರ್ತಿಗಳಾದ ಬ್ರಹ್ಮಶ್ರೀ ರಾಮಶಾಸ್ತ್ರಿಗಳವರ ಚರಣ ಸನ್ನಿಧಾನಂಗಳಿಗೆ.

ವೇದಮೂರ್ತಿ ರಾಮ ಶಾಸ್ತ್ರಿಗಳವರ ಸನ್ನಿಧಾನಕ್ಕೆ.

ಇದಕ್ಕಿಂತಲೂ ವಿಶೇಷ ವಿನಯದೊಡನೆ ಬರೆಯಬೇಕೆಂದರೆ :

ಶ್ರೀಮದ್ಯಜನಯಾಜನಾಧ್ಯಯನಾಧ್ಯಾಪನ ದಾನಪ್ರತಿಗ್ರಹ ಷಟ್ಕರ್ಮ ನಿರತರಾದಂತಹ ಬ್ರಹ್ಮಶ್ರೀ.......................................

ಶ್ರೀಮದ್ಯಜನಯಾಜನಾದಿ ಷಟ್ಕರ್ಮಸಹಿತರಾದ ವೇದಮೂರ್ತಿ

..............................................................

ಬ್ರಾಹ್ಮಣೇತರರು ಲೌಕಿಕರಲ್ಲದಿದ್ದರೂ, ಅವರಿಗೆ ಈ ಒಕ್ಕಣೆಯನ್ನು ಬರೆಯತಕ್ಕ ಪದ್ಧತಿ ಇಲ್ಲ.

12. 11ನೇ ಪ್ರಕರಣದಲ್ಲಲ್ಲದೆ ಮೇಲೆ ಹೇಳಿರುವ ನಮೂನೆಗಳನ್ನು ಜಾತಿಭೇದವಿಲ್ಲದೆ ಸರ್ವರೂ ಉಪಯೋಗಿಸಬಹುದು. ಬ್ರಾಹ್ಮಣೇತರರಿಗೆ ಅವರವರ ಕಸಬು, ಸ್ಥಿತಿ, ಮುಂತಾದ ಗುಣಗಳಿಗನುಸಾರವಾಗಿ ಬರೆಯತಕ್ಕ ಕೆಲವು ನಮೂನೆಗಳಿವೆ. ಅವು ಯಾವುವೆಂದರೆ;

ಶ್ರೀಮತ್ಸಕಲಗುಣ ಸಂಪನ್ನರಾದ ಸಕಲ ಧರ್ಮ ಪ್ರತಿಪಾಲಕರಾದ ಸಕಲ ರಾಜಸ್ಥಾನ ಪೂಜಿತರಾದ.......................ಗೆ

ಶ್ರೀಮತ್ಸಕಲಗುಣ ಸಂಪನ್ನರಾದ ರಾಜಮಾನ್ಯ ರಾಜಶ್ರೀ.........

ಶ್ರೀಮತ್ಸಕಲಗುಣ ಸಂಪನ್ನರಾದ...............ಬಂಧುಜನ ಚಿಂತಾಮಣಿಗಳಾದ....................................ಗೆ

ರಾಜಪೂಜಿತ ರಾಜಮಾನ್ಯ ರಾಜಶ್ರೀ..............................ಗೆ.
ಶ್ರೀಮತ್ಸಕಲಗುಣ ಸಂಪನ್ನರಾದಂತಾ.. ... ......................ಗೆ.
ಅಖಂಡಿತಲಕ್ಷ್ಮ್ಯಲಂಕೃತ ರಾಜಮಾನ್ಯ ರಾಜಶ್ರೀ... .......... ..ಗೆ
ಶ್ರೀಮತ್ಸಕಲಗುಣ ಸಂಪನ್ನರಾದ ಅಖಂಡಿತೈಶ್ವರ್ಯಭೂಷಿತರಾದ....
........... .............................. ... ........................ಗೆ.

## ಬರೆಯುವವರ ಹೆಸರು.

13. ಬರೆಯುವವರ ಹೆಸರಿನ ವಿಷಯದಲ್ಲಿಯೂ ಸಮಯಾನುಸಾರವಾದ ನಿಬಂಧನೆಗಳಿವೆ. ಬಂಧುಜನರಲ್ಲಿ ಹಿರಿಯರಿಗೆ ಬರೆಯುವಾಗ :—

ಬಾಲಕ ರಾಮನು ಮಾಡುವ ವಿಜ್ಞಾಪನೆ.
ಬಾಲಕ ರಾಮಣ್ಣನು ಮಾಡುವ ನಮಸ್ಕಾರ ಪೂರ್ವಕ ವಿಜ್ಞಾಪನೆ.

ಇತರರಿಗೆ :—

ಸೇವಕ ರಂಗಣ್ಣನ ವಿಜ್ಞಾಪನೆಗಳು.
ಸೇವಕ ರಂಗಣ್ಣನು ಮಾಡುವ ಅನೇಕ ಸಾಷ್ಟಾಂಗ ನಮಸ್ಕಾರಗಳು
ಸೇವಕನ ಬಿನ್ನಹ.
ತಮ್ಮ ಮಿತ್ರನಾದ.. .........ನ ವಿಜ್ಞಾಪನೆ.
ರಾಮಣ್ಣನ ಶರಣಾರ್ತಿ.
ಆಜ್ಞಾಧಾರಕ................ಬಿನ್ನಹ.

ಬಂಧುಗಳಲ್ಲಿ ಕಿರಿಯುವರಿಗೆ :—

ರಾಮಶಾಸ್ತ್ರಿ ಮಾಡುವ ಅನೇಕ ಆಶೀರ್ವಾದಗಳು.
............ . .ವೇದೋಕ್ತ ಆಶೀರ್ವಚನಗಳು.
ರಂಗಣ್ಣನ ಆಶೀರ್ವಾದ.

ಇತರರಲ್ಲಿ ಕಿರಿಯುವರಿಗೆ :—

ನಾರಾಯಣರಾಯರು ಬರಸಿ ಕಳುಹಿಸುವ ವಿವರ.
ರಾಮಣ್ಣನ ವಿನಯಾರ್ಥ.

## ಸ್ಥಳ, ಕಾಲ.

14. ಸ್ಥಳ ಮತ್ತು ಕಾಲವನ್ನು ನಮ್ಮವರು ಬರೆಯುವ ಕಾಗದದಲ್ಲಿ ಬರೆಯುವವರ ಹೆಸರು ವಂದನೆ ಮುಗಿದ ತರುವಾಯ ಬರೆಯುವುದು ವಾಡಿಕೆಯಾಗಿದೆ.

ಈ ನಂದನ ಸಂವತ್ಸರದ ಆಶ್ವಯುಜ ಶು|| ೧೦ ವರೆಗೆ ಈ ಚನ್ನಪಟ್ಟಣದಲ್ಲಿ.......................................................
............ಶು|| ೧೦ ಗುರುವಾರದ ವರೆಗೆ ಚನ್ನಪಟ್ಟಣದಲ್ಲಿ.
ಈ ಜೂನ್ ತಿಂಗಳು 5ನೇ ತಾರೀಖು ಭಾನುವಾರದ ವರೆಗೆ ಇಲ್ಲಿ.

ನಡುವೆ ಇದ್ದರೆ ಕಾಗದಗಳ ತಾರೀಖು ಬೇಗ ಕಣ್ಣಿಗೆ ಕಾಣುವುದಿಲ್ಲವಾದುದರಿಂದ, ಇಂಗ್ಲೀಷ್ ಕಾಗದಗಳಲ್ಲಿ ಸ್ಥಳ ಮತ್ತು ತಾರೀಖನ್ನು ಕಾಗದದ ಆದಿಯಲ್ಲಿ ಬಲಗಡೆ ತುದಿಯಲ್ಲಿ ಅಥವಾ ಅಂತ್ಯದ ಎಡಗಡೆ ಕೊನೆಯಲ್ಲಿ ಬರೆಯುವುದು ಪದ್ಧತಿಯಾಗಿದೆ. ಕನ್ನಡ ಕಾಗದಗಳಲ್ಲಿಯೂ ಇದನ್ನೇ ಅನುಸರಿಸುವುದು ಅನುಕೂಲವಾಗಿ ತೋರುತ್ತದೆ. ಇದನ್ನು ಬರೆಯುವ ವಿಧ :—

ಬೆಂಗಳೂರು,
ನಂದನ ಸಂ|| ಆಶ್ವಯುಜ ಶು|| ೧೦.

ಬೆಂಗಳೂರು ಚಿಕ್ಕಪೇಟೆ,
18ನೇ ಜುಲೈ, 1893.

'ಬೆಂಗಳೂರು ಚಿಕ್ಕಪೇಟೆ' ಹೀಗೆ ಊರು ಬೀದಿ ಎರಡನ್ನೂ ಬರೆಯುವುದರಿಂದ, ಕಾಗದವನ್ನು ಓದಿಕೊಂಡವರು ಪ್ರತ್ಯುತ್ತರವನ್ನು ಬರೆಯುವುದಕ್ಕೆ ಮೇಲುವಿಳಾಸವನ್ನು ತಿಳಿದುಕೊಳ್ಳಬಹುದು.

## ಮರ್ಯಾದೆಯ ಮಾತುಗಳು.

15. ನಮ್ಮವರ ಪದ್ಧತಿಯ ಪ್ರಕಾರ ಅಶುಭಸೂಚಕವಲ್ಲದ ಕಾಗದಗಳಲ್ಲೆಲ್ಲಾ ಆದಿಭಾಗದಲ್ಲಿ ಕ್ಷೇಮಸೂಚಕವಾದ ಮಾತುಗಳಿರಬೇಕು. ಇದನ್ನು ಬರೆಯುವ ಮಾರ್ಗ ;—

> ನಂದನ ಸಂವತ್ಸರದ ಆಶ್ವಯುಜ ಶು|| ೧೦ ವರೆಗೆ ಇಲ್ಲಿ ಚಿರಂಜೀವಿಗಳು ಸೌಭಾಗ್ಯವತಿಗಳೂ ಸಹಿತವಾಗಿ ನಾನು ತಮ್ಮ ಆಶೀರ್ವಾದದಿಂದ ಕ್ಷೇಮವಾಗಿದೇನೆ. ಅಲ್ಲಿ ಸರ್ವರ ಸಮೇತ ತಮ್ಮ ನಿರಂತರ ಸುಕ್ಷೇಮಾತಿಶಯಂಗಳಿಗೆ ಆಗಿಂದಾಗ್ಗೆ ಬರೆಸಿ ಕಳುಹಿಸುತ್ತಿರಬೇಕೆಂದು ಕೋರುತ್ತೇನೆ. ಸಾಂಪ್ರತ.

ದೊಡ್ಡವರಿಗೆ ಬರೆಯುವಾಗ “ತಮ್ಮ ಆಶೀರ್ವಾದದಿಂದ ನಾನು ಕ್ಷೇಮ” ವೆಂದು ಬರೆಯುವುದು ಸರಿ. ಸಂದರ್ಭಾನುಸಾರವಾಗಿ ಇದನ್ನು ಬಿಡಬಹುದು; ಅಥವಾ ‘ತಮ್ಮ ಅನುಗ್ರಹದಿಂದ’ ಎನ್ನುವದು ಮುಂತಾದ ಮಾತುಗಳನ್ನು ಉಪಯೋಗಿಸಬಹುದು. ಆಶ್ರಿತರು ತಮ್ಮ ಗೃಹಸ್ಥರಿಗೆ ಬರೆದುಕೊಳ್ಳುವಾಗ “ತಮ್ಮ ಚನ್ನಪ್ರಭಾವದಿಂದ” ಎಂದು ಬರೆಯುವುದುಂಟು. ಮೇಲೆ ಹೇಳಿದ ಬಕ್ಕಣೆ ಬಹಳ ಉದ್ದವೆಂದು ತೋರಿದಾಗ ಹೀಗೆ ಬರೆಯಬಹುದು :—

> ಈ ವರೆಗೆ ಉಭಯ ಕುಶಲೋಪರಿ, (ಅಂದರೆ, ‘ನಿಮ್ಮ ನಮ್ಮ ಕ್ಷೇಮದ ಹಂಕೆಯನಂತರ’)

## ಬರೆಯತಕ್ಕ ವಿಷಯ.

17. ಮುಂದೆ ಬರೆಯಬೇಕಾದ ಮುಖ್ಯ ಸಂಗತಿಗಳನ್ನು ಬರೆಯತಕ್ಕದ್ದು. ಇದರ ವಿಷಯ ಹೀಗೆಯೇ ಬರೆಯಬೇಕೆಂಬ ನಿಬಂಧನೆ ಹೇಳುವುದಕ್ಕಾಗುವದಿಲ್ಲ. ಇಲ್ಲಿ ಹೇಳಬೇಕಾದ ಮುಖ್ಯಾಂಶಗಳನ್ನು ಈ ಪುಸ್ತಕದ ಆದಿಭಾಗದಲ್ಲಿಯೇ ಹೇಳಿದೆ. ಮುಂದೆ ತೋರಿಸಿರುವ ನಮೂನೆಗಳಿಂದ ಬರೆಯುವ ರೀತಿಯನ್ನು ತಕ್ಕಮಟ್ಟಿಗೆ ಗ್ರಹಿಸಿಕೊಳ್ಳಬಹುದು.

## ಕೊನೆಯಲ್ಲಿ ಬರೆಯುವ ಮಾತುಗಳು.

17. ಮೊದಲು ಬರೆದಿರುವ ವಂದನೆಯ ಮಾತನ್ನೇ ಬರೆಯಬೇಕು. ಹೇಗೆಂದರೆ :—

ಇಂತೀ ವಿಜ್ಞಾಪನೆ.
ಇಂತೀ ಬಿನ್ನಹ.
ಇಂತೀ ವಿನಯಪೂರ್ವ.
ಇಂತೀ ಸಾಷ್ಟಾಂಗ ನಮಸ್ಕಾರಗಳು.
ಇಂತೀ ಆಶೀರ್ವಾದಗಳು ............ಇತ್ಯಾದಿ.

ಮೊದಲು ಹೆಸರು ಬರೆಯದಿದ್ದರೆ "ರಾಮಯ್ಯನ ವಿಜ್ಞಾಪನೆ." 'ರಾಮಶಾಸ್ತ್ರಿಯ ಆಶೀರ್ವಾದ" ಎಂದು ಮುಂತಾಗಿ ಕೊನೆಯಲ್ಲಿ ಬರೆಯಬೇಕು. ಮೊದಲೇ ಹೆಸರು ಬರೆದಿದ್ದರೆ ಇದು ಆವಶ್ಯಕವಲ್ಲ. ನಮ್ಮಲ್ಲಿ ಕೆಲವರು ಸರ್ಕಾರದ ಉದ್ಯೋಗ ಮುಂತಾದ್ದನ್ನುಳ್ಳವರು ತಮ್ಮ ಉದ್ಯೋಗದ ಹೆಸರನ್ನು ಹಾಕಿಕೊಳ್ಳುತ್ತಾರೆ. ಇದು ಗುರ್ತು ತಿಳಿಯದವರಿಗೆ ತಾವು ಇಂತವರೆಂದು ಗೊತ್ತಾಗಿ ತಿಳಿಸುವುದಕ್ಕೆ ಅಗತ್ಯವಾದಾಗ ತಪ್ಪಲ್ಲ. ತಿಳಿದಿರುವವರಿಗೆ ತಮ್ಮ ಕಸಬಿಗೆ ಸಂಬಂಧವಿಲ್ಲದ ಕ್ಷೇಮಸಮಾಚಾರದ ಕಾಗದಗಳಲ್ಲಿ ತಮ್ಮ ಅಧಿಕಾರದ ಹೆಸರುಗಳನ್ನು ಬರೆಯುವವರು, ತಮ್ಮ ಐಶ್ವರ್ಯವನ್ನೆಲ್ಲರಿಗೂ ತೋರಿಸಿಕೊಳ್ಳಬೇಕೆಂದು ಆಶಿಸುವ ಹೆಮ್ಮೆಗಾರರಿಗೆ ಸಮಾನರು.

## ಮೇಲಿನ ವಿಳಾಸ.

18. ಕಾಗದಗಳನ್ನು ಮಡಿಸುವುದು ಲಕೋಟನ್ನು ಹರಿಯುವಾಗ ಕಾಗದದಲ್ಲಿ ಬರೆದಿರುವ ಭಾಗವು ಹರಿದುಹೋಗದಂತೆ ನೋಡಿ ಮಡಿಸಬೇಕು. ಈಗ ಪೋಸ್ಟಾಫೀಸಿಗೆ ಹಾಕುವ ಕಾಗದಗಳನ್ನೆಲ್ಲಾ ಅರ್ಧಾಣೆಯ ಲಕೋಟುಗಳಲ್ಲಿ ಹಾಕಿ ಕಳುಹಿಸುವುದು ಬಹಳ ಒಳ್ಳೇದು. ಲಕೋಟಿನ ಮೇಲೆ ಎಡಗಡೆ ಮೂಲೆಯಲ್ಲಿ 'ಕ್ಷೇಮ' ಎಂಬ ಮಾತು, ಮರಣಸಮಾಚಾರದ ಕಾಗದಗಳಿಗೆ ವಿನಾ, ಮಿಕ್ಕವುಗಳಿಗೆಲ್ಲಾ ಬರೆಯ

ತಕ್ಕದ್ದು. ನಮ್ಮಲ್ಲಿ ಲಕೋಟಿನ ಮೇಲೆ ಸಾಧಾರಣವಾಗಿ ಬರೆಯುವ ನಮೂನೆಯು ಚೆನ್ನಾಗಿಲ್ಲ. ಇಂಗ್ಲಿಷ್ ಪದ್ಧತಿಗನುಸಾರವಾಗಿ ಬರೆಯಬಹುದಾದ ನಮೂನೆಯನ್ನು ಈ ಕೆಳಗೆ ತೋರಿಸಿದೆ:—

ಕ್ಷೇಮ. ಸ್ಟಾಂಪು.

ದೊಡ್ಡಪೇಟೆಯ ಬೀದಿ

೪ ನೇ ನಂ॥ ಮನೆಯಲ್ಲಿರುವ

ಮ॥ ರಂಗಣ್ಣನವರ ಸ॥ ಕ್ಕೆ.

ಬಳ್ಳಾರಿಗೆ.

"ಕುಶಲ" ಅಥವಾ "ಕ್ಷೇಮ" ಎಂಬ ಮಾತುಗಳನ್ನು ಕೆಳಗೆ ಎಡಗಡೆ ಮೂಲೆಯಲ್ಲಾದರೂ ಬರೆಯಬಹುದು. ದೊಡ್ಡ ಊರುಗಳಾದರೆ ಅವುಗಳ ಹೆಸರನ್ನು ಮಾತ್ರ ಬರೆದರೆ ಸಾಕು. ಡಿಕ್ಟ್ರಿಗೆ ಮುಖ್ಯ ನಗರ ಅಂದರೆ ಕಲೆಕ್ಟರ್ ಅಥವಾ ಡೆಪ್ಯುಟಿ ಕಮಿಷನರ್ ಇರುವ ಊರುಗಳಲ್ಲದಿದ್ದರೆ, ಅವು ಯಾವ ಡಿಸ್ಟ್ರಿಕ್ಟಿಗೆ ಸೇರಿವೆಯೋ ಆ ಹೆಸರುಗಳನ್ನೂ ಕೊನೆಯಲ್ಲಿ ಅಂದರೆ ಊರಿನ ಕೆಳಗೆ ಬರೆಯುವುದು ಮೇಲು. ಒಂದೇ ಹೆಸರಿನವು ಅನೇಕ ಸ್ಥಳಗಳಿರುವಾಗ ಈ ತಪಸೀಲನ್ನು ಬರೆಯುವುದು ಅತ್ಯಾವಶ್ಯಕ. ಪೋಸ್ಟಾಫೀಸ್ ಇಲ್ಲದ ಊರುಗಳಿಗೆ ಬರೆಯುವಾಗ ಯಾವ ಪೋಸ್ಟಾಫೀಸಿಗೆ ಹೋಗಬೇಕೋ ಅದನ್ನೂ ಬರೆಯಬೇಕು. ಅದು ತಿಳಿಯದಿದ್ದರೆ ತಾಲ್ಲೂಕಿನ ಹೆಸರು ಸಾಕಾಗುವುದು. ಇಂಗ್ಲಿಷ್ ಅಕ್ಷರ ತಿಳಿದವರು ಈ ಊರುಗಳ ಹೆಸರನ್ನು ಇಂಗ್ಲೀಷಿನಲ್ಲಿ ಹಾಕಿದರೆ ಒಳ್ಳೇದು. ಕನ್ನಡ ಸೀಮೆಯಿಂದ ಹೊರಗೆ ಹೋಗುವ

ಕಾಗದಗಳಿಗೆಲ್ಲಾ ಎಲ್ಲಿಗೆ ಹೋಗಬೇಕೋ ಅಲ್ಲಿಯ ಭಾಷೆಯಲ್ಲಾಗಲಿ, ಇಂಗ್ಲಿಷ್ ಭಾಷೆಯಲ್ಲಾಗಲಿ ಮೇಲು ವಿಳಾಸವನ್ನು ಬರೆಯಬೇಕು. ಟಪಾಲ್ ಆಫೀಸುಗಳ ಉದ್ಯೋಗಸ್ಥರಿಗೆ ಅನೇಕ ಲಕೋಟೆಗಳನ್ನು ನೋಡಿ ವಿಂಗಡಿಸುವ ತೊಂದರೆ ಇರುವುದರಿಂದ ಅವರಿಗೆ ಬಹು ಜಾಗ್ರತೆಯಾಗಿ ತಿಳಿಯುವಂತೆ ಮೇಲುವಿಳಾಸವನ್ನು ಎಷ್ಟು ಪರಿಷ್ಕಾರವಾಗಿ ಬರೆದರೆ ಅಷ್ಟು ಒಳ್ಳೇದು.

ಕುಶಲ. ಸ್ಟಾಂಪು.

ಲಕ್ಷ್ಮೀನೃಸಿಂಹದೇವಸ್ಥಾನದ ಬಳಿ ಇರುವ

ವೇ|| ನರಸಿಂಹ ಭಟ್ಟರ ಸ|| ಕ್ಕೆ.

(ಮೈಸೂರು ಡಿಸ್ಟ್ರಿಕ್ಟ್) ತಿರಮಕೂಡ್ಲು ನರ್ಸೀಪುರ.

ಮೇಲೆ ಸುಮಾರು ಅರ್ಧಸ್ಥಳವನ್ನು ಬರಿದಾಗಿ ಬಿಟ್ಟಿರಬೇಕು. ಇದು ಕಣ್ಣಿಗೆ ಅಂದವಾಗಿ ಕಾಣುವುದಲ್ಲದೆ ಸ್ಟಾಂಪು ಹತ್ತಿಸುವುದಕ್ಕೂ ಪೋಸ್ಟಾಫೀಸಿನ ಮುದ್ರೆ ಒತ್ತುವುದಕ್ಕೂ ಅನುಕೂಲವಾಗಿರುವುದು. ಊರಿನ ಹೆಸರು ಕೆಳಗೆ ಹಾಕುವುದರಿಂದ ಪೋಸ್ಟಾಫೀಸಿನವರಿಗೆ ಕಾಗದವನ್ನು ಕಳುಹಿಸತಕ್ಕ ಸ್ಥಳದ ಹೆಸರು ಸುಲಭವಾಗಿ ಗೊತ್ತಾಗುವುದು ; ಕಾಗದ ತಲಪದೆ ಹೋಗುವುದಕ್ಕೆ ಕಾರಣ ಕಡಮೆಯಾಗುವುದು. ಪೋಸ್ಟಾಫೀಸಿನವರಿಗೆ ಸುಲಭವಾಗಿ ಕಾಣುವಂತೆ ಸ್ಟಾಂಪನ್ನು ಯಾವಾಗಲೂ ಮೇಲುವಿಳಾಸ ಬರೆದ ಕಡೆಯೇ ಹಚ್ಚಿಸಬೇಕು.

## ಪೋಸ್ಟಾಫೀಸಿನ ವಿಷಯ.

19. ಕಾಗದಗಳನ್ನು ಪೋಸ್ಟಾಫೀಸಿನ ಮೂಲಕವಾಗಿ ಕಳುಹಿಸುವಾಗ ಅವುಗಳ ತೂಕಕ್ಕೆ ಸರಿಯಾದ ಸ್ಟಾಂಪನ್ನು ಹಾಕಬೇಕು. ಪೂರ್ವದಲ್ಲಿ ಟಪಾಲಿನ ಏರ್ಪಾಡೇನೂ ಆಗದೆ ಇದ್ದಾಗ ಒಂದು ಕಾಗದ ಕ್ಕೋಸ್ಕರ ಬಹಳ ದ್ರವ್ಯವನ್ನು ಖರ್ಚುಮಾಡಿ, ಒಬ್ಬ ಆಳನ್ನೇ ಕಳುಹಿಸಬೇಕಾಗಿತ್ತು. ಈಗ ಈ ಭರತಖಂಡದೊಳಗೆ ಎಲ್ಲಿಂದ ಎಲ್ಲಿಗೆ ಆದರೂ ಕಾಲಾಣೆ ಅಥವಾ ಅರ್ಧಾಣೆಗೆ ಕಾಗದವನ್ನು ತಲಪಿಸಬಹುದು. ಈ ರೀತಿಯ ಸೌಲಭ್ಯ ಉಂಟಾಗಿರುವುದರಿಂದ ಅನೇಕ ಲಕ್ಷ ಕಾಗದಗಳು ಪ್ರತಿ ದಿನವೂ ಊರಿಂದೂರಿಗೆ ತೆರಳುತಿವೆ ; ಮತ್ತು ಇಷ್ಟು ಕಾಗದಗಳು ಹೆಚ್ಚಿರುವುದರಿಂದ ಅದರಲ್ಲಿ ಹುಟ್ಟುವ ಹಣದಿಂದಲೇ ಸರ್ಕಾರದವರು ಈ ಇಲಾಖೆಯನ್ನೆಲ್ಲಾ ನಷ್ಟವಿಲ್ಲದೆ ಕಾಪಾಡಬಹುದಾಗಿದೆ.

20. ಕೆಲವು ಸಂವತ್ಸರಗಳಿಂದ ಈಚೆಗೆ ಟಪಾಲ್ ಮೂಲಕವಾಗಿ ಕಳುಹಿಸುವುದಕ್ಕೆ ಕಾಲಾಣೆ ಬೆಲೆಯುಳ್ಳ "ಪೋಸ್ಟ್ ಕಾರ್ಡ್" ಎಂಬ ಚೀಟಿಗಳನ್ನು ಮಾಡಿದಾರೆ. ಇದರಲ್ಲಿ ಬರೆದಿರುವ ವಿಷಯವನ್ನು ಸಿಕ್ಕಿದವರು ಓದಿಕೊಳ್ಳುವುದಕ್ಕೆ ಸಾಧ್ಯವಾಗಿರುವುದರಿಂದ, ರಹಸ್ಯವಾಗಿರಬೇಕೆಂಬ ಸಂಗತಿಗಳನ್ನು ಇಂತಾ ಚೀಟಿಯ ಮೇಲೆ ಬರೆಯಕೂಡದು. ದೊಡ್ಡ ದೊಡ್ಡ ಪೋಸ್ಟಾಫೀಸಿನಲ್ಲಿ ಇಂತವು ಅನೇಕ ಬರುವುದರಿಂದ, ಅಲ್ಲಿಯ ಉದ್ಯೋಗಸ್ಥರು ಅವನ್ನು ಓದಿಕೊಳ್ಳಲಾರರು. ಆದರೆ ಯಾವುದಾದರೂ ಅಲ್ಪ ಸಂಗತಿಗಳನ್ನು ಮಾತ್ರವೇ ಇವುಗಳಲ್ಲಿ ಬರೆಯಬಹುದು. ಮತ್ತು ಮರ್ಯಾದೆಗೆ ಅರ್ಹರಾಗಿಯಾಗಲಿ, ನಮಗಿಂತ ಮೇಲ್ಪಟ್ಟವರಾಗಿಯಾಗಲಿ ಇರುವವರಿಗೂ, ನಮಗೆ ವಿಶೇಷವಾಗಿ ಪರಿಚಯವಿಲ್ಲದವರಿಗೂ ಇಂತಾ ಚೀಟಿಗಳನ್ನು ಬರೆಯುವುದು ಅನುಚಿತ. ಈ ಪೋಸ್ಟ್ ಕಾರ್ಡುಗಳ ಮುದ್ರೆ ಇರುವ ಕಡೆಯಲ್ಲಿ ಮೇಲುವಿಳಾಸ ಬರೆಯಲ್ಪಡಬೇಕು. ಪೋಸ್ಟು ಮುದ್ರೆಯಿಲ್ಲದ ಕಾರ್ಡುಗಳಿಗೆ ಕಾಲಾಣೆಯ ಸ್ಟಾಂಪನ್ನು ಹಚ್ಚಿಸಿ ಅವನ್ನೂ ಹೀಗೆ ಉಪಯೋಗಿಸಬಹುದು.

21. ಕಾಗದಗಳ ಲಕೋಟೆಗಳಿಗೆ ಒಂದು ರೂಪಾಯಿನ ತೂಕ

ದವರೆಗೆ ಅರ್ಧಾಣೆ, 1 ರೂಪಾಯಿನ ಮೇಲೆ 10 ರೂಪಾಯಿನ ತೂಕದವರೆಗೆ 1 ಆಣೆ, ಅದರ ಮೇಲೆ ಪ್ರತಿ 10 ರೂಪಾಯಿನ ತೂಕಕ್ಕೂ 1 ಆಣೆಯಂತೆ, ಸ್ಟಾಂಪುಗಳನ್ನು ಹಚ್ಚಬೇಕು. ತೂಕದಲ್ಲಿ ವಿಷಮವಾಗಿ ರೂಪಾಯಿನ ಭಿನ್ನಾಂಶ ಉಳಿದರೆ, ಅದನ್ನು 1 ರೂಪಾಯಿನಂತೆ ಭಾವಿಸಬೇಕು.

22. ಕಾಗದಗಳಿಗೆ ತಕ್ಕ ಸ್ಟಾಂಪನ್ನು ಹಾಕದಿದ್ದರೆ, ಅವನ್ನು ಪಡೆಯುವವರು ಎರಡರಷ್ಟು ಹಾಸಲನ್ನು ಕೊಡಬೇಕಾಗುವುದು. ಪರ ಜನರಿಗೆ ಕಾಗದಗಳನ್ನು ಬರೆಯುವಾಗ ಎಂದಿಗೂ ಸ್ಟಾಂಪನ್ನು ಸರಿಯಾಗಿ ಹಾಕದೆ ಕಳುಹಿಸಕೂಡದು. ಅರ್ಧಾಣೆಯನ್ನು ಖರ್ಚು ಮಾಡುವುದು ಬಹಳ ದೊಡ್ಡದೆಂದು ಎಣಿಸುವವರು, ನಾವು ಓದಿಕೊಂಡರೆ ನಮಗೆ ಪ್ರಯೋಜನಕ್ಕೆ ಬರುವ ಸಂಗತಿಗಳನ್ನು ಕಾಗದದಲ್ಲಿ ಬರದಿರಲಾರರೆಂದು, ಯಾರಾದರೂ ಊಹಿಸಿಕೊಳ್ಳಬಹುದು. ಅಪಲ್ಲದೆ, ಬರೀ ಲಕೋಟನ್ನು ಕಳುಹಿಸುವಾತನು ಅರ್ಧಾಣೆಗೆ ಗತಿಯಿಲ್ಲದವನೆಂತಲೋ ಅವನ್ನು ಓದಿಕೊಳ್ಳುವವನು ಬರೆದಿರುವವನ ಗಣನೆಯಲ್ಲಿ ಅರ್ಧಾಣೆ ಬಾಳಲಾರನೆಂತಲೋ, ಅರ್ಥವಾಗುವುದು. ಗುರ್ತಿಲ್ಲದವರಿಂದ ಯಾವ ಸಂಗತಿಯನ್ನಾದರೂ ತಿಳಿದುಕೊಳ್ಳಬೇಕೆಂದು ಕಾಗದ ಬರೆದರೆ, ಪ್ರತ್ಯುತ್ತರಕ್ಕೋಸ್ಕರ ಒಂದು ಅರ್ಧಾಣೆಯ ಸ್ಟಾಂಪನ್ನಾಗಲಿ, ತಮ್ಮ ಮೇಲುವಿಳಾಸವನ್ನು ಬರೆದಿರುವ ಅರ್ಧಾಣೆಯ ಲಕೋಟನ್ನಾಗಲಿ ಅದರೊಡನೆ ಇಟ್ಟು ಕಳುಹಿಸಬೇಕು. ಪೋಸ್ಟು ಕಾರ್ಡುಗಳು ಎರಡು ಜತೆಯಲ್ಲಿರುವವುಗಳನ್ನು ಹೀಗೆ ಕಳುಹಿಸಬಹುದು.

23. ಪೋಸ್ಟಾಫೀಸಿನ ಮೂಲಕ ಇಷ್ಟು ಕಾಗದಗಳು ಹೋಗುತ್ತಿದ್ದರೂ, ಸರಿಯಾಗಿ ತಲಪದೆಹೋಗುವ ಕಾಗದಗಳು ಬಹಳ ಕೊಂಚವಾಗಿವೆ. ಆದರೂ ತಲಪುವುದನ್ನು ನಿಶ್ಚಯಪಡಿಸಿಕೊಳ್ಳಬೇಕಾದವರು, 2 ಆಣೆಯನ್ನು ಹೆಚ್ಚಾಗಿ ಕೊಟ್ಟು, ಕಾಗದಗಳನ್ನು ರಿಜಿಸ್ಟರ್ ಮಾಡಿಸಬಹುದು. ರಿಜಿಸ್ಟರ್ ಮಾಡಿಸಿದ ಕಾಗದಗಳಲ್ಲಿಯೂ ನೋಟು ಮುಂತಾದುವನ್ನಿಟ್ಟಿದ್ದು ಅವು ಕಳೆದು ಹೋದರೆ, ಪೋಸ್ಟಾಫೀಸಿನವರು ಅದಕ್ಕೆ ಜವಾಬ್ದಾರರಾಗುವುದಿಲ್ಲ. ಆದರೆ ಇಂತಾ ಕಾಗದಗಳನ್ನು

ವಿಶೇಷವಾದ ಜಾಗರೂಕತೆಯಿಂದ ತೆಗೆದುಕೊಂಡು ಹೋಗುವರು; ಪ್ರಾಯಶಃ ಅವು ಕಳದು ಹೋಗುವುದಿಲ್ಲ.

24. ಕಾಗದಗಳ ಲಕೋಟುಗಳನ್ನು ಹಚ್ಚಿಬಿಟ್ಟರೆ ಒಳಗಿರುವ ವಿಷಯು ಯಾರಿಗೂ ತಿಳಿಯದಂತೆ ಭದ್ರವಾಗಿದೆಯೆಂದು ಸಾಧಾರಣವಾಗಿ ತಿಳಿದುಕೊಳ್ಳುತ್ತಾರೆ. ತೆಳ್ಳಗಿರುವ ಕಾಗದದಲ್ಲಿ ಲಕೋಟು ಮಾಡಿದ್ದರೆ, ಒಳಗಿನ ಬರವಣಿಗೆಯನ್ನು ಸುಲಭವಾಗಿ ಓದಿಕೊಳ್ಳಬಹುದು. ಲಕೋಟುಗಳನ್ನು ಒಡೆದು ಪುನಃ ಹತ್ತಿಸದಂತೆ ಧೈರ್ಯವಾಗಿರಬೇಕಾದಾಗ ಅರಗಿನಿಂದ ಮೊಹರು ಮಾಡಬೇಕು; ಒಂದು ದಾರವನ್ನು ನಡುವೆ ಪೋಣಿಸಿ, ಅದರ ಗಂಟಿನ ಮೇಲೆ ಮೊಹರು ಮಾಡುವುದು ಇನ್ನೂ ಒಳ್ಳೆಯದಾದ ಉಪಾಯವು.

## ಕಾಗದಗಳ ನಮೂನೆಗಳು.

### 1.

### ಮಗು ಹುಟ್ಟಿದ ಸಮಾಚಾರಗಳು.

ಶ್ರೀ.

ಶ್ರೀಮತ್ಸಕಲಗುಣ ಸಂಪನ್ನರಾದ ರಾಜ
ಮಾನ್ಯ ರಾಜಶ್ರೀ ರಂಗರಾಯರವರ ಸನ್ನಿಧಾನಂಗಳಿಗೆ.

ತಮ್ಮ ಸೇವಕನಾದ ರಾಮರಾಯನು ಮಾಡುವ ಅನೇಕ ನಮಸ್ಕಾರಗಳು. ಇಲ್ಲಿ ಈ ವರೆಗೆ ಸರ್ವರೂ ಕ್ಷೇಮದಲ್ಲಿರುವೆವು. ಅಲ್ಲಿ ಚಿರಂಜೀವಿಗಳೂ ಸೌಭಾಗ್ಯವತಿಗಳೂ ಆದಿಯಾಗಿ ತಮ್ಮ ನಿರಂತರ ಸುಕ್ಷೇಮಾತಿಶಯಗಳನ್ನು ಆಗಿಂದಾಗ್ಗೆ ಪತ್ರಿಕಾದ್ವಾರಾ ತಿಳಿಯಪಡಿಸಿ ಮನಸ್ಸಂತೋಷವನ್ನುಂಟುಮಾಡುತಿರಬೇಕೆಂದು ಕೋರುತ್ತೇನೆ. ಸಾಂಪ್ರತ.

ಇಲ್ಲಿ ತಮ್ಮ ಸೊಸೆ ಚಿ॥ ಸೌ॥ ಕುಂಕುಮಶೋಭಿತಳಾದ ಸೀತಮ್ಮನು ಈ ನಂದನ ಸಂವತ್ಸರದ ಆಶ್ವಯುಜ ಬ॥ ೨ ಬುಧವಾರ ಹಗ

ಲು ೧೦ ಘಳಿಗೆ ಸಿಂಹಲಗ್ನದಲ್ಲಿ ಸುಖವಾಗಿ ಗಂಡುಮಗುವನ್ನು ಪ್ರಸುವಿಸಿರುತ್ತಾಳೆ. ಮಗುವೂ ಬಾಣಂತಿಯೂ ಸೌಖ್ಯವಾಗಿದಾರೆ. ಈ ಬಹುಳ ೧೩ ದಿನ ಮಂಗಳಸ್ನಾನವಾಗುವುದರಿಂದ ನಾಮಕರಣಕ್ಕೆ ಚಿ|| ರಾ|| ಶ್ರೀನಿವಾಸರಾಯರನ್ನು ಕರೆದುಕೊಂಡು, ತಾವು ಕುಟುಂಬಸಹಿತವಾಗಿ ಮೊದಲೇ ದಯಮಾಡಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡುತ್ತೇನೆ. ಸಕಲವೂ ತಿಳಿದ ಪ್ರಾಜ್ಞರಿಗೆ ವಿಶೇಷ ಬರೆಯುತಕ್ಕದ್ದೇನಿದೆ. ಈ ವಿವರವನ್ನು ಚಿತ್ತಕ್ಕೆ ಸರಿತರಬೇಕೆಂದು ಕೋರುವ ಸೇವಕನ

ಅನೇಕ ನಮಸ್ಕಾರಗಳು.

ಮೈಸೂರು,
ನಂದನ ಸಂ|| ಆಶ್ವಯುಜ ಬ|| ೩.

## 2.

### ಲಗ್ನಪತ್ರಿಕೆ.

ಶ್ರೀರಸ್ತು.

ಶ್ರೀಮದಖಂಡಿತೈಶ್ವರ್ಯ ಸಂಪನ್ನರಾದ ಬಂಧುಜನ
ಚಿಂತಾಮಣಿಗಳಾದ ಮಹಾರಾಜಶ್ರೀ............ಗೆ

ಸೇವಕ..............................................................................
..........................................................................ಸಾಂಪ್ರತ.

ಈ ಶಾಲೀವಾಹನಶಕ ೧೮೧೬ನೆ ಜಯನಾಮಸಂವತ್ಸರದ ಚೈತ್ರ ಬ|| ೩ ಸೋಮವಾರ ದಿವಿ ಘಳಿಗೆ ( ಘಂಟೆಗೆ ) ಸಲ್ಲುವ ವೃಷಭ ಲಗ್ನದಲ್ಲಿ ನನ್ನ ಕುಮಾರಿಯಾದ ಚಿ|| ಸೌಭಾಗ್ಯವತಿ ಸೀತೆಯನ್ನು ಬೆಂಗಳೂರಲ್ಲಿರುವ ವೇದಮೂರ್ತಿಗಳಾದ ಬ್ರಹ್ಮಶ್ರೀ ಶಿವರಾಮಶಾಸ್ತ್ರಿಗಳವರ ಕುಮಾರರು ಚಿ|| ರಾ|| ರಾಮಣ್ಣನವರಿಗೆ ಕೊಟ್ಟು ವಿವಾಹ ಬೆಳಸಬೇಕೆಂದು ಗುರುಹಿರಿಯರು ನಿಶ್ಚಯಿಸಿದಾರೆಯಾದಕಾರ

ಣ, ಈ ಶುಭ ಮುಹೂರ್ತಕ್ಕೆ ತಾವು ಪುತ್ರಮಿತ್ರಕಳತ್ರಾದಿಗಳೊಡನೆ (ಅಥವಾ—ಸಕುಟುಂಬ ಸಪರಿವಾರರಾಗಿ; ಅಥವಾ—ಕುಟುಂಬ ಪರಿವಾರ ಸಮೇತವಾಗಿ) ಲಗ್ನಕ್ಕೆ ಎರಡು ದಿವಸ ಮುಂಚೆಯೇ ದಯಮಾಡಿ ವಧೂವರರನ್ನಾಶೀರ್ವದಿಸಿ ಸೇವಕನನ್ನು ಕೃತಾರ್ಥನನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುವೆನು. (ಸಮಯೋಚಿತವಾಗಿ ಕಿರಿಯರು ಮುಂತಾದವರಿಗೆ ಬರೆಯಬೇಕಾದರೆ—ಮಂಟಪಶೋಭಾಯಮಾನವಂ ಮಾಡಿ ಮನಸ್ಸಂತೋಷಪಡಿಸಬೇಕೆಂದು ಕೋರುತ್ತೇನೆ.) ಈ ವಿವರವನ್ನು ಅಂತಃಕರಣಕ್ಕೆ ಸಂತರಬೇಕೆಂದು ಬೇಡುತ್ತೇನೆ.

ಇಂತೀ ವಿಜ್ಞಾಪನೆ.

## 3.

## ಊಟಕ್ಕೆ ಕರೆಯುವ ಕಾಗದ.

(ನಮ್ಮಲ್ಲಿಯೂ ಇಂಗ್ಲೀಷ್ ಜನರಲ್ಲಿರುವಂತೆ ಊಟಕ್ಕೆ ಪತ್ರಿಕೆಗಳ ಮೂಲಕವಾಗಿ ಕರೆಯುವ ಪದ್ಧತಿಯನ್ನವಲಂಬಿಸಿದರೆ ಚೆನ್ನಾಗಿದ್ದೀತು. ಈಗ ಎಷ್ಟು ದೂರವಲ್ಲಿರುವುವನಾದರೂ ಎರಡು ಮೂರು ಸಲ ಕರೆಯಬೇಕೆಂಬುವುದೂ, ಎಲ್ಲರೂ ಕ್ಲುಪ್ತವಾದ ಹೊತ್ತಿಗೆ ಸೇರದೆ ಇರುವುದೂ, ಇವೆಲ್ಲಾ ನಾಗರಿಕತೆ ಸಾಲದ ಚಿಹ್ನೆಗಳೆಂಬುವುದಕ್ಕೆ ಸಂದೇಹವಿಲ್ಲ. ಇದರಿಂದುಂಟಾಗುವ ತೊಂದರೆಯನ್ನು ಎಲ್ಲರೂ ಆಗಾಗ್ಗೆ ಅನುಭವಿಸಿರುವರು.) ಇದರ ನಮೂನೆ:—

ಕೃಷ್ಣವಿಳಾಸ,
ವೈಶಾಖ ಬ॥ ೩ ಭಾನುವಾರ.

ಮ॥ ರಾಮರಾಯರವರ ಸ॥ ಕ್ಕೆ.
ಉಭಯ ಕುಶಲೋಪರಿ.

ನಾಳೆ ನನ್ನ ಕುಮಾರ ಚಿ॥ ಕೃಷ್ಣನ ಮೊದಲನೆಯ ವರ್ಷದ ಹುಟ್ಟಿದ ದಿನವಾದ್ದರಿಂದ, ತಾವು ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ

ನಮ್ಮ ಮನೆಗೆ ಭೋಜನಕ್ಕೆ ದಯಮಾಡಿ ಮನಸ್ಸಂತೋಷಪಡಿಸಬೇಕೆಂಬುವುದು,

ತಮ್ಮ ಮಿತ್ರನಾದ
ರಂಗಣ್ಣನ ವಿಜ್ಞಾಪನೆ.

4.

ಕಾಹಿಲೆಯ ಸಮಾಚಾರ.

ತೀ॥ ಅಣ್ಣಯ್ಯನವರ ಚರಣ ಸ॥ ಕ್ಕೆ.

ಬಾಲಕಿಯ ವಿಜ್ಞಾಪನೆ.

೧೮೮೪ನೇ ಜನವರಿ ೫ನೇ ತಾ॥ ನ ವರೆಗೆ ಉಭಯಕುಶಲೋಪರಿ.

ನೀವು ಇಲ್ಲಿಂದ ಹೊರಡುವಾಗ ಮಾತೃಶ್ರೀಯವರಿಗೆ ದೇಹದಲ್ಲಿ ಸ್ವಲ್ಪ ಆಯಾಸವಾಗಿದ್ದದ್ದು ಸರಿಯಷ್ಟೆ. ಮೊನ್ನೆ ತುಲಾ ಸಂಕ್ರಮಣದ ದಿವಸ ನಾವೆಲ್ಲಾ ಹೇಳಿದರೂ ಕೇಳದೆ ನದಿಗೆ ಹೋಗಿ ಗಾಳಿಯಲ್ಲಿ ತಣ್ಣೀರು ಮುಳುಗಿ ಒದ್ದೆಯಲ್ಲಿ ಬಹಳ ಹೊತ್ತು ಇದ್ದದ್ದರಿಂದ ಆ ರಾತ್ರಿಯೇ ವಿಪರೀತವಾಗಿ ಜ್ವರಬಂದು ನಾಲಿಗೆಯ ಮೇಲೆ ದೋಷಕಾಣಿಸಿಕೊಂಡು ಪ್ರಜ್ಞೆ ತಪ್ಪಿತು. ಈಚೆಗೆ ಸ್ವಲ್ಪ ವಾಸಿಯಾಗಿದೆ. ಜ್ಞಾನ ಬಂದಾಗ ನಿಮ್ಮನ್ನು ಪದೇ ಪದೇ ಕೇಳುತ್ತಾರೆ. ತೀರ್ಥರೂಪರವರಿಗೆ ದಿಕ್ಕು ತೋರದೆಹೋಗಿದೆ. ಇನ್ನು ಯಾರು ಮನೆಯಲ್ಲಿ ಗಂಡಸರು ತಿಳಿದವರಾಗಿ ಇಲ್ಲದ್ದರಿಂದ ನಮಗೆ ಏನು ಮಾಡುವುದಕ್ಕೂ ಆಗದೆ ಇದೆ. ದೇವರ ದಯವೂ ನಮ್ಮಗಳ ಅದೃಷ್ಟವೂ ಹೇಗಿರುವುದೋ ಮುಂದೆ ತಿಳಿಯಬೇಕು. ಈ ಕಾಗದ ತಲಪಿದ ಮೇಲೆ ನಿಮಗೆ ಅಲ್ಲಿ ಜೀವ ನಿಲ್ಲುವುದಿಲ್ಲ. ಗಾಬರಿಪಡದೆ ಶರೀರಕ್ಕೆ ಬಹಳ ಆಯಾಸ ಮಾಡಿಕೊಳ್ಳದೆ ಜಾಗ್ರತೆಯಾಗಿ ಬಂದು ತಲಪಿದರೆ ನಮ್ಮಗಳಿಗೆಲ್ಲಾ ಧೈರ್ಯ ಉಂಟಾಗುವುದು.

ಇದು ನಿಮ್ಮ ಅತ್ಯಂತ ಪ್ರಿಯಳಾದ
ತಂಗಿಯ ವಿಜ್ಞಾಪನೆ

## 5.

### ಹುಟ್ಟಿದ ದಿವಸ ತಲಪತಕ್ಕ ಕಾಗದ.

ಶ್ರೀಮದಖಂಡಿತ ಲಕ್ಷ್ಮ್ಯಲಂಕೃತರಾದ ಮಿತ್ರಜನ
ಮನೋರಂಜಕರಾದ............................ಗೆ

ತಮ್ಮ ಪ್ರಿಯಮಿತ್ರ ಸದಾನಂದನ ವಿಜ್ಞಾಪನೆ.

ಉಭಯ ಕುಶಲೋಪರಿ........ಈ ಶುಭದಿವಸಕ್ಕೆ ಮಿತ್ರದಿಜ್ಮಂಡಲಕ್ಕೆ ಅಮೃತಾಂಶುವಿನೋಪಾದಿಯಲ್ಲಿ ತಾವು ಉದಯಿಸಿ ೨೫ ವರ್ಷಗಳು ಮುಗಿದವು. ಈ ಮಹೋತ್ಸವಕಾಲದಲ್ಲಿ ತಮ್ಮ ಹಿತಚಿಂತಕನಾದ ಸೇವಕನನ್ನು ಸ್ಮರಿಸಿಕೊಳ್ಳಲು ಇದರೊಡನೆ ಕಳುಹಿಸಿರುವ ಪುಸ್ತಕವನ್ನು ಸ್ವೀಕರಿಸಬೇಕೆಂದು ಬೇಡುವೆನು. ಇದರ ಮೌಲ್ಯವನ್ನು ರೂಪಾಯಿಗಳಲ್ಲಿ ಗಣಿಸಿದರೆ ಬಹಳ ಅಲ್ಪವಾದುದರಿಂದ ತಮ್ಮಂತಾ ಶ್ರೇಷ್ಠರಿಗ ಪರಿಗ್ರಹಯೋಗ್ಯವಾಗಿರಲಾರದು. ಕಳುಹಿಸಿದವನ ಭಕ್ತಿ ವಿಶ್ವಾಸದ ಪ್ರಮಾಣವನ್ನು ನೋಡಿ, ಅದರಂತೆ ಇದೂ ಅಪಾರವಾದುದೆಂದು ಎಣಿಸಬಹುದಾದಕಾರಣ ತಮ್ಮ ಸನ್ನಿಧಾನಕ್ಕೆ ಧೈರ್ಯವಾಗಿ ಒಪ್ಪಿಸಿರುವೆನು.

ಇಂತಾ ಸಂತೋಷ ದಿವಸಗಳು ಅನೇಕ ಬರಬೇಕೆಂಬುವುದೂ ತಮ್ಮ ಆರೋಗ್ಯ ಐಶ್ವರ್ಯಾದಿಗಳು ದಿನೇ ದಿನೇ ಶುಕ್ಲಪಕ್ಷದ ಚಂದ್ರನಂತೆ ಹೆಚ್ಚುತಿರಬೇಕೆಂಬುವುದೂ ಇವೇ ತಮ್ಮ ಮಿತ್ರ

ಸದಾನಂದನ ಅನವರತ ಕೋರಿಕೆಗಳು.

ನೆಲ್ಲೂರು,
ನಂದನ ಸಂ॥ ವೈಶಾಖ ಬ॥ ೪.

## 6.

## ಪ್ರಯಾಣದಲ್ಲಿ ನೋಡಿದ ಊರಿನ ವಿವರ.

ನನ್ನ ಪ್ರಿಯಸಖಿಯಾದ ಅನಸೂಯೆಗೆ.

ಪ್ರಿಯಂವದೆಯು ಬರೆದು ಕಳುಹಿಸಿದ ಪ್ರೀತಿಪೂರ್ವಕವಾದ ವಿವರ.

ನಮ್ಮ ಯಜಮಾನರೊಡನೆ ನಾನು ಶ್ರೀರಂಗಕ್ಕೆ ಈ ದಿನ ಬಂದು ತಲಪಿದೆನು. ರೈಲು ಈ ಊರಿಗೆ ಸರಿಯಾಗಿ ೧೧ ಘಂಟೆಗೆ ಬಂದು ಸೇರುತ್ತದೆ. ನಾವು ಬರುವಾಗ್ಗೆ ಈ ಊರಲ್ಲಿ ಒಬ್ಬರು ಉದ್ಯೋಗಸ್ಥರು ಅತ್ಯಾದರಣೆಯಿಂದ ನಮ್ಮನ್ನು ನಿರೀಕ್ಷಿಸಿಕೊಂಡಿದ್ದು, ಕಾವೇರೀ ತೀರದಲ್ಲಿ ಸಿದ್ಧಪಡಿಸಿಟ್ಟದ್ದ ಬಿಡಾರಕ್ಕೆ ಕರೆದುಕೊಂಡುಹೋದರು. ತಿರುಚನಾಪಳ್ಳಿ ಎಂಬ ದೊಡ್ಡ ನಗರವೂ ಶ್ರೀರಂಗವೂ ಒಂದೇ ಪಟ್ಟಣವಾಗಿ ಕಲತಿವೆ. ಈ ಊರು ಬಹಳ ಗುಂಪಾದದ್ದು; ಈ ಮಳಗಾಲದಲ್ಲಿ ಮಧ್ಯ ಮಧ್ಯ ನೀರು ಬಹಳ ನಿಂತಿದೆ. ಯಜಮಾನರು ಇದು ಅನಾರೋಗ್ಯವೆಂದು ಹೇಳುತ್ತಾರೆ. ನಮ್ಮ ಸೀಮೆಯಿಂದ ಬರುವವರು ಈ ಶಖೆಯನ್ನು ತಡೆಯುವುದು ಬಹು ಕಷ್ಟ. ಅದಲ್ಲದೆ, ಬಹಳ ದೂಳು. ಬೀದಿಬೀದಿಯಲ್ಲಿ ರಸ್ತೆ ಕಾಂಗಾರಿ ಮುಂತಾದ್ದಕ್ಕೆ ಹಾಕಿರುವ ಮಣ್ಣು ಗುಡ್ಡೆಗಳು ಕಬ್ಬಿಣದ ಕೊಳಬಿಗಳು, ಇವೆಲ್ಲಾ ನೋಡಿದರೆ ಹೊರಗೆ ಹೋಗುವುದಕ್ಕೆ ಮನಸ್ಸೇ ಬರುವುದಿಲ್ಲ. ಜನರಾದರೋ "ಲೊಡಬಡ" ಎಂಬುದಾಗಿ ಮಾತಾಡಿಕೊಳ್ಳುತ್ತಾರೆ. ಅವರ ಮಾತು ನಮಗೆ ತಿಳಿಯದು, ನಮ್ಮ ಮಾತು ಅವರಿಗ ತಿಳಿಯದು. ನಮ್ಮ ಸೀಮೆಯಲ್ಲಿ ಕಷ್ಟಪಡುವ ಜಾತಿಯ ಜನರೂ ಕೂಡ ಅನೇಕರು ಲಕ್ಷಣವಾಗಿರುತ್ತಾರೆ. ಇಲ್ಲಿ ಹೆಂಗಸರಲ್ಲಿ ಚೆನ್ನಾಗಿ ಕಾಣುವವರು ಅಪೂರ್ವ. ಸ್ವಲ್ಪ ಬಟ್ಟೆ ಒರೆಯಾದರೆ ತಲೆ ಒಡೆದ ಹಾಗೆ ಆಗುತದೆಯಷ್ಟೆ. ಇಲ್ಲಿ ಹೆಂಗಸರು ಅರ್ಧ ಮೈ ಬಿಟ್ಟುಕೊಂಡೇ ತಿರುಗುತ್ತಾರೆ. ಪಾಪ; ಈ ಶಖೆ ಅಂತಾದ್ದು, ಅವರುತಾನೇ ಏನು ಮಾಡಿಯಾರು?

ಹೊರಗೆ ಹೇಗಾದರೂ ಇರಲಿ, ನಾವಿರುವ ಬಂಗಲೆ ಎಷ್ಟು ರಮ

ಣೀಯುವಾಗಿದೆಯೋ! ಇಲ್ಲಿಯ ಕಾವೇರಿಯ ಅಗಲವನ್ನು ನೋಡಿದರೆ ನಮ್ಮ ಪ್ರಾಂತ್ಯದ ನದಿ ಬರೀಕಾಲುವೆಗೆ ಸಮಾನ. ನಾವಿರುವ ಮಹಡಿಯ ಮೇಲೆ ಕೂತುಕೊಂಡರೆ ಸುತ್ತೂ ಎಷ್ಟುದೂರ ನೋಡಿದರೂ ಸಮುದ್ರದ ಹಾಗೆ ನೀರು ಕಾಣುತದೆ. ಯಜಮಾನರೂ ನಾನೂ ನಿನ್ನೆ ರಾತ್ರಿ ಬೆಳದಿಂಗಳಲ್ಲಿ ಈ ನದಿಯನ್ನು ನೋಡುತ ಊಟಕ್ಕೆ ಕೂತಿದ್ದೆವು. ಇನ್ನದರ ಆನಂದವನ್ನು ಏನೆಂದು ಹೇಳಲಿ? ನೀನೂ ನನ್ನ ಜತೆಗೆ ಸೇರಿದ್ದರೆ ಇನ್ನೆಷ್ಟು ಸಂತೋಷಪಡುತ್ತಿದ್ದೆನೋ!

ಬೇಗ ಹೊರಡಬೇಕೆಂದು ನನ್ನ ಖಾವಂದರು ತೊಂದರೆ ಮಾಡುತಿದಾರೆ; ಏನು ಮಾಡುವುದು; ಪರಾಧೀನತೆಯಲ್ಲಿನ ಕಷ್ಟವಿದೊಂದು. ಮತ್ತೊಂದು ಸಲ, ಇಲ್ಲಿ ನೋಡಿದ ವಿಚಿತ್ರವಾದ ದೇವಾಲಯಗಳನ್ನು ವಿವರಿಸುತೇನೆ.

ನಿನ್ನ ಕಂದ ಕಮಲೆಗೆ ನನ್ನನ್ನು ಜ್ಞಾಪಿಸಿ, ಊರೂರೂ ಅಲೆಯುತಿರುವ ನಿನ್ನ ಬಡಸ್ನೇಹಿತಳಿಗೆ ಕಷ್ಟವನ್ನು ಬೇಗ ತಪ್ಪಿಸಿ, ನಿನ್ನ ಸಮೀಪಕ್ಕೆ ಬರುವಂತೆ ಮಾಡಬೇಕೆಂದು ನಾಳೆ ಗೌರೀಪೂಜೆ ಮಾಡುವಾಗ ಪ್ರಾರ್ಥಿಸಿಕೊ.

ಇದು
ನಿನ್ನ ಪ್ರಿಯಂವದೆಯ
ವಿಜ್ಞಾಪನೆ.

ತಿರುಚನಾಪಳ್ಳಿ,
ಭಾದ್ರಪದ ಶು॥ ೧.

## 7.

## ವಿದ್ಯಾಭ್ಯಾಸ ವಿಷಯು.

೧೦, ಸಾಲೆಬೀದಿ.
ಸಾಹುಕಾರ್‌ಪೇಟೆ, ಮದರಾಸು.
೧೫ನೇ ಜುಲೈ ೧೮೯೩.

ತೀರ್ಥರೂಪರವರ ಪಾದಪದ್ಮಂಗಳಿಗೆ.

ಬಾಲಕನ ವಿಜ್ಞಾಪನೆ.

ಈ ಶ್ರಾವಣ ಬಹುಳ ೪ ವರೆಗೆ ನಾನು ಇಲ್ಲಿ ತವ್ಮ ವಿಶ್ವಾಸಾಶೀರ್ವಾದಗಳ ಬಲದಿಂದ ಸೌಖ್ಯವಾಗಿದೇನೆ. ಅಲ್ಲಿ ಮಾತೃಶ್ರೀಯವರು ಮುಂತಾಗಿ ತವ್ಮ ಸುಕ್ಷೇಮಾತಿಶಯಗಳ ವಿಷಯವಾಗಿ ಪ್ರತಿದಿನವೂ ಬರೆಯುತಿರಬೇಕೆಂದು ಬೇಡಿಕೊಳ್ಳುತ್ತೇನೆ. ತರುವಾಯ.

ನಾನು ಈ ಊರಿಗೆ ಓದುವುದಕ್ಕೋಸ್ಕರ ಮನೆಯನ್ನು ಬಿಟ್ಟು ಹೊರಟಾಗ ಮಾರ್ಗವಲ್ಲಿ ಅತ್ತಿತ್ತ ನೋಡುವುದಕ್ಕೆ ಜ್ಞಾನವೇ ಇರಲಿಲ್ಲ. ತಾವು ನಾನು ವಿವೇಕವಾಗಿ ಒಬ್ಬನೇ ಪರಸ್ಥಳದಲ್ಲಿ ಇರುವುದಕ್ಕೆ ತಕ್ಕ ವಯಸ್ಕನಲ್ಲವೆಂದು ಯೋಚಿಸುವುದೂ, ಮಾತೃಶ್ರೀಯವರು ತವ್ಮ ಹುಡುಗನಿಗೆ ಹೊತ್ತುಹೊತ್ತಿಗೆ ಸರಿಯಾಗಿ ಅನ್ನನೀರನ್ನು ಕಾಣಿಸುವವರ್ಯಾರೆಂದು ಹಗಲೂರಾತ್ರಿ ಪಶ್ಚಾತ್ತಾಪ ಪಡುತ್ತಿರುವುದೂ, ಇದೆಲ್ಲಾ ಮನಸ್ಸಿನಲ್ಲಿ ನೆಟ್ಟು, ಮತ್ತೊಂದು ವಿಷಯದ ಮೇಲಿರುವ ಆಶೆಯೇ ತಪ್ಪಿಹೋಯಿತು. ನಾನು ಹೊರಡುವ ರಾತ್ರಿ ಮಲಗಿರುವಾಗ ಮಾತೃಶ್ರೀಯರು ಸ್ವಲ್ಪವೂ ಎಡೆಬಿಡದೆ, ತಲೆಯ ಸಮೀಪದಲ್ಲಿ ಕೂತುಕೊಂಡು ಸುರಿಸಿದ ಕಣ್ಣೀರಿನ ತೇವವಿನ್ನೂ ನನ್ನ ಕನ್ನೆಯ ಮೇಲೆ ಆರದೆ ಇರುವಂತೆ ತೋರುತಿದೆ.

ಇಲ್ಲಿ ಬೆಳಗ್ಗೆ ತಲಪಿ ಅದೇ ಮಧ್ಯಾಹ್ನ ಪಾಠಶಾಲೆಗೆ ಸೇರಿದೆ. ಇಲ್ಲಿನ ಮುಖ್ಯೋಪಾಧ್ಯಾಯರು ಬಹಳ ಒಳ್ಳೆಯ-ವರಂತೆ ತೋರುತಾರೆ. ನಾನು ಒಬ್ಬನೇ ದೂರದಿಂದ ಬಂದಿದೇನೆಂದು ಕೇಳಿ, ಬಹಳ ಆದರದಿಂದ ವಿಚಾರಣೆ ತೆಗೆದುಕೊಂಡರು; ಮತ್ತು ಯಾವ ವಿಷಯದಲ್ಲಿ

ಅನಾನುಕೂಲವಾದರೂ ತಮ್ಮನ್ನು ಕೇಳಬೇಕೆಂದು ಅಭಯಕೊಟ್ಟರು.

ನಮ್ಮ ಊರಿನ ಪಾಠಶಾಲೆಗಿಂತ ಇಲ್ಲಿ ಪಾಠಗಳು ಬಹಳ ಚೆನ್ನಾಗಿ ನಡೆಯುತ್ತಿವೆ; ಉಪಾಧ್ಯಾಯರೆಲ್ಲಾ ಬಹಳ ಹೆಚ್ಚಾಗಿ ಓದಿದವರು. ಮುಂದಕ್ಕೆ ನಾನು ಓದುವ ಸಂಗತಿಗಳನ್ನು ವಿವರವಾಗಿ ಬರೆಯುತ್ತೇನೆ.

ನಾನು ಬುದ್ಧಿವಂತನಾಗಿ ಓದಿಕೊಳ್ಳುತ್ತೇನೆಂದು ತಾವು ಧೈರ್ಯವಾಗಿರಬೇಕು. ಇಲ್ಲಿ ಸರ್ವ ವಿಷಯಗಳಲ್ಲಿಯೂ ಸೌಖ್ಯವಾಗಿ ಇದೆ ಎಂದು ಮಾತೃಶ್ರೀಯವರಿಗೆ ಹೇಳಬೇಕು. ನಮ್ಮ ಮನೆಯಲ್ಲವೆಂಬುವುದೊಂದೇ ಕೊರತೆ. ನಾನು ರಜಾ ಕಾಲದಲ್ಲಿ ಬರುವಾಗ ತಂಗಮ್ಮನಿಗೆ ಒಂದು ಒಳ್ಳೇ ಬೊಂಬೆಯನ್ನು ತಂದುಕೊಡುತ್ತೇನೆ. ಆಡುವಾಗ ನಾನಿಲ್ಲವೆಂದು ನೆನದುಕೊಳ್ಳುತ್ತಾಳೆಯೇ?

ಈ ವಿವರ ತಮ್ಮ ಮನಸ್ಸಿಗೆ ಸರಿತರಬೇಕೆಂದು ಬಾಲಕನು ಮಾಡುವ

ಅನೇಕ ವಿಜ್ಞಾಪನೆಗಳು.

## 8.

ನಾರಾಯಣನಗರ.

ವ್ಯಯ ಸಂ॥ ಶ್ರಾವಣ ಬ॥ ೮

ಚಿ॥ ಸ॥ ನಮ್ಮ ರಾಮು ನೋಡಿಕೊಳ್ಳತಕ್ಕ ಬಗ್ಗೆ.

ಅನೇಕ ಆಶೀರ್ವಾದಗಳು.

ಈ ವರೆಗೆ ಇಲ್ಲಿ ಸರ್ವರೂ ಕ್ಷೇಮವಾಗಿದೇವೆ. ನಿನ್ನ ಸುಕ್ಷೇಮಕ್ಕೆ ದಿನಬಿಟ್ಟುದಿನ ಬರೆಯುತ್ತಿರಬೇಕು.

ನೀನು ಬರೆದ ಕಾಗದ ಬಂದು ತಲಪಿ, ನಮಗೆಲ್ಲಾ ಬಹಳ ಸಂತೋಷವಾಯಿತು. ನೀನು ಹೊರಟುಹೋದಾಗಿನಿಂದ ನಿಮ್ಮ ತಾಯಿ ನಿದ್ರೆ ಆಹಾರಗಳನ್ನು ಲಕ್ಷ್ಯಮಾಡದೆ, ಯಾವಾಗಲೂ ನಿನ್ನ ಯೋಚ

ನೆಯಲ್ಲಿಯೇ ಇದ್ದಾಳೆ. ನಿನ್ನ ತಂಗಿ ರಾಧೆಯು ಗಳಿಗೆಗೊಂದುಸಲ ಹೊರಗಿನಿಂದ ಅಣ್ಣಯ್ಯನೆಲ್ಲಿ ಎಂದು ಕೇಳಿಕೊಂಡುಬಂದು, ಆಟವನ್ನು ಬಿಟ್ಟು ಬಳಲಿದಂತೆ ಮಲಗಿಕೊಳ್ಳುತ್ತಾಳೆ. ನೀನು ಬೊಂಬೆ ತರುತ್ತೀಯೆಂದು ಹೇಳಿದಾಗ ಬೊಂಬೆಯೇ ಬೇಡ, ನೀನು ಬಂದರೆ ಸಾಕೆನ್ನುತ್ತಾಳೆ. ಇದೆಲ್ಲಾ ಬರೆಯುವುದು ನೀನು ಮನೆಯ ಕಡೆಯ ಯೋಚನೆಯನ್ನು ಹತ್ತಿಸಿಕೊಂಡು ಓದುವುದರಲ್ಲಿ ಹಿಂದೆ ಬೀಳಬೇಕೆಂದಲ್ಲ. ನಿನಗೆ ಮಾತ್ರವೇ ಅಲ್ಲದೆ ಮನೆಯವರಿಗೆಲ್ಲಾ ಇಷ್ಟು ಕಷ್ಟವನ್ನುಂಟುಮಾಡಿ, ನೀನಲ್ಲಿಗೆ ಹೋಗುವುದನ್ನು ಯೋಚಿಸಿ, ಇದಕ್ಕೆ ತಕ್ಕ ಫಲವುಂಟಾಗುವಂತೆ ಅತ್ಯಾಸಕ್ತಿಯಿಂದ ಓದಬೇಕೆಂದು ಬರೆದಿದ್ದೇನೆ.

ಆದರೂ ಶರೀರಕ್ಕೆ ಸ್ವಲ್ಪವೂ ಆಲಸ್ಯವಾಗದಂತೆ ಅತಿಜಾಗ್ರತೆಯಾಗಿರಬೇಕು. ಮನೆಯಲ್ಲಿ ಆಹರ್ನಿಶಿಯೂ ನಿನ್ನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದರು. ದುಡ್ಡಿಗೋಸ್ಕರ ಮಾಡುತ್ತಿರುವ ಪರ ಜನರು ಅಷ್ಟು ಆಸಕ್ತಿಯಿಂದ ನಿನ್ನ ವಿಷಯವನ್ನು ವಿಚಾರಿಸಿಕೊಳ್ಳಲಾರರು. ನಿಮ್ಮ ಮುಖ್ಯೋಪಾಧ್ಯಾಯರು ಬಹಳ ದೊಡ್ಡ ಮನುಷ್ಯರೆಂದೂ ಹೊರಗಿನಿಂದ ಬರುವ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾರೆಂದೂ ಕೇಳಿದ್ದೇನೆ. ಸಮಸ್ತ ವಿಷಯಗಳಲ್ಲಿಯೂ ಅವರು ಹೇಳುವಂತೆ ನಡೆದುಕೊಂಡು ಸರಿಯಾಗಿರುವೆಯೆಂದು ಕೋರುತ್ತೇನೆ. ಮುಖ್ಯವಾಗಿ ಒಬ್ಬನೇ ದೂರದಲ್ಲಿರುವುದರಿಂದ ಬುದ್ಧಿಯಾಗಿ ನಡೆದುಕೊಳ್ಳಬೇಕು. ನಿನ್ನ ಚಿಂತೆಯನ್ನು ಒಂದು ನಿಮಿಷವಾದರೂ ಮರೆಯುವುದಕ್ಕೆ ಆಗುವುದಿಲ್ಲವಾಗಿ ಪದೇಪದೇ ಬರೆಯುತ್ತಿರಬೇಕು.

ಇಂತಿ ಅನೇಕ ಆಶೀರ್ವಾದಗಳು.

## 9.

## ಉಪಕಾರವನ್ನು ಸ್ಮರಿಸುವ ಕಾಗದ.

ಶ್ರೀಮದಖಂಡಿತಲಕ್ಷ್ಮಿ ೭ೀ.........................................

ನಮ್ಮ ಕೃಷ್ಣಶೆಟ್ಟರವರ ಸನ್ನಿಧಾನಕ್ಕೆ.

ತಮ್ಮ ಕೃತಜ್ಞನಾದ ಸೇವಕ ಬಸಪ್ಪಶೆಟ್ಟಿಯು ಮಾಡುವ ಶರಣಾರ್ತಿ ಅದಾಗಿ.

ಈ ವಿಜಯಸಂವತ್ಸರದ ವೈಶಾಖ ಶು॥ ೫ ಯವರೆಗೆ ತಮ್ಮ ವಿಶ್ವಾಸದಬಲದಿಂದ ನಾನು ಕ್ಷೇಮವಾಗಿದೇನೆ. ಸಾಂಪ್ರತ.

ತಾವು ಈ ಸಲ ನನಿಗೆ ಬಂದ ಕಷ್ಟಕಾಲದಲ್ಲಿ ನನ್ನ ಕಡೆ ನಿಂತು ಮಾಡಿದ ಉಪಕಾರವನ್ನು ಎಂದಿಗೂ ಮರೆಯುವುದಿಲ್ಲ. ಬಂಧುಗಳು ಇಷ್ಟರು ಎಲ್ಲರೂ ನಾವು ಒಳ್ಳೇ ಸ್ಥಿತಿಯಲ್ಲಿರುವ ವರೆಗೂ ನಮ್ಮ ಕಡೆಯವರಾಗಿರುತಾರೆ. ಅನೇಕ ಸಾರಿ ನಸ್ನಿಂದ ಉಪಕಾರವನ್ನು ಹೊಂದಿರುವ ಅನೇಕರು ನನಗೆ ಸಹಾಯಮಾಡುವುದಕ್ಕೆ ಹಿಂತೆಗೆದರು. ಈ ಲೋಕದಲ್ಲಿ ಹಣವೆಂಬುವುದು ಎಷ್ಟು ಕೆಟ್ಟದ್ದೊ! ಅದಕ್ಕೋಸ್ಕರ ಒಳ್ಳೆಯವರೆಲ್ಲರೂ ಕೆಟ್ಟವರಾಗಬೇಕಾಗುತದೆ. ಅಪೂರ್ವವಾಗಿ ತಮ್ಮಂತಾ ಮಹಾನುಭಾವರು ಯಾರಾದರು ಇದ್ದರೆ, ಹಣವನ್ನು ಲಕ್ಷ್ಯಮಾಡದೆ ಸ್ನೇಹಿತರಿಗೆ ಉಪಕಾರವನ್ನು ಮಾಡುವರು. ತಾವು ನನಗೆ ಅತ್ಯಾದರದಿಂದ ಸಾಲವನ್ನು ಕೊಡೋಣವಾಯಿತು. ದೈವಾನುಗ್ರಹದಿಂದಲೂ, ತಮ್ಮ ಔದಾರ್ಯಗುಣದ ಪ್ರಭಾವದಿಂದಲೂ ನನ್ನ ವ್ಯಾಪಾರದಲ್ಲಿ ವಿಶೇಷವಾಗಿ ಲಾಭಬಂದುದರಿಂದ ತಮ್ಮ ೧೦,೦೦೦ ರೂಪಾಯಿಯನ್ನು ಬಡ್ಡಿಯ ಸಹಿತವಾಗಿ ಕೊಡುವಂತೆ ಈ ದಿವಸ ಸಾಹುಕಾರರು ಬೊಮ್ಮಣ್ಣನವರ ಹೆಸರಿಗೆ ಹುಂಡಿಯನ್ನು ಬರೆದು ಇದರೊಡನೆ ಕಳುಹಿಸಿದೇನೆ. ತಲಪಿದ್ದಕ್ಕೆ ಜವಾಬು ಅಪ್ಪಣೆಯಾಗಬೇಕು. ಇದರಿಂದ ತಾವು ದಯಮಾಡಿ ಕೊಟ್ಟಿದ್ದ ಹಣದ ಸಾಲವನ್ನು ತೀರಿಸಿಕೊಂಡರೂ, ತಮ್ಮ ವಿಶ್ವಾಸದ ನೆನಪನ್ನು ಈ ಜನ್ಮವಿರುವ ವರೆಗೂ ಮರೆಯಲಾರೆನು.

ಇದು ತಮ್ಮ ಸದಾಕಾಲ ಕೃತಜ್ಞನಾದ,

ಬಸಪ್ಪಶೆಟ್ಟಿಯ ಶರಣಾರ್ತಿ.

## 10.

ಶ್ರೀಮದ್ಯಜನಯಾಜನಾದಿ ಷಟ್ಕರ್ಮ ನಿರತರಾದ ವೇದಮೂರ್ತಿ ತ್ರಿಯಂಬಕ ಶಾಸ್ತ್ರಿಗಳವರ ದಿವ್ಯಚರಣ ಸನ್ನಿಧಾನಂಗಳಿಗೆ.

ಸೇವಕ ನರಸಿಂಹನು ಮಾಡುವ ಅನೇಕ ನಮಸ್ಕಾರಪೂರ್ವಕವಾದ ವಿಜ್ಞಾಪನೆಗಳು.

ಈ ವರೆಗೆ ಚಿರಂಜೀವಿಗಳು ಸೌಭಾಗ್ಯವತಿಗಳು ಮೊದಲಾಗಿ ಇಲ್ಲಿ ಸರ್ವರೂ ತಮ್ಮ ಆಶೀರ್ವಾದ ಬಲದಿಂದ ಕುಶಲರಾಗಿದೇವೆ. ಅಲ್ಲಿ ಸರ್ವರ ಸಮೇತವಾಗಿ ತಮ್ಮ ನಿರಂತರ ಸು ಕುಶಲಾದಿ ಸಂಪದಗಳ ವಿಷಯವಾಗಿ ಪದೇಪದೇ ಬರೆದು ಕಳುಹಿಸುತಿರಬೇಕು. ಸಾಂಪ್ರತ—

ನನ್ನ ಮಗ ಕೃಷ್ಣನನ್ನು ತಾವು ಇಷ್ಟು ದಿವಸವೂ ತಮ್ಮ ಮಗನಿಗಿಂತ ಅಧಿಕವಾಗಿ ಮನೆಯಲ್ಲಿ ಪೋಷಣೆಮಾಡಿ, ಅವನಿಗೆ ವಿದ್ಯೆಯನ್ನು ಸಾಂಗವಾಗಿ ಅಭ್ಯಾಸಮಾಡಿಸಿ, ಕಳುಹಿಸಿದ್ದರಿಂದ ತಮ್ಮನ್ನು ನಾನೆಷ್ಟು ಕೊಂಡಾಡಿದರೆತಾನೇ ತೀರೀತು? ನಮ್ಮ ಮನೆಯಲ್ಲಿ ಹುಟ್ಟಿದ್ದು ಒಂದು ವಿನಾ ಮುಖ್ಯ ವಿಷಯಗಳಿಗೆಲ್ಲಾ ತಾವೇ ಅವನಿಗೆ ನಿಶ್ಚಯವಾದ ಪಿತೃಸ್ಥಾನಕ್ಕೆ ಯೋಗ್ಯರು. ಈಚೆಗೆ ಅವನು ಕಾವೇರಿಯ ಸ್ನಾನಕ್ಕೆ ಹೋಗಿ ನದಿಯಲ್ಲಿ ದುಡುಕಿನಿಂದ ಇಳಿದಾಗ ತಾವು ತಮ್ಮ ಪ್ರಾಣದಮೇಲಣ ಆಶೆಯನ್ನು ಬಿಟ್ಟು, ಅವನನ್ನು ಎಳೆದುಕೊಂಡುಬಂದಿರೆಂದು ಕೇಳಿ, ಅವನ ಜನಕ ಮಾತಾಪಿತೃಗಳಿಬ್ಬರಿಗೂ ಎಷ್ಟು ಸಂತೋಷವಾಗಿರಬೇಕೋ ಅದನ್ನು ತಾವೇ ಊಹಿಸಿಕೊಳ್ಳಬಹುದು. ತಾವು ಅವನಿಗೆ ಉಳಿಸಿಕೊಟ್ಟ ಪ್ರಾಣವನ್ನು ತಾವು ಹೇಳಿಕೊಟ್ಟಿರುವ ಸುವಿದ್ಯೆಯನ್ನು ಸಾರ್ಥಕಹೊಂದಿಸುವುದರಲ್ಲಿ ನಮ್ಮ ಹುಡುಗನು ವಿನಿಯೋಗಪಡಿಸಿದರೆ ನಾವು ಕೃತಾರ್ಥರಾದೇವು.

ಇಂತೀ

ಸಾಷ್ಟಾಂಗ ನಮಸ್ಕಾರಪೂರ್ವಕ ವಿಜ್ಞಾಪನೆ.

## 11.

## ಮರಣವಿಷಯದ ಕಾಗದ.

ರಾ|| ನಮ್ಮ ರಾಮಣ್ಣನವರು ಪರಾಮರಿಸತಕ್ಕ ಬಗ್ಗೆ.

ರಂಗಣ್ಣನ ವಿಜ್ಞಾಪನೆ.

ಈ ಸರ್ವಧಾರಿ ಸಂವತ್ಸರದ ಕಾರ್ತೀಕ ಶು|| ೧೩ ಸಾಯಂಕಾಲ ೫ ಘಂಟೆಯಲ್ಲಿ ತಮ್ಮ ಅಣ್ಣಂದಿರು ಕುಬೇರಪ್ಪನವರು ಸ್ವರ್ಗಸ್ಥರಾದ ರೆಂಬ ಸಮಾಚಾರವನ್ನು ತಮಗೆ ತಿಳಿಸಬೇಕಾದ ದೌರ್ಭಾಗ್ಯವು ನನ್ನ ದಾಯಿತೆಂದು ಬಹಳ ವ್ಯಸನಪಡುತ್ತೇನೆ. ಇನ್ನು ತಮ್ಮ ಸಂಕಟವೆಷ್ಟಿದ್ದೀತೋ, ಅದನ್ನು ಶ್ರೀಹರಿಯೇ ಪರಿಹರಿಸಬೇಕೆಂದು ಅನಿಶವೂ ಕೋರುತಿರುವ

ರಂಗಣ್ಣನ ವಿಜ್ಞಾಪನೆ.

ಗೊರೂರು,

ಸರ್ವಧಾರಿ ಕಾರ್ತೀಕ ಬ|| ೪.

## 12.

## ದುಃಖಕಾಲದಲ್ಲಿ ಪಶ್ಚಾತ್ತಾಪವನ್ನು ತಿಳಿಸುವ ಕಾಗದ.

ಮ|| ನಮ್ಮ ವೆಂಕಟಶೆಟ್ಟರವರ ಸನ್ನಿಧಾನಕ್ಕೆ.

ತಮ್ಮ ಮಿತ್ರನಾದ ರಂಗಣ್ಣನ ವಿಜ್ಞಾಪನೆ. ಈಗ ತಮಗೆ ಸಂಭವಿಸಿರುವ ಮಹದ್ವಿಪತ್ತಿನ ಸಂಗತಿ ಕೇಳಿ, ಬಹಳ ದುಃಖಪಡುತ್ತೇನೆ. ಅಂತಾ ಮಹಾ ಗುಣವತಿಯುರಾದ ಪತ್ನಿಯರನ್ನು ಕಳದುಕೊಂಡ ತಮಗೆ ಇನ್ನೆಷ್ಟು ದುಃಖ ಉಂಟಾಗಿರುವುದೋ ಎಂಬ ವಿಷಯವನ್ನು ಊಹಿಸಿಕೊಳ್ಳುವುದಕ್ಕೆ ಭಯಂಕರವಾಗಿದೆ. ಸರ್ವರಕ್ಷಕನಾದ ಈಶ್ವರನ ದಯದಿಂದ ತಮ್ಮ ಕಷ್ಟನಿವಾರಣೆಯಾಗಬೇಕೇ ಹೊರತು ಮನುಷ್ಯ

ಮಾತ್ರರು ಹೇಳುವ ವ್ಯರ್ಥವಾದ ಉಪಚಾರದ ಮಾತುಗಳಿಂದ ಫಲವಿಲ್ಲ.

ತಮ್ಮ ಸದಾಹಿತಚಿಂತಕನಾದ
ರಂಗಣ್ಣನ ವಿಜ್ಞಾಪನೆ.

ರಾಮಪುರ,
ಚೈತ್ರ ಬ॥ ೧೦.

## 13.

### ನನ್ನ ಪ್ರಾಣಸಖಿಯಾದ ರುಕ್ಮಿಣಿಗೆ.

ನಿನಗೆ ಬಂದ ಮಹದಾಪತ್ತನ್ನು ಕೇಳಿದಾಗಿನಿಂದ ಅಲ್ಲಿಗೆ ಬಂದು ನನ್ನ ಬಾಲ್ಯದ ಸ್ನೇಹಿತಳನ್ನು ತಬ್ಬಿಕೊಂಡು, ಅವಳ ಕಣ್ಣೀರಿಗೆ ನನ್ನ ಕಣ್ಣೀರನ್ನು ಬೆರಸಿ, ಅವಳ ದುಃಖದಲ್ಲಿ ನಾನೂ ಭಾಗವನ್ನು ಹೊಂದಬೇಕೆಂಬ ಆಶೆ ಬಹಳವಾಗಿದೆ. ಹಾಗೆ ಮಾಡಿದರೆ ನಿನ್ನ ದುಃಖವೇನಾದರೂ ಸ್ವಲ್ಪ ಕಡಮೆಯಾಗುವುದೋ ಏನೋ! ನಿಮ್ಮ ಯಜಮಾನರು ಬರೆದ ಕಾಗದದಲ್ಲಿ ನೀನು ಬದುಕಿದ್ದು ತಮ್ಮ ಅದೃಷ್ಟವೆಂದು ಬರೆದಿದಾರೆ. ಎಷ್ಟೋ ಆಶೆಯಿಂದ ಒಂಬತ್ತು ತಿಂಗಳು ಕಷ್ಟಪಟ್ಟು ಹೊತ್ತುಕೊಂಡಿದ್ದು, ಅದರ ಫಲವನ್ನು ಈಗಲೋ ಆಗಲೋ ಪಡೆಯಬೇಕೆಂದಿದ್ದಾಗ ಪಾಪಿಯಾದ ವಿಧಿಯು ಬಂದು ನಿಮಿಷದಲ್ಲಿ ಹೀಗೆ ಮನಸ್ಸಿನ ಕೋರಿಕೆಗಳನ್ನೆಲ್ಲಾ ವ್ಯರ್ಥಮಾಡಬಹುದೆ? ನನ್ನ ಕಂದ! ಅಷ್ಟು ಕೋಮಲೆಯಾದ ನೀನು ಆ ಗಳಿಗೆಯ ಸಂಕಟವನ್ನು ಹೇಗೆ ಅನುಭವಿಸಿದೆಯೋ? ನಿನಗೆ ಬಂದ ಕಷ್ಟದಲ್ಲಿ ನಿನ್ನ ಪ್ರಾಣ ಉಳಿದದ್ದು ನಮ್ಮೆಲ್ಲರ ಪುಣ್ಯವೆಂದು ತಿಳಿದುಕೊಳ್ಳಬೇಕು. ನಿನ್ನ ಅಪಾಯವು ನಿವಾರಣೆಯಾದುದರಿಂದ ನಿನ್ನ ಪ್ರಾಣಕಾಂತನಿಗೆ ಉಂಟಾದ ಸಂತೋಷವನ್ನಾದರೂ ಯೋಚಿಸಿಕೊಂಡು, ಮನಸ್ಸಿಗೆ ಸ್ವಲ್ಪ ಧೈರ್ಯ ತಂದುಕೊ.

ಇದು ದೇವರು ನಿನಗೆ ಬೇಗ ಒಳ್ಳೆದನ್ನು ಮಾಡಬೇಕೆಂದು ಯಾ ವಾಗಲೂ ಹರಿಸಿಕೊಂಡಿರುವ

ರಾಧೆಯ ಪ್ರಿಯವಚನವು.

ರಾಧಾಪುರ,
ರೌದ್ರಿ ಸಂ॥ ಪುಷ್ಯ ಶು॥ ೫.

ದುಃಖದಲ್ಲಿರುವವರಿಗೆ ಕಾಗದಗಳನ್ನು ಬರೆಯುವಾಗ ಸಮಯೋಚಿತವಾಗಿಲ್ಲದ ಮಾತುಗಳನ್ನು ಬರೆಯದಂತೆ ಅತಿ ಜಾಗ್ರತೆಯಾಗಿರಬೇಕು. ನಮ್ಮ ಮಾತುಗಳು ಅವರಿಗೆ ದುಃಖ ಉಪಶಮನ ಮಾಡತಕ್ಕಂತವುಗಳಾಗಿಯಾಗಲಿ, ಅವರಿಗೆ ಬಂದ ಕಷ್ಟದಿಂದ ನಮಗೆ ಉಂಟಾದ ಪಶ್ಚಾತ್ತಾಪವನ್ನು ತೋರ್ಪಡಿಸತಕ್ಕವುಗಳಾಗಿಯಾಗಲಿ ಇರಬೇಕು. ಸಮಯಗೌರವವನ್ನು ಮರೆತು, ಅತ್ಯಂತ ಅತಿಶಯೋಕ್ತಿಗಳನ್ನು ಉಪಯೋಗಿಸತಕ್ಕದ್ದಲ್ಲ; ಹಾಗೆ ಮಾಡಿದರೆ ಅತ್ಯುಷ್ಣವಾದರೆ ಶೀತವೆಂದು ಹೇಳುವ ನುಡಿಗೆ ಅನುಸಾರವಾಗಿರುವುದು. ಇತರರಿಗೆ ಬಂದ ಕಷ್ಟದಿಂದ ತಮಗೆ ಎಷ್ಟು ಮಟ್ಟಿಗೆ ಸಹಜವಾಗಿ ಪಶ್ಚಾತ್ತಾಪ ಹುಟ್ಟಬಹುದೊ ಅದಕ್ಕಿಂತ ಬಹಳ ಹೆಚ್ಚಾಗಿ ಬರೆದರೆ, ಓದಿದವರು ಅದು ಆಷಾಡಭೂತಿಯ ವಿದ್ಯವೆಂದು ಗ್ರಹಿಸಿಕೊಳ್ಳುವರು.

ದುಃಖ ಸಮಾಚಾರದೊಡನೆ ಬೇರೆ ಸಂಗತಿಗಳನ್ನು ಸೇರಿಸಿ ಬರೆಯತಕ್ಕದ್ದು ಅನುಚಿತ. ವ್ಯರ್ಥವಾದ ಉಪಚಾರದ ಮಾತುಗಳನ್ನು ಹೇಳುವುದೂ ಸರಿಯಲ್ಲ. ಮಗುವನ್ನು ಕಳೆದುಕೊಂಡಿರುವ ತಾಯಿಗೂ, ಗಂಡನನ್ನು ಕಳೆದುಕೊಂಡಿರುವ ಹೆಂಡತಿಗೂ, ಹುಟ್ಟಿದವರೆಲ್ಲರೂ ಸಾಯುವವರೆಂದಾಗಲಿ, ಅತ್ತರೆ ಸತ್ತವರು ಬರುವದಿಲ್ಲವೆಂದಾಗಲಿ ಇನ್ನೂ ಅನೇಕರಿಗೆ ಇಂತಾ ಕಷ್ಟ ಸಂಭವಿಸಿದೆ ಎಂದಾಗಲಿ ಹೇಳಿದರೆ, ಅವರ ದುಃಖಶಮನವೂ ಆಗುವುದಿಲ್ಲ, ಹೇಳುವವರ ಬುದ್ಧಿಯೂ ವ್ಯಕ್ತಪಡುವುದಿಲ್ಲ. ಘಾಯವು ನಿಧಾನವಾಗಿ ಮಾಗುವಂತೆ ಇಂತಾ ವ್ಯಸನಗಳು ಕಾಲಗತಿಯಿಂದ ಮರೆತುಬರಬೇಕೇ ಹೊರತು, ಹೊಸದಾಗಿರುವಾಗ ಎಷ್ಟುಮಾತ್ರಕ್ಕೂ ಬರೀ ಮಾತುಗಳಿಂದ ಶಮನವಾಗತಕ್ಕವಲ್ಲ.

ಇಂತಾ ಕಾಗದಗಳನ್ನು ಎಷ್ಟು ಸೂಕ್ಷ್ಮವಾಗಿ ಬರೆದರೆ ಅಷ್ಟು ಒಳ್ಳೇ

೮. ಕೆಲವರು ಬರಟುಜನರು ಸಮಾಧಾನವನ್ನು ಹೇಳಬೇಕೆಂದು ಹೋಗಿ ಘಾಯದ ಮೇಲೆ ಸೂಜಿಯನ್ನು ಚುಚ್ಚಿದಂತೆ ದುಃಖವನ್ನು ಉಕ್ಕಿಸುತ್ತಾರೆ. ಹೆಂಡತಿಯು ಸತ್ತಿರುವಾಗ ಆಕೆಯು ಗುಣವನ್ನು ನೆನದುಕೊಂಡು ಅಳುತ್ತಿರುವ ಗಂಡನಿಗೆ ಹಳೇ ಜೋಡು ಹೋದರೆ ಹೊಸಜೋಡನ್ನು ಮೆಟ್ಟುಕೊಳ್ಳಬಹುದೆಂದು ಹೇಳುವ ನರಮೃಗ ಗಳೂ ಕೂಡಾ ಈ ಪ್ರಪಂಚದಲ್ಲಿ ಕೆಲವರು ಇರುತ್ತಾರೆ.

## ಲೇವಾದೇವಿಯ ಸಂಬಂಧದ ಕಾಗದಗಳು.

### ೧.

### ಸಾಲವನ್ನು ಕೇಳುವುದು.

ರಾಜಮಾನ್ಯರಾಜಶ್ರೀ ಸುಬ್ಬಶೆಟ್ಟರವರ ಸ|| ಕ್ಕೆ.

ಗೋವಿಂದಯ್ಯನ ವಿಜ್ಞಾಪನೆ—ಈ ವರೆಗೆ ಉಭಯ ಕ್ಷೇಮೋಪರಿ.

ನಾನು ಈ ಊರಿನ ಸಮೀಪದಲ್ಲಿ ಒಂದು ಜಮೀನನ್ನು ತೆಗೆದು ಕೊಳ್ಳಬೇಕೆಂದಿದೇನೆ. ನನ್ನಲ್ಲಿ ನಗದಾಗಿರುವ ಹಣ ಸಾಲದೆ ಇರುವುದ ರಿಂದ, ತಮಗೆ ಅನಾನುಕೂಲ ಉಂಟಾಗದೆ ನನಗೆ ಒಂದು ಸಾವಿರ ರೂ ಪಾಯನ್ನು ಒಂದು ತಿಂಗಳವರೆಗೆ ಸಾಲವಾಗಿ ಕೊಟ್ಟದ್ದರೆ ತಮ್ಮ ಉಪ ಕಾರವನ್ನು ಬಹಳವಾಗಿ ಸ್ಮರಿಸಿಕೊಳ್ಳುತೇನೆ. ತಮ್ಮ ಹಣವನ್ನು ಸರಿ ಯಾಗಿ ಪಾವತಿ ಮಾಡುವುದಲ್ಲದೆ ವಾಡಿಕೆಯ ಪ್ರಕಾರ ಕೊಡತಕ್ಕ ಬಡ್ಡಿ ಯನ್ನು ಕೊಡುತೇನೆ.

ಈ ವಿವರ ತಮ್ಮ ಅಂತಃಕರಣಕ್ಕೆ ಸರಿತಂದು ನನ್ನ ಸಮಯಕ್ಕೆ ತಕ್ಕ ಸಹಾಯವನ್ನು ಮಾಡಬೇಕೆಂಬುವುದು,

ತಮ್ಮ ವಿಧೇಯನಾದ
ಗೋವಿಂದಯ್ಯನ ವಿಜ್ಞಾಪನೆ

ತಿರಪೂರು,
೧೧ನೇ ಜುನ್, ೧೮೯೩.

೨.

## ಸಾಲವನ್ನು ಕೊಡುವುದಕ್ಕೆ ಒಪ್ಪುವುದು.

ಮೆ॥ ಗೋವಿಂದಯ್ಯನವರ ಸ॥ ಕ್ಕೆ.

ಉಭಯ ಕ್ಷೇಮೋಪರಿ.

ತಮ್ಮ ಕೋರಿಕೆಯ ಪ್ರಕಾರ ಒಂದು ಸಾವಿರ ರೂಪಾಯಿಗಳನ್ನು ನಮ್ಮ ಗುಮಾಸ್ತೆ ರಾಮಣ್ಣನವರ ಮೂಲಕ ಕಳುಹಿಸಿದೇನೆ. ತಮ್ಮವನಾಗಿ ನಾನೂ ಒಬ್ಬನಿದೇನೆಂದು ತಾವು ನನಗೆ ಬರೆದುದಕ್ಕೆ ಬಹಳ ಸಂತೋಷಪಡುತೇನೆ. ಇದನ್ನು ತಮಗೆ ಅನುಕೂಲವಾದಾಗ ವಾಪಸು ಕಳುಹಿಸಬಹುದು. ಇದು ತಮ್ಮ ಸಮಯಕ್ಕೆ ಸರಿಯಾಗಿ ಒದಗುವುದೆಂದು ಕೋರುವ

ತಮ್ಮ ಸೇವಕ
ಸುಬ್ಬಶೆಟ್ಟಿಯ ವಿಜ್ಞಾಪನೆ.

ಅಳಕಾವತಿ,
೧೦ನೇ ಜೂನ್ ೧೮೯೩,
ಸರ್ವಧಾರಿ ಸಂ॥ ಚೈತ್ರ ಬ॥ ೪.

೩.

## ಇಲ್ಲವೆಂದು ಹೇಳುವಿಕೆ.

ಮೆ॥ ಗೋವಿಂದಯ್ಯನವರ ಸ॥ ಕ್ಕೆ.

ಸುಬ್ಬಶೆಟ್ಟಿಯ ವಿಜ್ಞಾಪನೆ—ಉಭಯ ಕ್ಷೇಮೋಪರಿ.

ತಮ್ಮ ಕಾಗದ ಈಗ ತಲಪಿ ಅಭಿಪ್ರಾಯವಾಯಿತು. ನನ್ನಲ್ಲಿದ್ದ ನಗದು ಹಣವೆಲ್ಲಾ ಖರ್ಚಾಗಿ ಇನ್ನು ಕೆಲವು ದಿವಸ ಯಾವುದೂ ಬರುವ ನಿರೀಕ್ಷಣೆ ಇಲ್ಲದ್ದರಿಂದ ತಮ್ಮ ಆಜ್ಞಾನುಸಾರವಾಗಿ ನಡೆದುಕೊಳ್ಳಲು ಅಶಕ್ತನಾಗಿದೇನೆಂಬ ಸಂಗತಿಯನ್ನು ಅರಿಕೆ ಮಾಡಿಕೊಳ್ಳಲು ಬಹಳ ಸಂಕೋಚಪಡುತೇನೆ. ತಮ್ಮಂತಾ ಮಿತ್ರರಿಗೆ ಸಮಯಕ್ಕೆ ಒದಗ

ತಕ್ಕ ಪುಣ್ಯ ಲಭ್ಯವಾಗದೆ ಇರುವುದು ನನ್ನ ದುರದೃಷ್ಟವೆಂದು ಯೋಚಿಸಿಕೊಳ್ಳುತೇನೆ. ಈ ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುವೆನು. ತಮ್ಮಂತಾ ಪ್ರಾಜ್ಞರಿಗೆ ವಿಶೇಷವಾಗಿ ಬರೆಯುತಕದ್ದೇನಿದೆ. ಇಂತೀ ವಿಜ್ಞಾಪನೆ.

ನಾಸ್ತಿಪುರ,
೧೧—೧—೯೪.

## ೪.

## ಬಾಕಿಯನ್ನು ಕೇಳುವ ಕಾಗದ.

ಮ॥........................ರವರ ಸ॥ ಕ್ಕೆ.

ಜವಳಿ ಅಂಗಡಿ ರಾಮಶೆಟ್ಟಿಯು ವಿನಯಾರ್ಥ—ಈವರೆಗೆ ಉಭಯ ಕ್ಷೇಮೋಪರಿ.

ತಮ್ಮ ಲೆಕ್ಕದ ಪಟ್ಟಿಯನ್ನು ಇದರೊಡನೆ ಕಳುಹಿಸಿದೇನೆ. ಅದನ್ನು ಪರಾಮರಿಸಿ, ಬಾಕಿಯಾಗುವ ೫೪ ರೂ. ೬ ಆಣೆಯ ಮೊಬಲಗನ್ನು ದಯವಿಟ್ಟು ತಮಗೆ ಅನುಕೂಲವಾದಷ್ಟು ಜಾಗ್ರತೆಯಾಗಿ ಕಳುಹಿಸಿಕೊಡಬೇಕಲ್ಲದೆ ಪುನಃ ತಮಗೆ ಬೇಕಾಗುವ ಸರಕುಗಳಿಗೋಸ್ಕರ ಅಪ್ಪಣೆ ಕೊಡಿಸಿದರೆ ಶಿರಸಾವಹಿಸಿ ಕಳುಹಿಸಿಕೊಡುವುವನಾಗಿದೇನೆ. ಈ ವಿವರವನ್ನು ತಮ್ಮ ಅಂತಃಕರಣಕ್ಕೆ ಸರಿತರಬೇಕೆಂದು ಬೇಡುವ

ರಾಮಶೆಟ್ಟಿಯು ವಿನಯಾರ್ಥ.

ಬೆಂಗಳೂರು,
೧೩ನೇ ಜನವರಿ, ೧೮೯೩.

೫.

## ಅದಕ್ಕೆ ಪ್ರತ್ಯುತ್ತರ.

ಮ॥ ರಾಮಶೆಟ್ಟರವರ ಸ॥ ಕ್ಕೆ.

.................................................................ನ ವಿಜ್ಞಾಪನೆ.

ತಮ್ಮ ಲೆಕ್ಕದ ಪಟ್ಟಿ ಬಂದು ತಲಪಿದ್ದನ್ನು ನೋಡಿಕೊಂಡೆನು. ಅದರಲ್ಲಿ ೧೮೯೧ನೇ ಜುಲೈ ೬ನೇ ತಾರೀಖಿನಲ್ಲಿ ನನ್ನ ಲೆಕ್ಕಕ್ಕೆ ಒಂದು ಶಾಲು ಜೋಡಿಯನ್ನು ದಾಖಲ್ಮಾಡೋಣಾಗಿದೆ. ನನ್ನ ಲೆಕ್ಕದ ಪ್ರಕಾರ ಅದನ್ನು ಆ ದಿನವೇ ಅಮಾನತ್ತಾಗಿ ತಂದಿದ್ದು, ವಾಪಸು ಕಳುಹಿಸಿದಂತೆ ಇದೆ. ಇದು ತಮ್ಮ ಲೆಕ್ಕದಲ್ಲಿ ಗಲ್ಲತ್ತಿನಿಂದ ಸೇರಿರಬಹುದಾಗಿ ತೋರುತ್ತದೆ. ಅದನ್ನು ವಜಾ ಮಾಡಿದರೆ ನನ್ನ ಮೇಲೆ ಬಾಕಿ ಉಳಿಯುವಂತೆ ತೋರುವುದಿಲ್ಲ. ದಾಖಲೆಯನ್ನು ಪರಾಮರಿಸಿ ಸರಿಮಾಡಿಸಿ ಕಳುಹಿಸತಕ್ಕ ಬಗ್ಗೆ ಪಟ್ಟಿಯನ್ನು ವಾಪಸು ಕಳುಹಿಸಿದೇನೆ; ಶ್ರುತವಿರಬೇಕು.

................ ಇದು................ನ ವಿಜ್ಞಾಪನೆ.

೧೮೯೩.

೬.

## ಗುಮಾಸ್ತೆಯ ನಡತೆಯ ವಿಚಾರ.

ಶ್ರೀಮತ್ಸಕಲಗುಣ ಸಂಪನ್ನರಾದ ರಾಜಶ್ರೀ ನಮ್ಮ ಸಿದ್ದರಾಮಣ್ಣನವರ ಸ॥ ಕ್ಕೆ.

ಸೇವಕ ಬಸ್ಸೆಟ್ಟರ ವಿಜ್ಞಾಪನೆ.

ಈ ವರೆಗೆ ಉಭಯ ಕ್ಷೇಮೋಪರಿ—ಸಾಂಪ್ರತ.

ನಮ್ಮ ಅಂಗಡಿಯಲ್ಲಿ ಕೆಲಸಕಾರ್ಯಗಳನ್ನು ನೋಡಿಕೊಳ್ಳತಕ್ಕ ಬಗ್ಗೆ ನಂಬುಗೆಗೆ ಯೋಗ್ಯರಾದ ಒಬ್ಬ ಗುಮಾಸ್ತರು ಬೇಕಾಗಿದೆ.

ರಾಮೋಹಳ್ಳಿ ರಂಗಪ್ಪನವರು ತಮ್ಮ ಮಂಡಿಯಲ್ಲಿ ೫ ವರ್ಷ ಕೆಲಸ ನೋಡಿ, ಯಾವುದೋ ಅನಿವಾರ್ಯದಿಂದ ಬಿಟ್ಟಂತೆ ಹೇಳುತ್ತಾರೆ. ಅವರು ಬಿಟ್ಟದ್ದಕ್ಕೆ ಕಾರಣವೇನು? ಅವರು ನಂಬತಕ್ಕ ಆಸಾಮಿಯೇ? ಎಂಬು ದು ಮುಂತಾದ ವಿಷಯಗಳಲ್ಲಿ ತಮ್ಮ ಅಭಿಪ್ರಾಯವನ್ನು ನನಗೆ ತಿಳಿಸ ಬೇಕೆಂದು ಬೇಡುತ್ತೇನೆ. ತಾವು ಹೇಳುವ ಅಭಿಪ್ರಾಯವನ್ನು ಇತರ ರಿಗೆ ತಿಳಿಸುವುದಿಲ್ಲವಾಗಿ ತಾವು ಸ್ವಲ್ಪವೂ ಹಿಂದೆಗೆಯದೆ ತಮಗೆ ತಿಳಿದಿ ರುವ ಸಂಗತಿಯನ್ನು ಧಾರಾಳವಾಗಿ ಬರಿಸಬೇಕು. ಈ ಗುಮಾಸ್ತರ ನ್ನಿಟ್ಟುಕೊಂಡರೆ, ಹಣ ಮುಂತಾದ ವಿಷಯಗಳಲ್ಲಿ ಅವರನ್ನು ಅನೇಕ ಸಾರಿ ನಂಬಿ ಬಿಡಬೇಕಾಗಿ ಬರುವುದರಿಂದ ನಮಗೆ ಆಪ್ತರಾಗಿಯೂ ದೊ ಡ್ಡಮನುಷ್ಯರಾಗಿಯೂ ಇರುವ ತಾವು ಹೇಳಿದ ಮಾತಿನಲ್ಲಿ ಪೂರಾ ಭರ ವಸೆ ಇಡಬಹುದೆಂದು ತಮಗೆ ಅರಿಕೆಮಾಡಿಕೊಂಡಿದೇನೆ. ಇನ್ನು ವಿಶೇ ಷವಾಗಿ ಬರೆಯಲು ಶಕ್ತನಲ್ಲ.

ಇಂತೀ ವಿಜ್ಞಾಪನೆ.

ಚನ್ನಪಟ್ಟಣ,
ವಿಜಯ ಸಂ॥ ಭಾದ್ರಪದ ಶು॥ ೧೩.

## ೩.

## ಬಳ್ಳಿಯ ನಡತೆಯನ್ನು ಸೂಚಿಸುವುದು.

ಮ॥ ಬಸ್ಸೆಟ್ಟರವರ ಸ॥ ಕ್ಕೆ.

ಸಿದ್ದರಾಮಣ್ಣನ ಶರಣಾರ್ತಿ ಅದಾಗಿ. ಈ ವಿಜಯ ಸಂವತ್ಸರದ ಭಾದ್ರಪದ ಬ॥ ೫ ವರೆಗೆ ಸರ್ವರೂ ಸಹಿತವಾಗಿ ನಾನೂ ಕ್ಷೇಮ. ಅಲ್ಲಿ ತಮ್ಮ ನಿರಂತರ ಸುಕ್ಷೇಮಾತಿಶಯಗಳಿಗೆ ಬರಿಸಿ ಕಳುಹಿಸುತ ಬರಬೇಕು. ಸಾಂಪ್ರತ:

ತಮ್ಮ ಕಾಗದ ಬಂದು ತಲಪಿತು. ತಾವು ಹೇಳುವ ರಂಗಪ್ಪನ ವರು ನಮ್ಮ ಮಂಡಿಯಲ್ಲಿ ಬಹಳ ನಂಬುಗೆಯಿಂದ ೫ ವರ್ಷ ಕೆಲಸದಲ್ಲಿ

ದ್ದರು. ನಮ್ಮ ಮಂಡಿಯಲ್ಲಿ ಇವರಿಗೆ ತಕ್ಕ ಕೆಲಸ ಈಚೆಗೆ ಇಲ್ಲದರಿಂದಲೂ ಅವರು ಖಾಹಿಲೆಯಾದುದರಿಂದಲೂ ಬಿಟ್ಟುಬಿಟ್ಟರು. ನಾನು ನೋಡಿದಮಟ್ಟಿಗೂ ಇವರು ಪೂರಾ ನಂಬುಗೆಗೆ ಅರ್ಹರೆಂದು ತೋರುವ ಸಂಗತಿಯನ್ನು ಶ್ರುತಪಡಿಸಿದೇನೆ.

ಇಂತೀ ಶರಣಾರ್ತಿ.

ಬೆಂಗಳೂರು,
೧೫ನೇ ಮೇ, ೧೮೯೪.

೮.

ಕೆಟ್ಟನಡತೆಯನ್ನು ಸೂಚಿಸುವ ಉತ್ತರ.

ಮ॥ ಬಸ್ಸಪ್ಪರವರ ಸ॥ ಕ್ಕೆ.
ಇದುವರೆಗೆ ಸರ್ವರೂ ಕ್ಷೇಮ

ತಾವು ವಿಚಾರಿಸಿದ ರಂಗಪ್ಪನವರು ನಮ್ಮ ಮಂಡಿಯಲ್ಲಿ ಕೆಲಸ ನೋಡುತಿದ್ದರು. ಅವರು ಯೋಗ್ಯರಾಗಿಯೇ ಇರಬಹುದು. ಆದರೆ ನಮ್ಮ ದುರದೃಷ್ಟದಿಂದಲೋ ಏನೋ ನಮಲ್ಲಿದ್ದಾಗ ಅದನ್ನು ತೋರ್ಪಡಿಸಲಿಲ್ಲ. ತಮ್ಮಂತಾ ಪ್ರಾಜ್ಞರಿಗೆ ವಿಶೇಷವಾಗಿ ಬರೆಯುತಕ್ಕದ್ದೇನಿದೆ.

ಇಂತೀ ಶರಣಾರ್ತಿ.

(ಊರು, ತಾರೀಕು)

೯.

ಸಾಲವಿಲ್ಲವೆನ್ನುವುದು.

ಮ॥ ರಾಮಣ್ಣನವರ ಸ॥ ಕ್ಕೆ.
ಉಭಯಕುಶಲೋಪರಿ;

ನಾನು ಮನೆಯಲ್ಲಿಲ್ಲದಾಗ ತಾವು ದಯವಿಟ್ಟು ಬಂದೆರಡುಸಲ ನನ್ನನ್ನು ಹುಡುಕಿಕೊಂಡು ಬಂದಿದ್ದರೆಂದು ಕೇಳಿದೆನು; ಈ ದಿನ ಬಂದ

ಕಾಗದಗಳಲ್ಲಿ ೨೫ ರೂಪಾಯಿ ಸಾಲವಾಗಿ ಕೊಡಬೇಕೆಂದು ಬರೆಯೋಣವಾಗಿದೆ. ನನಗೂ ತಮಗೂ ಲೇವಾದೇವಿ ನಡಿಸುವಷ್ಟು ಪರಿಚಯ ಉಂಟಾಗಿದೆ ಎಂದು ತಾವು ಊಹಿಸಿದ್ದು ನೋಡಿ, ನನಗೆ ಆಶ್ಚರ್ಯವಾಗುತ್ತದೆ. ಒಂದೆರಡು ಸಲ ಮಾತ್ರವೇ ನೋಡಿರುವವರಿಗೆಲ್ಲಾ ನಾನು ಸಾಲಕೊಡುವುದನ್ನು ಮೊದಲುಮಾಡಿದರೆ ನನ್ನ ಆಪ್ತಸ್ನೇಹಿತರಿಗೆ ನಾನು ಸಹಾಯಮಾಡುವುದು ಹೇಗೆ? ತಮ್ಮಂತಾ ದೊಡ್ಡ ಮನುಷ್ಯರಿಗೆ ನನ್ನ ಮೊನ್ನೆಯ ಪರಿಚಯಸ್ಥರಿಗಿಂತ ಆಪ್ತರಾದ ಸ್ನೇಹಿತರು ಯಾರೂ ಇಲ್ಲವೆಂದು ನಂಬಲಾರೆನು. ಅದು ಹೇಗಾದರೂ ಇರಲಿ; ಈಗ ಸಾಲವನ್ನು ಕೊಡಲು ನನಗೆ ಅನುಕೂಲವಾಗಿಲ್ಲವಾದ್ದರಿಂದ ಕ್ಷಮಿಸಬೇಕು.

ತಮ್ಮ ವಿಧೇಯ
ರಂಗಣ್ಣನ ವಿಜ್ಞಾಪನೆ.

(ಊರು, ತಾರೀಖು.)

## ೧೦.

## ಸಾಮಾನುಗಳನ್ನು ಕಳುಹಿಸಬೇಕೆಂದು ಕೇಳುವುದು.

ಬೆಂಗಳೂರಲ್ಲಿರುವ ಜವಳಿ ಸಾಹುಕಾರರು

ಮ॥ ಲಿಂಗಣ್ಣನವರ ಸ॥ ಕ್ಕೆ.

ಬಳ್ಳಾರಿಯಲ್ಲಿರುವ ಜವಳಿ ಅಂಗಡಿ ಮಲ್ಲಣ್ಣನ ಶರಣಾರ್ತಿ. ಈ ವರೆಗೆ ಉಭಯಕ್ಷೇಮೋಪರಿ;

ಬೆಂಗಳೂರು ಪ್ರಾಂತ್ಯದ ಜವಳಿ ಇಲ್ಲಿ ಖರ್ಚಾಗುವುದೆಂದು ತೋರಿ ಅಲ್ಲಿಂದ ತರಿಸಿಕೊಳ್ಳಬೇಕೆಂಬ ಕುತೂಹಲವಿದೆ. ಅಲ್ಲಿಂದ ಕಳುಹಿಸತಕ್ಕ ವರ್ತಕರು ನಮಗೆ ಯಾರೂ ಇದುವರೆಗೂ ಗೊತ್ತಾಗಿರಲಿಲ್ಲವಾಗಿ ಇಲ್ಲಿ ನಮ್ಮ ಸಾಹುಕಾರರು ಮ॥ ರತ್ನಮೊದಲಿಯಾರ್ರವರು ತಮ್ಮ ವಿಷಯವಾಗಿ ನಮಗೆ ಬಹಳ ಭರವಸೆಯನ್ನು ಹೇಳಿರುವುದರಿಂದ ತಮ್ಮ ಸನ್ನಿಧಾನಕ್ಕೆ ಬರೆದಿದೇನೆ. ಸದ್ಯಃ ತರಹವಾರಾಗಿ ಅಲ್ಲಿನ ಜವಳಿಯನ್ನು

ಅಜಮಾಯಿಷಿ ಬಗ್ಗೆ ೧,೦೦೦ ರೂಪಾಯಿನವರೆಗೆ ರೈಲ್ವೇ ಮೂಲಕ ಕಳುಹಿಸಿಕೊಟ್ಟಲ್ಲಿ ಅದನ್ನು ಖರ್ಚುಮಾಡಿ ನೋಡಿಕೊಂಡು, ಮುಂದಕ್ಕೆ ಬೇಕುಬೇಕಾದ ಹಾಗೆಲ್ಲಾ ತರಿಸಿಕೊಳ್ಳುತ ಬರುತೇನೆ. ನನ್ನ ವಿಷಯವಾಗಿ ಅಲ್ಲಿಯ ತರಗಿನಮಂಡಿ ಬೊಮ್ಮಸಂದ್ರದ ವೀರಣ್ಣಶೆಟ್ಟಿರನ್ನು ವಿಚಾರಿಸಿ ತಿಳಿದುಕೊಳ್ಳಬಹುದು.

ಈ ವಿಷಯದಲ್ಲಿ ಜಾಗ್ರತೆಯಾಗಿ ಪ್ರತ್ಯುತ್ತರವನ್ನು ಬೇಡುವ
ಮಲ್ಲಣ್ಣನ ಶರಣಾರ್ತಿ.

ಬಳ್ಳಾರಿ, ಶುಕ್ರವಾರಪೇಟೆ,
೧೮ನೇ ಜುಲೈ, ೧೮೯೩.

೧೧.

## ಇದಕ್ಕೆ ಉತ್ತರ.

ಬೆಂಗಳೂರು,
೨೫ನೇ ಜುಲೈ ೧೮೯೩.

ಬಳ್ಳಾರಿಯಲ್ಲಿರುವ ಜವಳೀ ಅಂಗಡೀ ಸಾಹುಕಾರರು
ರಾಜಮಾನ್ಯ ರಾಜಶ್ರೀ ಮಲ್ಲಣ್ಣನವರ ಸ|| ಕ್ಕೆ.

ಬೆಂಗಳೂರು ಲಿಂಗಣ್ಣನ ಶರಣಾರ್ತಿ.

ಈ ವರೆಗೆ ಉಭಯ ಕ್ಷೇಮೋಪರಿ:

ತಮ್ಮ ಬಾಬತು ಈ ತಿಂಗಳು ೧೮ನೇ ತಾರೀಖಿನ ಕಾಗದದ ಪ್ರಕಾರ ಇದರಲ್ಲಿಟ್ಟಿರುವ ಪಟ್ಟಿಯಲ್ಲಿರುವಂತೆ ಜವಳಿಯನ್ನು ಈ ದಿವಸ ತಮ್ಮ ಸನ್ನಿಧಾನಕ್ಕೆ ರವಾನಿಸಿದೇನೆ. ನಮಗೆ ಪರಮಾಪ್ತರಾದ ರತ್ನ ಮೊದಲಿಯಾರ್ರವರೂ ವೀರಣ್ಣಶೆಟ್ಟರೂ ಇಬ್ಬರೂ ತಮ್ಮ ಯೋಗ್ಯತೆಯ ವಿಷಯವಾಗಿ ಬಹಳ ಹೇಳಿರುತಾರೆ. ತಮ್ಮಂತಾ ದೊಡ್ಡಮನುಷ್ಯರೊಂದಿಗೆ ಲೇವಾದೇವಿ ನಡಿಸಲು ನಮಗೆ ಬಹಳ ಸಂತೋಷವಾಗಿದೆ.

ನಮ್ಮ ನಡವಳಿಕೆಯ ಪದ್ಧತಿಯನ್ನನುಸರಿಸಿ, ಇದರ ಮೊಬಲಗ. ೧,೦೨೧ (ಒಂದು ಸಾವಿರದ ಇಪ್ಪತ್ತೊಂದು) ರೂಪಾಯಿಗೆ ಮೂರು ತಿಂಗಳು ವಾಯಿದೆಯ ಹುಂಡಿಯನ್ನು ತಮ್ಮ ಹೆಸರಿಗೆ ಬರೆದು, ಇದರೊಡನೆ ಕಳುಹಿಸಿರುವುದನ್ನು ದಯವಿಟ್ಟು ತಮ್ಮ ರುಜುವಿನೊಡನೆ ವಾಪಸು ಮಾಡಬೇಕೆಂದು ಬೇಡುತ್ತೇನೆ.

ಇಂತೀ ಶರಣಾರ್ಥಿ.

## ೧೨.

## ಭರವಸೆ ಹೇಳುವ ಕಾಗದ.

ಅಖಂಡಿತೈಶ್ವರ್ಯ ಸಂಪನ್ನರಾದ ರಾಜಮಾನ್ಯ ರಾಜಶ್ರೀ ಜವಳೀ ಲಿಂಗಣ್ಣನವರ ಸಮುಕ್ಷಮುಕ್ಕೆ.

ತಮ್ಮ ಮಿತ್ರ ರತ್ನಮೊದಲಿಯಾರ್ರ ವಿನಯಾರ್ಥ.

ಈ ಜೂನ್ ತಿಂಗಳ ೨೮ನೇ ತಾ|| ನ ವರೆಗೆ ಬಳ್ಳಾರಿಯಲ್ಲಿ ನಾನು ಕ್ಷೇಮ; ತಮ್ಮ ಸುಕ್ಷೇಮಕ್ಕೆ ಪದೇ ಪದೇ ಬರಿಸಿ ಕಳುಹಿಸುತಿರಬೇಕು. ತರುವಾಯ,

ನಮ್ಮೂರಲ್ಲಿ ಜವಳಿಯ ವ್ಯಾಪಾರವನ್ನು ವಿಶಾಲವಾಗಿ ನಡಿಸುತಿರುವ ಮಲ್ಲಣ್ಣನವರು ಬೆಂಗಳೂರಲ್ಲಿ ತಕ್ಕ ಗಿರಾಕಿಯನ್ನು ಹೊಂದಿಸಿಕೊಳ್ಳಬೇಕೆಂದು ಕುತೂಹಲವುಳ್ಳವರಾಗಿದಾರೆ. ಇವರು ಬಹಳ ಯೋಗ್ಯರಾಗಿಯೂ, ಖಾತರಾದವರಾಗಿಯೂ ಇರುವುದರಿಂದ ತಮ್ಮೊಡನೆ ಲೇವಾದೇವಿ ನಡಿಸಲು ತಕ್ಕ ಯೋಗ್ಯರೆಂದು ನಂಬಿ, ಅವರಿಗೆ ತಮ್ಮ ಹೆಸರನ್ನು ತಿಳಿಸಿದೇನೆ. ಅವರು ಹೇಗೆ ಹೇಗೆ ಇಷ್ಟಪಟ್ಟು ತಮಗೆ ಬರೆದರೆ ಹಾಗೆಹಾಗೆ ಎಷ್ಟುಮಟ್ಟಿಗಾದರೂ ಸರಕುಗಳನ್ನು ನಂಬಿ ಕಳುಹಿಸಬಹುದಾಗಿದೆ. ಇದರ ಭರವಸೆಯು ತಮಗೇ ಮುಂದೆ ಕಾಣಬರುತ್ತದೆ. ತಮಗೆ ಬಳಕೆಯುಂಟಾಗುವವರೆಗೂ ಸದ್ಯಃ ೧೦,೦೦೦ ರೂಪಾಯಿನವ

ರೆಗೂ ಇದು ಮೊದಲುಗೊಂಡು ಒಂದು ವರ್ಷ ನಾನು ಜವಾಬ್ದಾರನಾಗಿ ರುತ್ತೇನೆ.

ತಮ್ಮಂತ ಸಕಲವೂ ತಿಳಿದವರಿಗೆ ಇನ್ನು ವಿಶೇಷ ಬರೆಯುತಕ್ಕದೇನು?

ಇಂತೀ ವಿನಯಾರ್ಥ.

## ೧೩.

## ಸರಕುಗಳಲ್ಲಿ ತಪ್ಪು ತೋರಿಸುವುದು.

ರಾ|| ರಾ|| ಸಾಹುಕಾರ್ ಲಿಂಗಣ್ಣನವರ ಸ|| ಕ್ಕೆ.

ಉಭಯ ಕ್ಷೇಮೋಪರಿ.

ತಾವು ನೇ ತಾರೀಖಿನಲ್ಲಿ ಬೆಂಗಳೂರಿಂದ ರವಾನಿಸಿದ ಜವಳಿಯ ಮೂಟೆಯು ಬಂದು ತಲಪಿತು. ನಾವು ಕಳುಹಿಸಿದ ಕಾಗದದಂತೆ ಸರಿಯಾಗಿಲ್ಲವಾದ್ದರಿಂದ ಅದನ್ನು ಅಮಾನತ್ತಾಗಿಟ್ಟು, ತಮಗೆ ತಿಳಿಯಪಡಿಸಿದೇನೆ. ಅಂಚು ತಿರುಗಿರುವ ಪುಟಾಣಿ ಸೀರೆಗಳನ್ನು ಕಳುಹಿಸಬೇಕೆಂದು ಬರೆದುದಕ್ಕೆ ಬೇರೆ ತರಹಾದವನ್ನು ಕಳುಹಿಸೋಣವಾಗಿದೆ. ಇವು ಇಲ್ಲಿ ಸುಲಭವಾಗಿ ಖರ್ಚಾಗುವುದಿಲ್ಲ. ಆದರೆ ಸನಗಿಗೆ ತಮ್ಮ ಪಟ್ಟಿಯಲ್ಲಿ ನಮೂದಿಸಿರುವ ಬೆಲೆಗೆ ೨ ರೂಪಾಯಿನಂತೆ ಕಮ್ಮಿ ಮಾಡಿದರೆ ಅವನ್ನು ಇಲ್ಲಿಯೇ ಇಟ್ಟುಕೊಳ್ಳುವೆವು. ರೇಷ್ಮೆ ರುಮಾಲುಗಳಲ್ಲಿ ಹಾಕಿರುವ ಸರಿಗೆಯೂ ರೇಷ್ಮೆಯೂ ಬಹಳ ಕಿರದಾದುದರಿಂದ ಅವುಗಳಲ್ಲಿಯೂ ಸೇಕಡಾ ೫ ರೂ. ನಂತೆ ತಮ್ಮ ಪಟ್ಟಿಯ ಖರೀದಿಯಲ್ಲಿ ಕಮ್ಮಿ ಮಾಡಬೇಕು.

ಇದಕ್ಕೆ ತಮ್ಮ ಉತ್ತರ ಬರುವ ವರೆಗೆ ತಮ್ಮ ಮಾಲುಗಳನ್ನು ಅಮಾನತ್ತಾಗಿ ನಿಲ್ಲಿಸಿಕೊಂಡಿದೇವೆ. ಕೃತವಿರಬೇಕು.

ಮಲ್ಲಣ್ಣನ ವಿಜ್ಞಾಪನೆ.

ಬಳ್ಳಾರಿ,

೨ನೇ ಸೆಪ್ಟಂಬರ್, ೧೮೯೩.

೧೪.

## ಇದಕ್ಕೆ ಉತ್ತರ.

ಮ॥ ಜವಳಿ ಅಂಗಡಿ ಸಾಹುಕಾರರು ಮಲ್ಲಣ್ಣನವರ ಸ॥ ಕ್ಕೆ.

ಸೇವಕ ಲಿಂಗಣ್ಣನ ಶರಣಾರ್ತಿ.

ಸೆಪ್ಟಂಬರ್ ೪ನೇ ತಾರೀಖಿನವರೆಗೆ ಉಭಯ ಕ್ಷೇಮೋಪರಿ: ಇದೇ ತಿಂಗಳು ೨ನೇ ತಾರೀಖಿನ ತಮ್ಮ ಕಾಗದವನ್ನು ನೋಡಿ, ನನಗೆ ಬಹಳ ಆಶ್ಚರ್ಯವಾಯಿತು. ನಮಗೆ ಪರಸ್ಥಳದ ಗಿರಾಕಿಗಳು ತಮ್ಮಂತಾ ದೊಡ್ಡ ಮನುಷ್ಯರು ಅನೇಕರಿದ್ದಾರೆ. ಇದುವರೆಗೆ ನಾವು ಕಳುಹಿಸಿದ ಸರಕುಗಳ ವಿಷಯವಾಗಿ ಯಾರೂ ಇಂತಾ ಆಕ್ಷೇಪಣೆಗಳನ್ನು ಮಾಡಿದ್ದಿಲ್ಲ. ನಾವು ಕಳುಹಿಸಿರುವ ಮಾಲುಗಳೆಲ್ಲಾ ತಮ್ಮ ಕಾಗದದಲ್ಲಿ ಕೇಳಿದುದಕ್ಕೆ ಅನುಸಾರವಾಗಿಯೇ ಇವೆ. ರುಮಾಲುಗಳಿಗೆ ಹಾಕಿರುವ ರೇಷ್ಮೆಯೂ ಸರಿಗೆಯೂ ಈ ಊರು ಪೇಟೆಯಲ್ಲಿ ಆ ತರಹಾದ ಸನಗಿಗೆ ಮಾಮೂಲ್ ಮೇರೆಗೆ ಹಾಕತಕ್ಕವೇ ಆಗಿವೆ. ಹೀಗಿರಲು, ತಮ್ಮ ಕೋರಿಕೆಯ ಪ್ರಕಾರ ಖರೀದಿಯ ದರವನ್ನು ಕಡಮೆ ಮಾಡತಕ್ಕದ್ದಕ್ಕಾಗಲಿ ಮಾಲನ್ನು ವಾಪಸು ತರಿಸಿಕೊಳ್ಳುವುದಕ್ಕಾಗಲಿ ಕಾರಣವಿಲ್ಲ.

ನಮಗೆ ತಮಗೆ ಇದುವರಿಗೆ ನಡೆದು ಬಂದಿರುವ ಬಳಕೆಯಲ್ಲಿ ಈ ವಿಷಯವಾಗಿ ವೈಷಮ್ಯವನ್ನು ಬೆಳಸಬೇಕೆಂಬ ತಾತ್ಪರ್ಯವಿಲ್ಲ. ನಾವು ಮಾಡಿರುವುದರಲ್ಲಿ ಏನೂ ಹೆಚ್ಚು ಕಡಮೆ ಇಲ್ಲವೆಂಬ ನಂಬುಗೆ ಸಂಪೂರ್ಣವಾಗಿರುವುದರಿಂದ, ಈ ವಿಷಯಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನೆಲ್ಲಾ ನಮ್ಮ ಆಪ್ತರಾಗಿರುವ ರತ್ನಮೊದಲಿಯಾರ್ರಲ್ಲಿ ಕಳುಹಿಸಿದೇನೆ. ಅಲ್ಲಿನ ದೊಡ್ಡಮನುಷ್ಯರು ನಾಲ್ವರು ಸೇರಿ, ಈ ವಿಷಯದಲ್ಲಿ ಹೇಗೆ ಮಾಡಿದರೆ ಹಾಗೆ ಒಪ್ಪಬೇಕೆಂದು ಅವರಿಗೆ ಬರದಿದೇನೆ. ಆದ್ದರಿಂದ ತಮಗೆ ಪಂಚಾಯಿತಿಮಾಡಿ ಫೈಸಲ್ಮಾಡಿಕೊಳ್ಳುವುದಕ್ಕೆ ಇಷ್ಟವಿದ್ದರೆ, ಸದರಿ ರತ್ನಮೊದಲಿಯಾರ್ರವರಿಗೆ ತಿಳಿಯಪಡಿಸಬೇಕು.

ಇಂತೀ ಶರಣಾರ್ತಿ.

## ವಿವಿಧ ವಿಷಯಗಳ ಕಾಗದಗಳು.

೧.

ಗುರುವಾರ.

ಮೆ॥ ರಂಗಣ್ಣನವರ ಪರಾಮರಿಕೆ ಬಗ್ಗೆ.

ತಮ್ಮ ಆಜ್ಞಾನುಸಾರವಾಗಿ ನಾಳೆ ಭೋಜನಕ್ಕೆ ಅಗತ್ಯವಾಗಿ ಬರುತ್ತೇನೆ. ತಮ್ಮ ಮನೆಯಲ್ಲಿ ಇಂತಾ ಶುಭದಿನಗಳು ಪದೇಪದೇ ಬರುತ್ತಿರಬೇಕೆಂದು ಕೋರುವ

ರಾಮಯ್ಯನ ವಿಜ್ಞಾಪನೆ.

೨.

ಮಹಾರಾಜಶ್ರೀಯವರು ಪರಾಮರಿಸತಕ್ಕ ಬಗ್ಗೆ.

ಅನಾನುಕೂಲವಿಲ್ಲದಿದ್ದರೆ ತಮ್ಮ ಆಜ್ಞೆಯನ್ನು ಸಿರಸಾವಹಿಸಿ ಬರುತ್ತಿದ್ದೆನು. ಆದರೆ ನಾಳೆ ನಮ್ಮ ಮನೆಗೆ ಕೆಲವು ಮಂದಿ ಸ್ನೇಹಿತರನ್ನು ಔತಣಕ್ಕೆ ಕರೆದಿದೇನೆಯಾದ್ದರಿಂದ ಬರಲು ಯತ್ನವಿಲ್ಲ. ತಮ್ಮ ಸುಕುಮಾರನಿಗೆ ಇಂತಾ ಹಬ್ಬಗಳು ಅನೇಕ ಉಂಟಾಗಿ ಆರೋಗ್ಯಭಾಗ್ಯಗಳು ಯಾವಾಗಲೂ ಹೆಚ್ಚುತ್ತಿರಬೇಕೆಂಬುವುದು.

ತಮ್ಮ ಮಿತ್ರ
ರಾಮಯ್ಯನ ಹರಿಕೆ.

೩.

ಊರು,
೧—೬—೯೩.

ನನ್ನ ಆಪದ್ಬಂಧುಗಳಾದ ಸುಬ್ಬರಾಯರವರ ಸನ್ನಿಧಾನಕ್ಕೆ.

ನನ್ನ ಪ್ರಿಯಪತ್ನಿಯನ್ನಗಲಿದ ದುಃಖದಲ್ಲಿ ಮುಳಗಿದ್ದಾಗ ತಮ್ಮ ಕಾಗದವು ಬಂದು ತಲಪಿದ್ದರಿಂದ ಇದುವರೆಗೆ ಪ್ರತ್ಯುತ್ತರ ಕೊಡಲಿಲ್ಲ.

ಆ ಕಾಲದಲ್ಲಿ ತಾವುಪಟ್ಟ ಪಶ್ಚಾತ್ತಾಪವನ್ನು ನಾನೆಂದಿಗೂ ಮರೆಯಲಾರೆನು. ಈಗಲೂ ದಿಕ್ಕು ತೋರುವುದಿಲ್ಲ; ಮನೆಯಲ್ಲೆಲ್ಲಿ ನೋಡಿದರೂ ಅವಳನ್ನು ಕಳದುಕೊಂಡು, ಇನ್ನೂ ಬದುಕಿರುವ ನನ್ನ ದೌರ್ಭಾಗ್ಯವೇ ಎದುರಿಗೆ ಬಂದು ನಿಂತುಕೊಳ್ಳುವಹಾಗಿದೆ. ಸಾಯುವಾಗ ನಮ್ಮ ಮಗುವಿನ ಯೋಗಕ್ಷೇಮಕ್ಕೆ ಯಾರೂದಿಕ್ಕಿಲ್ಲವೆಂದು ಅತ್ತುಕೊಂಡು ಹೋದಳು. ಆ ಮಗುವಿಗೋಸ್ಕರ ಈ ಕಠಿಣವಾದ ಪ್ರಪಂಚದಲ್ಲಿ ನಾನು ಪರಮೇಶ್ವರನ ದಯೆಬರುವವರೆಗೂ ಗೋಳಾಡಿಕೊಂಡಿರಬೇಕಾಗಿದೆ. ಇದು

ತಮ್ಮ ರಂಗರಾಯನ
ವಿಜ್ಞಾಪನೆ.

೪.

ಯಜಮಾನರವರ ಚರಣ ಸನ್ನಿಧಾನಂಗಳಿಗೆ.

ನಿಮ್ಮ ಪ್ರಿಯಳಾದ ಸುಂದರಿಯು ವಿಜ್ಞಾಪನೆ.

ಈ ವರೆಗೆ ಚಿರಂಜೀವಿಗಳೊಡನೆ ನಾನೂ ಕ್ಷೇಮವಾಗಿದೇನೆ. ತಮ್ಮ ಸುಕ್ಷೇಮಾತಿಶಯಗಳ ವಿಷಯವಾಗಿ ಪದೇ ಪದೇ ಬರೆಯುತಿರಬೇಕೆಂದು ಬೇಡುತೇನೆ. ತರುವಾಯ

ತಾವು ಮನೆಯಿಂದ ಹೊರಟುಹೋಗಿ ಒಂದು ತಿಂಗಳಾಗಿ ಬಂತು; ಈವರೆಗೂ ಮೂರೇ ಕಾಗದ ಬಂದಿರುವುವು. ಅಲ್ಲಿ ಕೆಲಸ ಹೇಗಿರುವುದೋ? ಆದರೂ ಎರಡು ದಿನ, ಮೂರು ದಿನಕ್ಕೆ ಒಂದೊಂದು ಪಜ್ಜೆ ಬರೆಯುತಿದ್ದರೆ ನಮಗೆಲ್ಲಾ ಯೋಗಕ್ಷೇಮ ಸಮಾಚಾರ ತಿಳದು ಧೈರ್ಯವಾಗುವುದು.

ಈಚಿಗೆ ಚಿ॥ ಕೃಷ್ಣನಿಗೆ ಒಂದು ದಿನ ನೆಗಡಿ ತಲೆನೋವು ಬಂದು, ವಾಸಿಯಾದುದು ವಿನಾ ಮಕ್ಕಳೆಲ್ಲರೂ ನೆಮ್ಮದಿಯಾಗಿದಾರೆ. ತುಂಟಾಟ ಮಾತ್ರ ಬಹಳವಾಗಿದೆ. ಒಂದು ದಿನಕ್ಕೆ ಹತ್ತುಸಲವಾದರೂ ಹುಡುಗರೆಲ್ಲರೂ ತಾವು ಬರಲಿಲ್ಲವೆಂದು ನೆನದುಕೊಳ್ಳುತ್ತಾರೆ.

ನಮ್ಮ ಕರೀ ಕಡಸು ಮೊನ್ನೆ ಶುಕ್ರವಾರ ಮಧ್ಯಾಹ್ನ ಹೆಂಗರುವನ್ನು ಹಾಕಿತು. ಕರು ಬಹಳ ಮುದ್ದಾಗಿದೆ. ಹಸು ಈಗಾಗಲೇ ಎರಡುಸೇರು ಹಾಲು ಕರೆಯುತಿದೆ. ಇನ್ನುಮೇಲೆ ಬೆಳಗಿನ ಹೊತ್ತು ನಿಮ್ಮ ಕಾಫೀಗೆ ಹಾಲು ಮಾರುವವನು ಬರುವ ವರೆಗೂ ಕಾಯಬೇಕೆಂಬ ತೊಂದರೆ ತಪ್ಪಿತು.

ನಮ್ಮ ಮನೆಯ ಪಕ್ಕದಲ್ಲಿ ಬೋರಿ ಎಂಬ ಬಡಮುದಕಿ ಗುಡಿಸಲು ಹಾಕಿಕೊಂಡು ಇದ್ದುದು ಸರಿಯಷ್ಟೆ. ಮೂರು ದಿನದ ಕೆಳಗೆ ಅವಳ ಮನೆಗೆ ಬೆಂಕಿ ಬಿದ್ದು, ಇದ್ದಬದ್ದುದೆಲ್ಲಾ ಸುಟ್ಟು ಬೂದಿಯಾಗಿ ಹೋಯಿತು. ಅವಳಿಗೆ ನಮ್ಮ ಕೊಟ್ಟಿಗೆಯಲ್ಲಿ ಇರುವುದಕ್ಕೆ ಸದ್ಯಃ ಸ್ಥಳ ಕೊಟ್ಟಿದೇನೆ. ಕೆಲವು ಹಳೇ ಬಟ್ಟೆ ಪಾತ್ರೆಗಳು ಮುಂತಾದವನ್ನೂ ತಾವಿಲ್ಲದಿದ್ದರೂ ಕೇಳಿದರೆ ಒಪ್ಪುವಿರೆಂಬ ಭರವಸೆಯಿಂದ ಕೊಟ್ಟಿದೇನೆ.

ಇಲ್ಲಿನ್ನೆನೂ ವಿಶೇಷವಿಲ್ಲ. ಮುಖ್ಯವಾಗಿ ನಾವೆಲ್ಲರೂ ತಮ್ಮನ್ನು ಜಾಗ್ರತೆಯಾಗಿ ನೋಡಬೇಕೆಂದು ಬಹಳ ಆಶೆಯಿಂದ ನಿರೀಕ್ಷಿಸಿಕೊಂಡಿದೇವೆ.

ಇದೇ ತಮ್ಮ ಪ್ರಿಯ ಪತ್ನಿಯ ವಿಜ್ಞಾಪನೆ.

ರಾಮನಗರ,
ವೈಶಾಖ ಶು॥ ೯.

## ೫.

## ಸೌಭಾಗ್ಯವತಿಯು ನೋಡಿಕೊಳ್ಳತಕ್ಕ ಬಗ್ಗೆ.

ಈ ವರೆಗೆ ಉಭಯಕುಶಲೋಪರಿ :

ಈಗ ನಿನ್ನ ಕಾಗದ ತಲಪಿ ಬಹಳ ಸಂತೋಷವಾಯಿತು. ನಾನು ಹಗಲೂ ರಾತ್ರಿ ಇಲ್ಲಿ ಬಂದ ಕೆಲಸದಲ್ಲಿಯೇ ಇರುವುದರಿಂದ ಸರಿಯಾಗಿ ಕಾಗದಗಳನ್ನು ಬರೆಯುವದಕ್ಕೆ ಪುರಸತ್ತಾಗಲಿಲ್ಲ. ಇನ್ನು ೪ ೫ ದಿನಗಳಲ್ಲಿ ಇಲ್ಲಿನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಬರುತ್ತೇನೆ. ಮನೆ

ಯಲ್ಲಿ ಮಕ್ಕಳೊಡನೆ ಇದ್ದುಕೊಂಡಿರುವ ನಿಮಗೆ ನನ್ನನ್ನು ಬಿಟ್ಟಿರುವು ದಿಷ್ಟುಕಷ್ಟವಾಗಿ ತೋರಿದರೆ, ಇಲ್ಲಿ ಗ್ರಾಮೈಕರಾತ್ರಿಯಾಗಿ ಮನೆಬಾ ಗಿಲು ಬಿಟ್ಟು, ಅಲೆಯುತಿರುವ ನನಗಿನ್ನೆಷ್ಟು ತೊಂದರೆಯಾಗಿರಬೇಕು ?

ಇದರಲ್ಲಿ ಕಷ್ಟವಿದ್ದರೂ ಸುಖವೂ ಇಲ್ಲವೆಂದು ಹೇಳುವುದಕ್ಕಿಲ್ಲ. ಇಲ್ಲಿ ದಾರಿಯ ಮೇಲೆ ಹೋಗುವಾಗ ಕೆಲವು ಕಾಡುಗಳು ಸಿಕ್ಕುತವೆ; ಅವುಗಳ ರಮಣೀಯತೆಯನ್ನು ವರ್ಣಿಸುವುದಕ್ಕೆ ಆಗುವುದಿಲ್ಲ. ಒಂದು ಮೈಲಿ ಎರಡು ಮೈಲಿ ದೂರಗಳ ವರೆಗೂ ಗಿಡಗಳ ಮೇಲೆಯೇ ನಡೆದು ಕೊಂಡು ಹೋಗಬಹುದು; ಅಷ್ಟು ಒತ್ತಾಗಿವೆ. ಗಿಡಗಳ ಎತ್ತರವನ್ನು ದೂರದಿಂದ ನೋಡಿದರೆ ಅವೆಲ್ಲಾ ಬೆಟ್ಟದ ಮೇಲೆ ಬೆಳದು, ಮೇಲಿನ ಭಾಗಮಾತ್ರ ಕಾಣಬರುತಿದೆಯೋ ಎಂಬಹಾಗೆ ತೋರುತವೆ. ಅಲ್ಲಲ್ಲಿ ಜಿಂಕೆಗಳು ಹಿಂಡುಹಿಂಡಾಗಿ ಓಡುತಿವೆ; ಕೆಲವು ಕಡೆ ಕಾಡುಕೋಣ ಗಳು ಕಾಣುತವೆ. ಒಂದುಸಾರಿ ೪೦–೫೦ ಆನೆಗಳ ಗುಂಪು ಬಹಳ ಹತ್ತಿರ ಹೋಯಿತು.

ಮೊನ್ನೆ ಮಧ್ಯಾಹ್ನ ಕಾಡೆಲ್ಲಾ ಸುತ್ತಿಕೊಂಡು ಹೋಗುವಾಗ ಒಂದು ತಿಳಿನೀರಿನ ಕೊಳದ ಬಳಿಯಲ್ಲಿ ಅಡಿಗೆ ಸಿದ್ಧಮಾಡಿಕೊಂಡಿದ್ದರು. ಆ ಕೊಳದ ಅಂದವನ್ನು ನಮ್ಮ ಪ್ರಾಂತ್ಯದಲ್ಲಿ ನೋಡಬೇಕೆಂದರಾಗುವು ದಿಲ್ಲ. ಸೂಜಿಯನ್ನು ಒಳಗೆ ಹಾಕಿದರೆ ಮೇಲಕ್ಕೆ ಕಾಣುತಿರುವುದು. ಅಲ್ಲಿ ಸ್ನಾನಮಾಡಿ, ಆ ಕೊಳದ ಪಾವಟಿಗೆಯ ಮೇಲೆ ಊಟಕ್ಕೆ ಕೂತು ಕೊಂಡಾಗ, ಪರಮ ಸುಖಕ್ಕೆ ನನ್ನ ಸುಂದರಿಯು ನನ್ನ ಸಮೀಪದಲ್ಲಿಲ್ಲ ವಲ್ಲ ಎಂಬ ಯೋಚನೆಯೊಂದೇ ಕೊರತೆಯನ್ನುಂಟುಮಾಡುತಿತ್ತು.

ಮಕ್ಕಳನ್ನು ಜಾಗ್ರತೆಯಿಂದ ನೋಡಿಕೊಂಡಿರಬೇಕು. ಅವರಿಬ್ಬ ರಿಗೂ ಆಡುವ ಸಾಮಾನುಗಳ ಎರಡು ಹೊರೆಯನ್ನು ಕೂಡಿಸಿಟ್ಟಿದೇನೆ, ಅದಲ್ಲದೆ ಒಂದು ಮುದ್ದಾದ ಜಿಂಕೆಯ ಮರಿಯನ್ನೂ ಎರಡು ನವಿಲುಗ ಳನ್ನೂ ತರುತೇನೆ.

ಪಾಪ: ಆ ಬೋರಿಗೆ ನೀನು ಎಷ್ಟು ಉಪಕಾರ ಮಾಡಿದರೂ ನನಗೆ ಸಂತೋಷವೇ.

ಚಿರಂಜೀವಿಗಳೊಡನೆ ನಿನೂ ಸೌಖ್ಯವಾಗಿರುವೆ ಎಂಬುದು ಅಹ ರ್ನಿಶಿಯೂ ನಿನ್ನನ್ನೇ ಸ್ಮರಿಸಿಕೊಳ್ಳುತಿರುವ

ನಿನ್ನ ಪ್ರಿಯನ ಕೋರಿಕೆ.

ಕುಶಾಲನಗರ,
ನಂದನ, ವೈಶಾಖ ಶು|| ೧೪.

## ವಿಶೇಷವಾದ ಒಕ್ಕಣೆಗಳು.

ಈ ಪ್ರಕರಣದ ಪ್ರಾರಂಭದಲ್ಲಿ ಬರೆದಿರುವ ಒಕ್ಕಣೆಗಳು ಸಾಧಾರಣವಾದ ಸಂದರ್ಭಗಳಿಗೆಲ್ಲಾ ಸಾಕಾಗಿರುವುವು. ಆದರೆ ಕೆಲವರು ಗುರು ಮರ್ಯಾದೆ ಜಾತಿಪದ್ಧತಿ ಮುಂತಾದವುಗಳಿಗೆ ಅನುಸಾರವಾಗಿ ಬರೆಯ ಬೇಕೆಂದು ಅಪೇಕ್ಷಿಸ ಬಹುದು. ಇಂತವರ ಉಪಯೋಗಾರ್ಥವಾಗಿ ಅವುಗಳಲ್ಲಿ ಮುಖ್ಯವಾದವುಗಳನ್ನು ಈ ಕೆಳಗೆ ಬರೆದಿದೆ.

೧. ಶ್ರೀ ಶೃಂಗೇರಿಯ ಮಠಕ್ಕೆ.

ಶ್ರೀಮದ್ವಿದ್ಯಾ ಶಂಕರಗುರುವರ ಬ್ರಹ್ಮಸೇನವಃ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನಪ್ರಾಣಾಯಾಮ ಪ್ರತ್ಯಾಹಾರಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯ ವಿಚ್ಛಿನ್ನಗುರುಪರಂಪರಾಪ್ರಾಪ್ತ ಷಡ್ದರ್ಶನಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲನಿಗಮಾಗಮಸಾರ ಹೃದಯತ್ರಯೀ ಪ್ರತಿಪಾಲಕ ವೈದಿಕಮಾರ್ಗಪ್ರವರ್ತಕ ಸರ್ವತಂತ್ರಸ್ವತಂತ್ರಾದಿರಾಜಧಾನಿ ವಿದ್ಯಾನಗರಮಹಾರಾಜಧಾನೀ ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜಗುರು ಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ ತುಂಗಭದ್ರಾತೀರವಾಸಿ ಶ್ರೀಮದ್ವಿದ್ಯಾ ಶಂಕರಪಾದಪದ್ಮಾರಾಧಕ ಶ್ರೀಮತ್ಸಚ್ಚಿದಾನಂದಜಗದ್ಗುರು ನೃಸಿಂಹಭಾರತೀಸ್ವಾಮಿ ಕರಕಮಲಸಂಜಾತ ಶ್ರೀ ಶೃಂಗೇರೀ ಜಗದ್ಗುರು ಶ್ರೀಮತ್ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀಸ್ವಾಮಿಗಳವರ ಚರಣಸರಸೀರುಹಂಗಳ ಸನ್ನಿಧಿಗೆ,

## ೨. ಶ್ರೀಮದಹೋಬಲ ಮಠಕ್ಕೆ.

ಶ್ರೀಲಕ್ಷ್ಮೀನೃಸಿಂಹ ಪರಬ್ರಹ್ಮಣೇನಮಃ.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯಾಣಾಂ, ಪರಮಹಂಸಪರಿವ್ರಾಜಕಾಚಾರ್ಯಾಣಾಂ, ಸರ್ವತಂತ್ರಸ್ವತಂತ್ರೋಭಯವೇದಾಂತಾಚಾರ್ಯಾಣಾಂ ಶ್ರೀಭಗವದ್ರಾಮಾನುಜಸಿದ್ಧಾಂತನಿರ್ಧಾರಣಸಾರ್ವಭೌಮಾನಾಂ, ಶ್ರೀಮದಹೋಬಲಗುಹಾವಿಹಾರಿರಮಾನರಹರಿಚರಣ ಪಲ್ಲವತಲ್ಲಜಾನವರತ ಸೇವಾಸುಧಾಸ್ವಾದಸಂತುಷ್ಟಾಂತಃಕರಣಾನಾಂ, ಶ್ರೀವಣ್ ಶಠಕೋಪ ಶ್ರೀ ಶ್ರೀನಿವಾಸಯತೀಂದ್ರ ಮಹಾದೇಶಿಕಾನಾಂ, ದಿವ್ಯಚರಣಾರವಿಂದ ಯುಗಳೀಸನ್ನಿಧೌ.

## ೩. ಶ್ರೀ ಉತ್ತರಾದಿ ಮಠಕ್ಕೆ.

ಶ್ರೀಮದ್ರಾಮ ವೇದವ್ಯಾಸಾಯನಮಃ.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಾಣಾಂ, ಸರ್ವತಂತ್ರಸ್ವತಂತ್ರಾದ್ಯನೇಕ ಗುಣಗಣಾಲಂಕೃತಾನಾಂ, ಶ್ರೀಮದ್ವೈಷ್ಣವಸಿದ್ಧಾಂತ ಪ್ರತಿಷ್ಠಾಪನಾಚಾರ್ಯಾಣಾಂ, ಶ್ರೀಮದ್ರಾಮವೇದವ್ಯಾಸದಿವ್ಯಶ್ರೀಚರಣಾರಾಧಕಾನಾಂ, ಶ್ರೀಮದುತ್ತರಾದಿ ಮಠಾಧೀಶ್ವರಾಣಾಂ ಶ್ರೀ ಶ್ರೀಮತ್ಸತ್ಯವೀರಯತಿವರ ದಿವ್ಯಕರಕಮಲಸಂಜಾತ ಶ್ರೀಮತ್ಸತ್ಯಧೀರಯತಿವರ್ಯದಿವ್ಯಶ್ರೀಚರಣತಾಮರಸಯುಗಳದಿವ್ಯಸನ್ನಿಧೌ.

## ೪. ಶ್ರೀ ಪರಕಾಳ ಮಠಕ್ಕೆ.

ಶ್ರೀಲಕ್ಷ್ಮೀಹಯವದನ ಪರಬ್ರಹ್ಮಣೇನಮಃ.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯಾಣಾಂ, ಪರಮಹಂಸಪರಿವ್ರಾಜಕಾಚಾರ್ಯಾಣಾಂ, ಸರ್ವತಂತ್ರಸ್ವತಂತ್ರೋಭಯವೇದಾಂತಾಚಾರ್ಯಾಣಾಂ, ಶ್ರೀಮತ್ಕವಿಕಥಕಕಂಠೀರವ ಚರಣಯುಗಳ ವಿನ್ಯಸ್ತ ಸಮಸ್ತಾತ್ಮಭರಾಣಾಂ, ಶ್ರೀಭಗವದ್ರಾಮಾನುಜ ಸಿದ್ಧಾಂತನಿರ್ಧಾರಣ ಸಾರ್ವಭೌಮಾನಾಂ, ಶ್ರೀಮತಾಂ ಶ್ರೀ ಶ್ರೀಕೃಷ್ಣಬ್ರಹ್ಮತಂತ್ರಪರಕಾಲ ಯತೀಂದ್ರಮಹಾದೇಶಿಕಾನಾಂ, ದಿವ್ಯಚರಣಾರವಿಂದಯುಗಳದಿವ್ಯಸನ್ನಿಧೌ.

## ೫. ಶ್ರೀ ವ್ಯಾಸರಾಯ ಮಠಕ್ಕೆ.

ಶ್ರೀಸತ್ಯಭಾಮಾ ಸಮೇತ ಶ್ರೀಗೋಪಾಲಕೃಷ್ಣಾಯನಮಃ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಾಣಾಂ, ಶ್ರೀಮದ್ವೈಷ್ಣವ ಸಿದ್ಧಾಂತಪ್ರತಿಷ್ಠಾಪನಾಚಾರ್ಯಾಣಾಂ, ಶ್ರೀಮದ್ರಾಮಚಂದ್ರ ದಿವ್ಯಶ್ರೀಪಾದಪದ್ಮಾರಾಧಕಾನಾಂ, ಪದವಾಕ್ಯಪ್ರಮಾಣಪಾರಾವಾರಪಾರೀಣ ಸರ್ವತಂತ್ರಸ್ವತಂತ್ರಾಣಾಂ, ಶ್ರೀಮದ್ವ್ಯಾಸರಾಜದಿವ್ಯ ಶ್ರೀಸಿಂಹಾಸನಾಧೀಶ್ವರಾಣಾಂ, ಶ್ರೀಮದ್ವಿದ್ಯಾ ಶ್ರೀಧರತೀರ್ಥ ಶ್ರೀಪಾದಸ್ವಾಮಿ ಕರಕಮಲಸಂಜಾತ ಶ್ರೀಮದ್ವಿದ್ಯಾ ಶ್ರೀನಿವಾಸತೀರ್ಥ ಶ್ರೀಪಾದಸ್ವಾಮಿ ದಿವ್ಯಶ್ರೀ ಕರಕಮಲಸಂಜಾತ ಶ್ರೀಮದ್ವಿದ್ಯಾಸಮುದ್ರತೀರ್ಥ ಶ್ರೀಪಾದಸ್ವಾಮಿನಾಂ, ದಿವ್ಯಶ್ರೀಚರಣನಳಿನಯುಗಳಸನ್ನಿಧೌ.

## ೬. ಶ್ರೀ ರಾಘವೇಂದ್ರಸ್ವಾಮಿಗಳ ಮಠಕ್ಕೆ

ಶ್ರೀರಾಮಚಂದ್ರಾಯನಮಃ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಾಣಾಂ, ಅನೇಕಗುಣಸಂಪನ್ನ ಪದವಾಕ್ಯಪ್ರಮಾಣ ಪಾರಾವಾರಪಾರಂಗತಾನಾಂ, ಸರ್ವತಂತ್ರಸ್ವತಂತ್ರಾಣಾಂ, ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯಾಣಾಂ, ಸಂಸ್ಕೃತ್ಯಕಲಾಪಾರಸಂತಾರಣ ಧುರೀಣಾನಾಂ, ದೀನೋದ್ಧರಣನಿಪುಣಾನಾಂ, ಪಾಪೌಘನೀಹಾರಮಾಲಾಪರಿಹಾರಭಾಸ್ಕರಾಣಾಂ, ಸುರಸರಿದ್ದರ್ಶನಾದಿವಿಚಿತ್ರಚರಿತ್ರಾಣಾಂ, ಅತ್ಯದ್ಭುತಪೂರ್ವವಿಭವಸಂಪನ್ನಾನಾಂ, ಸರ್ವೋರ್ವೀಪತಿಚಕ್ರಚೂಡಾಮಣಿಶ್ರೇಣೀಶಾಣ ಕೋಣಕಷಣವಿಮಲೀಕೃತಪಾದಪೀಠಾನಾಂ, ಶ್ರೀಮದ್ರಾಘವೇಂದ್ರತೀರ್ಥಯತಿವರ್ಯದಿವ್ಯಶ್ರೀಮಠಮಧ್ಯವಿದ್ಯೋತಮಾನಾನಾಂ, ಶ್ರೀಮತ್ಸುಗುಣೇಂದ್ರತೀರ್ಥಸ್ವಾಮಿಕರಕಮಲಸಂಜಾತ ಶ್ರೀ ಶ್ರೀಮತ್ಸುಪ್ರಜ್ಞೇಂದ್ರತೀರ್ಥಸ್ವಾಮಿ ದಿವ್ಯಶ್ರೀಚರಣಸರೋಜಸನ್ನಿಧೌ.

## ೭. ವೀರಶೈವರ ಮುರಗೇಂದ್ರಸ್ವಾಮಿಯವರ ಮಠಕ್ಕೆ.

ಶ್ರೀಮತ್ಪರಮಪಾವನಚರಿತ್ರ ಚಾರುತರಸಂಮೋಹನಾಂಗ ಮದನಮರ್ದನ ಮಾಯಾಕೋಲಾಹಲ ನಿತ್ಯನಿರಂಜನನಿರಾಕಾರನಿಗಮಗೋಚರ ಸಚ್ಚಿದಾನಂದನಿತ್ಯಪರಿಪೂರ್ಣ ಹೃದಯಾ ಜಗದ್ವಿಸ್ತಾರ ಮೂಲಸ್ತಂಭಾಯಮಾನ ಪರಶಿವಸ್ವರೂಪ ಶ್ರೀಮದಲ್ಲಮಪ್ರಭುಸ್ವಾಮ್ಯನ್ವಯ ಸಂಜನಿತಾನಾಂ,

ಶ್ರೀಮದ್ವೀರಶೈವಸಿದ್ಧಾಂತ ಸಕಲಸಿಂಹಾಸನಾಧಿಪ ಪರಮಷಟ್‌ಸ್ಥಳಸ್ಥಾಪನಾಚಾರ್ಯವರ್ಯಾಣಾಂ, ಶ್ರೀಮದ್ದ್ರಾಕ್ಷಾಪುರಾಧೀಶದ್ರಾಕ್ಷಾರಾಮಕ್ಷೇತ್ರ ರಾಮನಾಥಲಿಂಗೋದ್ಭವ ಶ್ರೀಮಚ್ಛಿನ್ಮೂಲಾದ್ರಿ ಬೃಹನ್ಮಠಾಂತರಾಳಪರಿಶೋಭಿತ ಸತ್ಪ್ರಭುಮಂಡಿತೋರ್ಧ್ವಹೃದಯಾತ್ಮಕ ದಾರಾವತಿಶೂನ್ಯಸಿಂಹಾಸನಾಧೀಶ್ವರಾಣಾಂ.

೮. ರಾಮಾನುಜಮತಸ್ಥರು ತಮ್ಮ ಜನಗಳಿಗೆ ಪರಸ್ಪರ ಬರೆಯತಕ್ಕದ್ದು.

ಶ್ರೀಮತೇರಾಮಾನುಜಾಯನಮಃ.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯೋಭಯವೇದಾಂತ ಪ್ರವರ್ತಕರಾದ ಶ್ರೀಮಾ............ಚರಣಸರೋಜಂಗಳಿಗೆ.

ತಮ್ಮ ದಾಸಾನುದಾಸನಾದ............ಕೃತಾನೇಕ ಸಾಷ್ಟಾಂಗ ವಿಜ್ಞಾಪನೆ ಅದಾಗಿ.

೯. ರಾಮಾನುಜಮತಸ್ಥರಿಗೆ ಸ್ಮಾರ್ತರೇ ಮೊದಲಾದವರು ಬರೆಯತಕ್ಕದ್ದು.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯೋಭಯ ವೇದಾಂತಪ್ರವರ್ತಕರಾದ........................ಸಮಕ್ಷಮಂಗಳಿಗೆ.

೧೦. ವೈಶ್ಯರು ತಮ್ಮ ಜನಗಳಿಗೆ ಬರೆಯತಕ್ಕದ್ದು.

ಶ್ರೀಮತ್ಸಕಲಗುಣಸಂಪನ್ನರಾದ ನೀತಿಕಾರ್ಯಧುರಂಧರರಾದ ದೇವಬ್ರಾಹ್ಮಣಪೂಜಾ ವಿಧೇಯರಾದ ವಾಸವಾಂಬಾವರಪ್ರಸಾದಕರಾದ ಅಖಂಡಿತಲಕ್ಷ್ಮೈಶ್ವರ್ಯಸಂಪನ್ನರಾದ...... ..............................ಗೆ ........................ ...ಮಾಡುವ ವಿಜ್ಞಾಪನೆ ಅದಾಗಿ.

೧೧. ವೀರಶೈವರ ಒಕ್ಕಣೆ.

ಶ್ರೀಮತ್ಸುಜ್ಞಾನಶುದ್ಧಶಿವಾಚಾರಸಂಪನ್ನರಾದ ಹರಗುರುಭಕ್ತಪರಾಯಣರಾದ ಗುರುಲಿಂಗಜಂಗಮಪ್ರೇಮಿಗಳಾದ ವಿಭೂತಿರುದ್ರಾಕ್ಷಮಾಲಿಕಾಭರಣಭೂಷಿತರಾದ ನಯವಿನಯದಯದಾಕ್ಷಿಣ್ಯಪರೋಪಕಾರಿಗಳಾದ ರಾಜಮಾನ್ಯರಾಜಶ್ರೀ.............................. ...........................

ಮಠಪತಿ ಮುಂತಾದವರಿಗೆ ಬರೆಯತಕ್ಕದ್ದು.

ಶ್ರೀಮತ್ಸಚ್ಚಿದಾನಂದ ಅವಿರಳ ಪರಂಜೋತಿ ಪರಬ್ರಹ್ಮಸ್ವರೂಪಿಗಳಾದ ಶ್ರೀಮದ್ಘನಲಿಂಗಚಕ್ರವರ್ತಿಗಳಾದಂತಾ ಫಲಹಾರಸ್ವಾಮಿಗಳವರ ಕರ ಕಂಜೋದ್ಭವರಾದ............ದೇವರವರ ಚರಣಸರೋಜಂಗಳಿಗೆ.

೧೦. ಪಾಂಚಾಳದವರು ತಮ್ಮ ಕುಲದವರಿಗೆ ಬರೆಯತಕ್ಕದ್ದು.

ಶ್ರೀಮತ್ಕಾಳಿಕಾದೇವಿ ಕಮಠೇಶ್ವರ ದಿವ್ಯಶ್ರೀಪಾದ ಪದ್ಮಾರಾಧಕರಾದಂತಾ ....................................ಗೆ

೧೧. ಹೆಂಗಸರಿಗೆ ಗಂಡನಿಲ್ಲದಿದ್ದರೆ.

ಮಾತೃಶ್ರೀಗಂಗಾಭಾಗೀರಥೀ ಸಮಾನರಾದಂತ..........................ಗೆ ಇವರಿಗೆ 'ಸೌಭಾಗ್ಯವತಿ' ಮುಂತಾದುವನ್ನು ಬರೆಯಕೂಡದು.

## ೨ನೆಯ ಭಾಗ.

### ಅರ್ಜಿಗಳು ಮತ್ತು ಸರ್ಕಾರ ಸಂಬಂಧವಾದ ಇತರ ಕಾಗದಗಳು.

25. ಕ್ಷೇಮಸಮಾಚಾರ ಮುಂತಾದ ಸಂಗತಿಗಳಲ್ಲಿ ಜನರು ಪರಸ್ಪರ ಬರೆದುಕೊಳ್ಳುವ ಕಾಗದಗಳಿಗೂ ಸರ್ಕಾರಕ್ಕೆ ಸಂಬಂಧಪಟ್ಟ ಕಾಗದಗಳಿಗೂ ಇರುವ ತಾರತಮ್ಯವೇನೆಂದರೆ, ಸಾಧಾರಣವಾಗಿ ಸರ್ಕಾರದ ವಿಷಯಗಳ ಕಾಗದ ಪತ್ರಗಳಲ್ಲಿ ವಿಶ್ವಾಸ ದಾಕ್ಷಿಣ್ಯ ಕೃತಜ್ಞತೆ ಮುಂತಾದ ಗುಣಗಳನ್ನು ತೋರ್ಪಡಿಸುವ ಅಥವಾ ಉಂಟುಮಾಡ ತಕ್ಕ ಆವಶ್ಯಕತೆ ಇರುವುದಿಲ್ಲ. ಆದ್ದರಿಂದ ಇವುಗಳಲ್ಲಿ ಸಾಧಾರಣವಾಗಿ ಎಷ್ಟು ಆವಶ್ಯಕವೋ ಅಷ್ಟನ್ನೇ ಬರೆಯಬೇಕು. ಅನೇಕ ವಿಷಯಗಳಲ್ಲಿ ಹೀಗೆಯೇ ನಡೆಯತಕ್ಕದ್ದೆಂದು ಕಾನೂನುಗಳಿಂದ ನಿರ್ಧಾರವಾಗಿರುವುದು. ಇಂತಾ ಸಂದರ್ಭಗಳಲ್ಲಿ ಅವಕ್ಕೆ ತಕ್ಕ ಅಧಿಕಾರಗಳನ್ನು ಎಷ್ಟು ವಿನಯವಾಗಿ ಬೇಡಿಕೊಂಡರೂ, ಆ ನಿಯಮಗಳನ್ನು ಉಲ್ಲಂಘಿಸುವುದಕ್ಕಿಲ್ಲ. ಮುಖ್ಯವಾಗಿ ಕೋರ್ಟುಗಳ ನಡವಳಿಕೆಗಳಲ್ಲಿ ಇದು ಸಂಪೂರ್ಣವಾಗಿಸಲ್ಲತಕ್ಕದ್ದು. ಕೆಲವು ಮುಲ್ಕೀ ವಿಷಯಗಳಲ್ಲಿ ಅಧಿಕಾರಿಗಳು ಸಮಯೋಚಿತವಾಗಿ ತಮ್ಮ ಇಷ್ಟಾನುಸಾರವಾಗಿ ಕೇಳಿಕೊಳ್ಳುವವರಿಗೆ ಉಪಕಾರವನ್ನು ಮಾಡಬಹುದಾಗಿರುತದೆ. ಇಂತಾ ಸಂದರ್ಭಗಳಲ್ಲಿ ಅರ್ಜಿಯನ್ನು ಬರೆದುಕೊಳ್ಳುವವರು ಈ ಉಪಕಾರಕ್ಕೆ ಅರ್ಹರೆಂದು ವ್ಯಕ್ತಪಡಿಸುವ ಹೆಚ್ಚು ಸಂಗತಿಗಳನ್ನು ಸ್ವಲ್ಪಮಟ್ಟಿಗೆ ಬರೆದುಕೊಳ್ಳಬಹುದೆಂದು ತೋರುತದೆ. ಹೇಗೆಂದರೆ, ದಾವೆಗೆ ವಾಯಿದೆ ಮೀರಿಹೋಗಿರುವಾಗ ಸಾಲವನ್ನು ಬರಮಾಡಿಕೊಳ್ಳಬೇಕೆಂಬುವವನು ತಾನು ಬಹಳ ಬಡವನು ದೊಡ್ಡ ಸಂಸಾರಿ ಎಂದು ಅರ್ಜಿಯಲ್ಲಿ ಬರೆದುಕೊಂಡ ಮಾತ್ರ

ದಿಂದಲೇ, ಕೋರ್ಟಿನವರು ಅವನ ಕಡೆ ಶೀಘ್ರವಾಡುವುದಕ್ಕಿಲ್ಲ. ಆದರೆ ಬಡವರಿಗೋಸ್ಕರ ಯಾವುದಾದರೂ ಒಂದು ಧರ್ಮವನ್ನು ಕಲ್ಪಿಸಿರುವ ಸಂದರ್ಭದಲ್ಲಿ ಅದರ ಪ್ರಯೋಜನವನ್ನು ಪಡೆಯಬೇಕೆಂದು ಕೇಳಿಕೊಳ್ಳುವಾತನು ತನ್ನ ಅರ್ಜಿಯಲ್ಲಿ ತಾನು ದೊಡ್ಡ ಸಂಸಾರಿಯೆಂದು ಬರೆಯುಕೊಳ್ಳುವುದು ಅನುಚಿತವಲ್ಲ. ಇದಲ್ಲದೆ, ಫಿರ್ಯಾದು ಹೇಳಿಕೊಳ್ಳುವವನಿಗೆ ತನ್ನ ಫಿರ್ಯಾದೇ ದೊಡ್ಡದಾದರೂ, ಅದನ್ನು ಓದಿಕೊಳ್ಳುವ ಅಧಿಕಾರಿಗೆ ಇಂತಾ ಅನೇಕ ಕಾಗದಗಳು ಬರುವುದರಿಂದ ಇವುಗಳಲ್ಲಿ ಅನಾವಶ್ಯಕವಾದ ಸಂಗತಿಗಳನ್ನು ಬಹಳವಾಗಿ ಬರೆದಿದ್ದರೆ ಅದು ಆತನಿಗೆ ಸಮರ್ಪಕವಾಗಿರಲಾರದು.

26. ಸಾಧಾರಣವಾದ ಕಾಗದಗಳಿರುವಂತೆಯೇ, ಅರ್ಜಿಗಳು ಮುಂತಾದವುಗಳಲ್ಲಿಯೂ ಯಾರಿಗೆ ಬರೆಯಬೇಕೋ ಆ ಉದ್ಯೋಗಸ್ಥರ ಗೌರವಕ್ಕೆ ತಕ್ಕ ಒಕ್ಕಣೆಯನ್ನು ಅನುಸರಿಸಿ ಬರೆಯಬೇಕು. ದಾವಾ ಅರ್ಜಿಗಳು ಅಂದರೆ ಸಿವಿಲ್ ಕೋರ್ಟುಗಳಿಗೆ ಸುಲಾ ವುುಂತಾದ್ದನ್ನು ಬರವಾಡಿಕೊಳ್ಳಲಿಕ್ಕೆ ಬರೆಯಲ್ಪಡತಕ್ಕ ಅರ್ಜಿಗಳು, ಫಿರ್ಯಾದು ಅರ್ಜಿಗಳು ಅಂದರೆ ಕ್ರಿಮಿನಲ್ ಕೋರ್ಟುಗಳಿಗೆ ಬರೆದುಕೊಳ್ಳತಕ್ಕ ಅರ್ಜಿಗಳು, ಇವನ್ನು ಬರೆಯುವಾಗ, ಸ್ವಲ್ಪ ಮಟ್ಟಿಗೆ ತಕ್ಕ ಕಾನೂನುಗಳು ತಿಳಿದಿರಬೇಕು. ಅರ್ಜಿಗಳಿಗೆ ತಕ್ಕ ಸ್ಟಾಂಪುಗಳನ್ನು ಹಾಕಬೇಕು. ಮುಲ್ಕೀ ವಿಷಯಗಳಲ್ಲಿ ತಕ್ಕ ಅಧಿಕಾರಿಗಳಿಗೆ ಬರೆದುಕೊಳ್ಳುವ ಅರ್ಜಿಗಳಲ್ಲಿ ಇಂತಾ ನಿರ್ಬಂಧಗಳು ವಿಶೇಷವಾಗಿಲ್ಲ. ಸಾಧಾರಣವಾಗಿ ಅವಕ್ಕೆ ಸ್ಟಾಂಪು ಹಾಕಬೇಕೆಂಬ ನಿರ್ಬಂಧವೂ ಇಲ್ಲ. ತಕ್ಕ ಒಕ್ಕಣೆ ಮುಂತಾದ ಸಂಗತಿಗಳನ್ನೆಲ್ಲಾ ಕೆಳಗಿನ ನಮೂನೆಗಳಿಂದ ತಿಳಿದುಕೊಳ್ಳಬಹುದು.

27. ಕೆಲವರು ತಮ್ಮ ಹೆಸರುಗಳನ್ನು ಬರೆಯುವದಕ್ಕೆ ಹೆದರಿ ಅಥವಾ ಹಿಂದೆಗೆದು, ಹೆಸರಿಲ್ಲದೆ ಅರ್ಜಿಗಳನ್ನು ಟಪಾಲಿನ ಮೂಲಕವಾಗಿ ಕಳುಹಿಸುತಾರೆ. ಅನೇಕರು ತಮ್ಮ ಶತ್ರುಗಳ ವಿಷಯವಾಗಿ ಯಾವುದಾದರೂ ಮೊಕದ್ದಮೆ ವಿಚಾರಣೆಯಾಗುತಿದ್ದರೆ, ಅವರಿಗೆ ವಿರೋಧವಾಗಿ ಕೋರ್ಟುಗಳಿಗೆ ಹೆಸರಿಲ್ಲದ ಅರ್ಜಿಗಳನ್ನು ಬರೆಯುವುರು. ಇದರಿಂದ ಸ್ವಲ್ಪವೂ ಫಲವಿಲ್ಲ; ಕೋರ್ಟಿನ ಅಧಿಕಾರಿಗಳು ಇಂತಾ ಅರ್ಜಿಗಳನ್ನು

ಯಾವುದಕ್ಕೂ ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸರ್ಕಾರದ ಅಧಿಕಾರಿಗಳ ಮೇಲೆ ಹೀಗೆ ಬರೆಯಲ್ಪಡುವ ಅರ್ಜಿಗಳೂ ಕೂಡ ಕೆಲಸಕ್ಕೆ ಬರುವುದಿಲ್ಲ. ನಿಶ್ಚಯವಾದ ಅಂಶಗಳನ್ನೇ ಹೆಸರಿಲ್ಲದ ಅರ್ಜಿಗಳಲ್ಲಿ ಬರೆದರೆ ಅವು ಸುಳ್ಳಾಗಿ ತೋರುವುವು. ಆದರೆ ಸಾಧಾರಣವಾಗಿ ಇಂತಾ ಅರ್ಜಿಗಳಲ್ಲಿ ಸುಳ್ಳೇ ಬರೆಯಲ್ಪಡುವುದು. ಇದು ಅಹಿತರನ್ನು ಮೋಸದಿಂದ ವಿಷ ಹಾಕಿ ಕೊಲ್ಲುವುದಕ್ಕೆ ಸಮಾನವಾದುದರಿಂದ, ಯೋಗ್ಯರಾದವರು ಈ ಹೆಸರಿಲ್ಲದ ಕಾಗದಗಳನ್ನು ಬರೆಯುವ ಕೆಲಸಕ್ಕೆ ಸುತರಾಂ ಪ್ರವರ್ತಿಸತಕ್ಕದ್ದಲ್ಲ.

28. ಸರ್ಕಾರದ ಅಧಿಕಾರಿಗಳು ತಮ್ಮ ಅಧಿಕಾರಕ್ಕೆ ಸಂಬಂಧಿಸುವ ವಿಷಯಗಳಲ್ಲಿ ಪರಸ್ಪರ ಬರೆದುಕೊಳ್ಳುವುದರಲ್ಲಿ ಕೆಲವು ಮರ್ಯಾದೆಗಳು ವಾಡಿಕೆಯಾಗಿವೆ.

ಅಧಿಕಾರದಲ್ಲಿ ಸಮಾನರಾದವರು ಒಬ್ಬರಿಗೊಬ್ಬರು ಬರೆದುಕೊಳ್ಳುವಾಗ 'ಯಾದಾಸ್ತು' ಎಂದು ಬರೆದುಕೊಳ್ಳುತಾರೆ. ಸಮಾನರಲ್ಲದಿದ್ದರೂ ತಮ್ಮ ಅಧಿಕಾರಕ್ಕೆ ಒಳಪಡದ ಇತರ ಅಧಿಕಾರಿಗಳಿಗೆಲ್ಲಾ ಹೀಗೆಯೇ ಬರೆಯುವ ಪದ್ಧತಿ. ಡೆಪ್ಯುಟಿ ಕಮಿಷನರು ಮುನ್ಸೀಫರಿಗೆ ಬರೆಯಬೇಕಾದರೆ, 'ಯಾದಾಸ್ತು' ಎಂದೇ ಬರೆಯಬೇಕು. ಈ ಕಾಗದ ಪತ್ರಗಳು ಈಗ ಬಹಳವಾಗಿ ಇಂಗ್ಲೀಷಿನಲ್ಲಿಯೇ ನಡೆಯುವುದರಿಂದ ಮುಖ್ಯ ಸಂಗತಿಗಳ ವಿಷಯಗಳಲ್ಲಾ ಈಗ ಇಂಗ್ಲೀಷಿನಲ್ಲಿಯೇ ಬರೆಯುವುದು ವಾಡಿಕೆಯಾಗಿದೆ. 'ಯಾದಾಸ್ತು' ಯಾವುದಾದರೂ ಸ್ವಲ್ಪ ಸಂಗತಿಗಳಲ್ಲಿ ಬರೆಯಲ್ಪಡುವ ಚೀಟಿಗಳಿಗೆ ಸಮಾನವಾದುದು. ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿ ಬರೆಯುವ 'ಲೆಟರ್' ಎಂಬುವುದರಂತೆ ಮರ್ಯಾದೆಗೆ ಸರಿಯಾದ ಕಾಗದಗಳನ್ನು ಬರೆಯುವ ಪದ್ಧತಿಯು ವಾಡಿಕೆಯಾದರೆ ಚೆನ್ನಾಗಿರುವುದು.

29. ಡೆಪ್ಯುಟಿ ಕಮಿಷನರ್ ಮುಂತಾದ ಮೇಲ್ಪಟ್ಟ ಅಧಿಕಾರಿಗಳು ತಾಲ್ಲೂಕು ಅಮಲ್ದಾರರಿಗೆ ಅಥವಾ ಇನ್ನೂ ಕೆಳಗಿನ ಉದ್ಯೋಗಸ್ಥರಿಗೆ '<u>ಹುಕುಂ</u>' ಎಂದು ಬರೆಯುತಾರೆ. ಪೂರ್ವದಲ್ಲಿ ಹುಜೂರ್ ಕ

ಚೇರಿಯಿಂದ ಬರುವ ಹುಕುಮುಗಳಿಗೆಲ್ಲಾ "ನಿರೂಪ" ವೆಂದು ಹೆಸರಿಟ್ಟಿದ್ದರು. ಈಗಲೂ ಕೆಲವು ಸಂದರ್ಭಗಳಲ್ಲಿ ಈ ಪದವನ್ನು ಉಪಯೋಗಿಸುತಾರೆ.

30. ಯಾವ ಯಾವ ಕೆಳಗಿನ ಅಧಿಕಾರಿಗಳಿಗೆ ಹುಕುಮನ್ನು ಬರೆಯಬಹುದೋ, ಅವರು ಆ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆಯುವಾಗ 'ಅರ್ಜಿ' ಅಥವಾ 'ಇತ್ತಿಲ್ಲೆ' ಎಂದು ಬರೆಯಬೇಕು. ಇದು ತಾಲ್ಲೂಕು ಕಚೇರಿಗಳಿಂದ ಡೆಪ್ಯುಟಿ ಕಮಿಷನರ್ ಅಥವಾ ತಾಲ್ಲೂಕಿನ ಅಧಿಕಾರವನ್ನು ವಹಿಸಿರುವ ಅಸಿಸ್ಟೆಂಟ್ ಕಮಿಷನರ್ ಮತ್ತು ಅವರಿಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಬರೆಯುವ ಕಾಗದಗಳ ನಮೂನೆಯಾಗಿದೆ.

31. ಕೆಲವರು ಸರ್ಕಾರೀ ಕಾಗದಪತ್ರಗಳಲ್ಲಿ ವಿಶೇಷವಾಗಿ ಹಿಂದುಸ್ತಾನಿ ಅಥವಾ ಇಂಗ್ಲೀಷ್ ಪದಗಳನ್ನು ಅನಾವಶ್ಯಕವಾದ ಸ್ಥಳಗಳಲ್ಲಿ ಉಪಯೋಗಿಸುತಾರೆ. ದೇಶಭಾಷೆಯಲ್ಲಿ ವಿಶೇಷವಾಗಿ ಹೆಚ್ಚಾದ ಮಾತುಗಳನ್ನು ಉಪಯೋಗಿಸದೆ, ಅರ್ಥವನ್ನು ತಿಳಿಯಪಡಿಸುವುದು ಅಸಾಧ್ಯವಾಗಿರುವಾಗಲೂ, ಅನ್ಯಭಾಷೆಯ ಪದವು ಸಾಧಾರಣವಾಗಿ ಎಲ್ಲರಿಗೂ ತಿಳಿಯುವಂತೆ ತಕ್ಕ ಕನ್ನಡದ ಪದಕ್ಕಿಂತ ಹೆಚ್ಚಾದ ವಾಡಿಕೆಯಲ್ಲಿರುವಾಗಲೂ, ಅನ್ಯದೇಶೀಯ ಪದಗಳನ್ನು ಉಪಯೋಗಿಸಬಹುದೇ ಹೊರತು, ಕಂಡ ಕಂಡ ಸ್ಥಳಗಳಲ್ಲೆಲ್ಲಾ ಅವನ್ನು ಉಪಯೋಗಿಸುವುದು ಸರಿಯಲ್ಲ. ಪೂರ್ವದಲ್ಲಿ ಮುಸಲ್ಮಾನರ ದೌಲತಿದ್ದುದರಿಂದಲೂ, ಬಹು ದಿವಸದವರೆಗೂ ಮಹರಾಷ್ಟ್ರ ಭಾಷೆಯಲ್ಲಿ ಸರ್ಕಾರೀ ಕಾಗದ ಪತ್ರಗಳು ನಡೆಯುತಿದ್ದುದರಿಂದಲೂ, ಸರ್ಕಾರೀ ನಡವಳಿಕೆಗಳಲ್ಲಿ ಅನ್ಯದೇಶೀಯ ಪದಗಳು ಇಷ್ಟು ವಾಡಿಕೆಗೆ ಬಂದವು. ಈಗ ಕನ್ನಡದಲ್ಲಿ ಬರೆಯುವಾಗ ಸಾಧ್ಯವಾದ ಮಟ್ಟಿಗೂ ಬರೀ ಕನ್ನಡದ ಮಾತುಗಳನ್ನೇ ಉಪಯೋಗಿಸುವುದಕ್ಕೆ ಯಾವ ವಿಧವಾದ ಅಡ್ಡಿಯೂ ಇಲ್ಲ.

## 1.

## ಅರ್ಜಿಗಳ ನಮೂನೆಗಳು.

ಶ್ರೀಮಾನ್ ಮಹಿಸೂರು ಸಂಸ್ಥಾನದ ಮಹಾ ರಾಜಾಧಿರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದರ್ ಮಹಾಸ್ವಾಮಿಯವರ ದಿವ್ಯ ಚರಣ ಸನ್ನಿಧಾನಂಗಳಿಗೆ.

ಆಜ್ಞಾಧಾರಕ ಮಂಡೀ ಶಿವಪ್ಪನ ಬಿನ್ನಹ.

ಈ ವಿಜಯ ಸಂವತ್ಸರದ.......................................ವರೆಗೆ ಮಹಾಸ್ವಾಮಿಯವರ ಅನ್ನಪ್ರಭಾವದಿಂದ ಕ್ಷೇಮವಾಗಿದೇನೆ. ಮಹಾ ಸ್ವಾಮಿಯವರ ಶ್ರೇಯೋಭಿವೃದ್ಧಿಯು ದಿನೇ ದಿನೇ ಬೆಳೆಯುತಿರಬೇ ಕೆಂದು ಅನವರತವೂ ಇಷ್ಟದೇವತಾ ಪ್ರಾರ್ಥನೆಯನ್ನು ಮಾಡುತಿರು ವೆನು, ಮಹಾಸ್ವಾಮಿ.

ಸೇವಕನು ಮಹಾಸ್ವಾಮಿಯವರ ಅನುಗ್ರಹ ಬಲದಿಂದಲೂ ಕೆಲ ವರು ಈ ಊರಿನ ಮಹಾಜನಗಳ ಸಹಾಯದಿಂದಲೂ ಈ ಮಹಿಸೂರು ಪಟ್ಟಣದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಕಟ್ಟಿಸಿರುವೆನು. ಮಹಾಸ್ವಾಮಿಯವರ ಪ್ರಜೆಗಳಿಗೆ ಉಪಯೋಗಾರ್ಥವಾಗಿ ಇದನ್ನು ನಡ ಸಿರುವುದರಿಂದ, ಖಾವಂದರು ದಯಮಾಡಿ ಅದನ್ನು ಪ್ರತಿಷ್ಠೆ ಮಾಡಿದರೆ ಅದು ಸ್ಥಿರವಾಗಿ ನಿಲ್ಲುವುದೆಂಬ ಭರವಸೆಯುಂಟಾಗಿ ನಮ್ಮಗಳ ಕೆಲಸ ವೆಲ್ಲಾ ಸಾರ್ಥಕ್ಯ ಹೊಂದುವುದಲ್ಲದೆ, ಈ ನಗರವಾಸಿಗಳಿಗೆಲ್ಲಾ ಆನಂದ ಉಂಟಾಗುವುದು. ಆದ್ದರಿಂದ ಇತರಕಾರ್ಯದ ಅಡಚಣೆ ಇಲ್ಲದೆ ಇ ರುವಾಗ ಒಂದು ಘಳಿಗೆಯುಮಟ್ಟಿಗೆ ದಯಮಾಡುವ ಅಭಯ ಉಂಟಾ ದರೆ, ಆ ಮಹೋತ್ಸವಕ್ಕೆ ತಕ್ಕ ಉಪಕರಣಗಳನ್ನು ಸಿದ್ಧಪಡಿಸಿಕೊಂ ಡು ಅರಿಕೆ ಮಾಡಿಕೊಳ್ಳುತೇನೆ, ಮಹಾಸ್ವಾಮಿ.

ಸಮಸ್ತವನ್ನೂ ತಿಳಿದಿರುವ ದಿವ್ಯಚಿತ್ತಕ್ಕೆ ಹೆಚ್ಚಾಗಿ ಅರಿಕೆಮಾಡಿ ಕೊಳ್ಳಲು ಅಶಕ್ತನಾಗಿದೇನೆ.

ಇದು ಮಂಡೀ ಶಿವಪ್ಪನ

ಮೈಸೂರು, ಅತ್ಯಂತ ಭಕ್ತಿ ವಿನಯಪೂರ್ವಕವಾದ ಬಿನ್ನಹ

........................೧೮೯೩. ಮಹಾಸ್ವಾಮಿ

## ೨.

ಶ್ರೀಮನ್ ಮಹಿಸೂರು ಸೀಮೆಯ ದಿವಾನ್‌ಸಾಹೇಬರವರು
ಸರ್ ಪಿ. ಎನ್. ಕೃಷ್ಣಮೂರ್ತಿ, ಕೆ. ಸಿ. ಐ. ಇ. ಯವರ
ಜನಾಬಿಗೆ.

೧೮೯೪ನೇ ಇಸವಿ ಜನವರಿ ೮ನೇ ತಾರೀಖಿನಲ್ಲಿ ತರೀಕೆರೆ ತಾ॥ ತರೀಕೆರೆ ಹೋಬಳಿ ವೆಂಕಟಾಪುರದಲ್ಲಿರುವ ವೆಂಕಟೇ ಗೌಡನ ಮಗ ರಾಮೇ ಗೌಡನು ಬರೆದುಕೊಂಡ ಅರ್ಜಿ;

ನಮ್ಮ ಗ್ರಾಮದ ಗೋಮಾಳದ ಪೈಕಿ ೨೫ ಎಕರೆ ಜಮೀನನ್ನು ತಾಲ್ಲೂಕು ಅಮಲ್ದಾರ್ರವರ ಶಿಫಾರಸಿನ ಮೇಲೆ ಡೆಪ್ಯುಟಿ ಕಮೀಷನರ್ ಸಾಹೇಬರವರು ನೆರೆಯ ಗ್ರಾಮದವನಾದ ಲಿಂಗಾಂಬುಧಿಯ ಮಾದೇ ಗೌಡನ ಮಗ ರಾಮೇ ಗೌಡನಿಗೆ ಬಾಗಾಯತು ಸಾಗುವಳಿಗೆ ಕೊಡಿಸಿ ಬಿಟ್ಟಿದಾರೆ.

ನಮ್ಮ ಗ್ರಾಮದಲ್ಲಿ ೨೦೦ ದನಗಳಿಗಿಂತ ಹೆಚ್ಚಾಗಿವೆ ಎಂಬುದು ಗ್ರಾಮದ ಖಾನೇಷುಮಾರಿ ಲೆಕ್ಕದಿಂದ ವೇದ್ಯವಾಗುತದೆ. ಈ ಮಲೆನಾಡು ಪ್ರಾಂತ್ಯದಲ್ಲಿ ಇಷ್ಟು ದನಗಳಿಗೆ ಇದುವರೆಗೆ ಇದ್ದ ೧೫೦ ಎಕರೆ ಕಾಡಿನ ಪ್ರದೇಶವು ಸಾಕಾಗಿರಲಿಲ್ಲ. ಅದರಲ್ಲಿಯೂ ೨೫ ಎಕರೆಯನ್ನು ಕಮ್ಮಿಮಾಡಿ ಬಿಟ್ಟರೆ ನಮ್ಮಗಳಿಗೆ ಬಹಳ ದುಸ್ತರವಾಗುತದೆ ಸ್ವಾಮಿ.

ನಾವು ಡೆಪ್ಯುಟಿ ಕಮೀಷನರವರಲ್ಲಿ ನಮ್ಮ ತಕರಾರನ್ನು ಹೇಳಿಕೊಳ್ಳಲು, ಅವರು ಅದನ್ನು ತಿರಸ್ಕರಿಸಿ ಕೊಟ್ಟಿರುವ ಹುಕುಮನ್ನು ಇದರೊಡನೆ ಕಳುಹಿಸಿದೇನೆ.

ಇದನ್ನೆಲ್ಲಾ ಖಾವಂದರು ಪರಾಮರಿಸಿ, ಡೆಪ್ಯುಟಿ ಕಮೀಷನರ್ ಸಾಹೇಬರವರ ಹುಕುಮನ್ನು ರದ್ದುಮಾಡಿ, ನನ್ನಂತಾ ಬಡರೈತರನ್ನು ಉದ್ಧಾರ ಮಾಡಬೇಕೆಂದು ಅತಿ ವಿನಯವಾಗಿ ಬೇಡಿಕೊಳ್ಳುತೇನೆ, ಸ್ವಾಮಿ.

(ರುಜು) ರಾಮೇಗೌಡ.

## 3.

### ಮೈಸೂರು ಸೀಮೆಯ ಪೋಲೀಸ್ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಜನಾಬಿಗೆ.

**ಚಿಂತಾಮಣಿ ತಾಲ್ಲೂಕು ಅಡ್ಡಗಲ್ ಹೋಬಳಿ ಗೌಡನಹಳ್ಳಿಯಲ್ಲಿರುವ ಕೆಳಗೆ ರುಜುಹಾಕಿರುವ* ಜನರ ಅರ್ಜಿ, ಅದಾಗಿ ;**

ನಮ್ಮ ಊರುಬಳಿಯಲ್ಲಿರುವ ರಸ್ತೆಯಲ್ಲಿ ಒಂದು ತಿಂಗಳ ಕೆಳಗೆ ಒಂದು ದರೋಡೆಯಾಯಿತು ; ನಮ್ಮ ಊರಿನಲ್ಲಿ ಒಬ್ಬ ವರ್ತಕನ ಮನೆಗೆ ಮೂರನೇ ದಿನವೇ ಕಳ್ಳರು ಬಿದ್ದು ದೋಚಿಕೊಂಡು ಹೋದರು. ಇಲ್ಲಿಂದ ತಾಲ್ಲೂಕಿರುವ ಊರಿಗೆ ೧೬ ಮೈಲಿಯಾಗುತದೆ ; ಹತ್ತಿರಿರುವ ಪೋಲೀಸ್ ಸ್ಟೇಷನ್ ಇಲ್ಲಿಗೆ ೮ ಮೈಲಿ ದೂರದಲ್ಲಿದೆ. ಅಲ್ಲಿಯೂ ಸ್ವಲ್ಪವೇ ಮಂದಿ ಪೋಲೀಸಿನವರು ಇರುವುದರಿಂದ, ಯಾವಾಗಲಾದರೂ ಮಧ್ಯಾಹ್ನದ ಹೊತ್ತಿನಲ್ಲಿ ಒಬ್ಬ ಪೋಲೀಸಿನವನ ಮುಖವನ್ನು ನೋಡುವುದೇ ಅಪೂರ್ವವಾಗಿದೆ. ತಾಲ್ಲೂಕು ಅಮಲ್ದಾರರವರಿಗೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೂ ಅರ್ಜಿ ಕೊಟ್ಟುಕೊಂಡುದಕ್ಕೆ ಈ ವರೆಗೆ ಜವಾಬೇ ಬರಲಿಲ್ಲ.

ನಮ್ಮ ಗ್ರಾಮದಲ್ಲಿ ೨೦೦ ಮನೆಗಳಿಗಿಂತ ಹೆಚ್ಚಾಗಿವೆ ; ಮತ್ತು ಇದು ಈ ಸೀಮೆಯ ಸರಹದ್ದಿನಲ್ಲಿರುವುದಾಗಿದೆ. ಗರೀಬರಾದ ನಮ್ಮ ಮೇಲೆ ಪೂರಾ ವಿಶ್ವಾಸವಿಟ್ಟು, ಮಹಾ ಪ್ರಭುಗಳು ಈ ಊರಲ್ಲೊಂದು ಪೋಲೀಸ್ ಠಾಣೆಯನ್ನು ಇಡಿಸಬೇಕೆಂದು ಅತಿವಿನಯದಿಂದ ಬೇಡಿಕೊಳ್ಳುವೆವು.

೨೧ನೇ ಜುಲೈ, ೧೮೯೧.

(ರುಜು) ಶಾನಭೋಗ ರಂಗಣ್ಣ.

(,,) ಪಟೇಲ ರಾಮೇಗೌಡ.

(,,) ರೈತ ಲಿಂಗಣ್ಣ.

(,,) ರಾಮಶೆಟ್ಟಿ.

---

* "ರುಜು ಹಾಕಲ್ಪಟ್ಟಿರುವ" ಎಂದು ಬರೆಯಕೂಡದು ಅದು ತಪ್ಪು.

## 4.

ಚಿತ್ರದುರ್ಗದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರ ಜನಾಬಿಗೆ.

.......................................................................................................

ಅರ್ಜಿ ಅದಾಗಿ.

ಈ ಗ್ರಾಮದ ಬಸವೇಶ್ವರನ ಗುಡಿಗೆ ಅಕಸ್ಮಾತ್ತಾಗಿ ಬೆಂಕಿಬಿದ್ದು ಹೊರಗಿನ ಪ್ರಾಕಾರವೆಲ್ಲಾ ಹೋದ ತಿಂಗಳು ಸಂಪೂರ್ಣವಾಗಿ ಸುಟ್ಟು ಹೋಯಿತು. ಇದರಿಂದ ಸಾವಿರಾರು ರೂಪಾಯಿನಷ್ಟು ನಷ್ಟವಾಗಿ ಹೋಯಿತು. ಪುನಃ ಅದನ್ನು ಕಟ್ಟಿಸುವುದಕ್ಕೆ ಗ್ರಾಮಸ್ಥರೆಲ್ಲರೂ ಸೇರಿ ೩೫೦ ರೂಪಾಯನ್ನು ಕೂಡ ಹಾಕಿಕೊಂಡಿದೇವೆ. ಸರ್ಕಾರದಿಂದ ೨೫೦ ರೂಪಾಯಿನಷ್ಟು ಮರವನ್ನು ಮುಫತ್ತಾಗಿ ಕೊಡಿಸಿಕೊಟ್ಟರೆ ತಾವು ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದಂತಾಗುತದೆ. ಖಾವಂದರವರು ಪರಾಮರಿಕೆಯಿಂದ ಈ ಗ್ರಾಮದವರ ಮೇಲೆ ಅಭಿಮಾನವಿಟ್ಟು, ಇದನ್ನು ಕೊಡಿಸಿಕೊಡಬೇಕೆಂದು ಬೇಡಿಕೊಳ್ಳುತೇವೆ.

(ರುಜು).......................

## 5.

ಧಾರ್ವಾಡಜಿಲ್ಲಾ ಕಲೆಕ್ಟರ್ ಸಾಹೇಬರವರ ಜನಾಬಿಗೆ.

ಸನ್ ೧೮೯೫ನೇ ಇಸವಿ ಜುಲೈ ತಾರೀಖು ೪ರಲ್ಲಿ ರಾಣೇಬೆನ್ನೂರು ತಾ॥ ನಂಜೆಹಳ್ಳಿಯಲ್ಲಿರುವ ನಂಜಪ್ಪಶೆಟ್ಟಿಯು ಬರೆದುಕೊಂಡ ಮನವೆ ಅರ್ಜಿ, ಅದಾಗಿ:

ನಮ್ಮ ತಾಲ್ಲೂಕಾ ಮಾಮ್ಲೇದಾರ್ರವರು ಇಲ್ಲಿಗೆ ದಯಮಾಡಿ ಜಮಾಬಂದಿ ಮಾಡುವಲ್ಲಿ ನನ್ನ ವ್ಯಾಪಾರದಿಂದ ನನಗೆ ಸಾಲೀಯಾನಾ ೨,೦೦೦ ರೂಪಾಯಿ ಆದಾಯವಿದೆ ಎಂಬ ಅಂದಾಜಿನ ಮೇಲೆ ನನಗೆ ಆದಾಯದ ತೆರಿಗೆ (ಇನ್ಕಮ್ ಟ್ಯಾಕ್ಸ್) ಯನ್ನು ದಾಖಲ್ಮಾಡಿರುತಾರೆ.

ನನ್ನ ವ್ಯಾಪಾರದ ಲೆಕ್ಕವನ್ನು ಕ್ರಮವಾಗಿ ಇಟ್ಟದೇನೆ. ಇದನ್ನು ತರಿಸಿ ಕೊಂಡು ನೋಡದೆ, ನನಗೆ ದ್ವೇಷಿಗಳಾದ ಕೆಲವರ ಮಾತನ್ನು ನಂಬಿ ಕೊಂಡು, ಮಾವ್ಲೇದಾರ್ರವರು ಅನ್ಯಾಯ ಮಾಡಿರುತಾರೆ. ನನಗೆ ಹೋದ ವರುಷವೂ ಮತ್ತು ಹಿಂದಿನ ಯಾವ ವರ್ಷವೂ ೫೦೦ ರೂಪಾ ಯಿಗೆ ಮೀರಿದ ಲಾಭ ಬರಲಿಲ್ಲ. ಖಾವಂದರ ಪರಾಮರಿಕೆಯ ಬಗ್ಗೆ ನನ್ನ ಲೆಕ್ಕದಬುಕ್ಕುಗಳನ್ನು ಹಾಜರ್ಮಾಡುತೇನೆ. ಇದನ್ನು ಚೆನ್ನಾಗಿ ವಿಚಾರಿಸಿ, ಧರ್ಮಪ್ರಭುಗಳು ನನಗೆ ಅನ್ಯಾಯವಾಗಿ ದಾಖಲಾಗಿರುವ ತೆರಿಗೆಯನ್ನು ವಜಾ ಮಾಡಿಸಬೇಕೆಂದು ಅತ್ಯಂತ ವಿಧೇಯನಾಗಿ ಬೇಡಿ ಕೊಳ್ಳುತೇನೆ.

(ರುಜು) ನಂಜಪ್ಪಶೆಟ್ಟಿ.

6.

ಮೈಸೂರು ಡಿಸ್ಟ್ರಿಕ್ಟ್ ಮುಜರಾಯಿ ಆಫೀಸರವರ ಸನ್ನಿಧಾನಂಗಳಿಗೆ.

.............................. .............................. ...................

..............................ರಾಮಭಟ್ಟನ ಅರ್ಜಿ;

ಸ್ವಾಮಿ, ಚಾಮರಾಜನಗರದ ದೇವಸ್ಥಾನದ ಧರ್ಮದ ಪೈಕಿ ರು ದ್ರಾಭಿಷೇಕಕ್ಕೋಸ್ಕರ ನೇಮಿಸಿರುವ ಕೆಲಸವು ಈಗ ಖಾಲಿ ಇದೆ ಎಂದು ಕೇಳುತೇನೆ. ನನಗೆ ಯಜುರ್ವೇದದಲ್ಲಿ ಘನಾಂತವಾಗಿದ್ದರೂ "ಅಧ್ಯಯನ ಓದಿದವನಿಗೆ ಮಧ್ಯಾಹ್ನಕ್ಕೆ ಹಿಟ್ಟಿಲ್ಲ" ವೆಂಬ ನುಡಿ ನನ್ನಲ್ಲಿಯೇ ಸಾರ್ಥ ಕ್ಯವನ್ನು ಹೊಂದಿದೆ. ಈ ದರಿದ್ರಕ್ಕೆ ತಕ್ಕಂತೆ ನಾಲ್ವರು ಹೆಣ್ಣು ಮಕ್ಕ ಳು ಗಂಡು ಮಕ್ಕಳು ಚಿಕ್ಕವರು ಕಿತ್ತುಕೊಂಡು ತಿನ್ನುತಿರುವುದರಿಂದ ನನ್ನ ಕಷ್ಟವನ್ನು ಸರಿಯಾಗಿ ಅರಿಕೆಮಾಡಿಕೊಳ್ಳಲು ಅಶಕ್ತನಾಗಿದೇನೆ. ಬ್ರಾಹ್ಮಣರ ಪೋಷಣಾರ್ಥವಾಗಿ ಏರ್ಪಡಿಸಿರುವ ಈ ಕೆಲಸಕ್ಕೆ ನನ್ನ ನ್ನು ನೇಮಿಸಿದರೆ, ಭಕ್ತಿಯಿಂದ ದೇವರ ಸೇವೆಯನ್ನು ನೆರವೇರಿಸಿ ಕೊಂಡು, ತಮ್ಮ ಶ್ರೇಯಃಪ್ರಾರ್ಥನೆಯನ್ನು ಮಾಡಿಕೊಂಡು, ಒಂದು ಹೊತ್ತಿನ ಅನ್ನವನ್ನಾದರೂ ಊಟಮಾಡಿಕೊಳ್ಳುತೇನೆ.

ಸ್ವಪ್ರಶಂಸೆಯನ್ನು ಹೇಳಿಕೊಂಡರೆ ಪ್ರಯೋಜನವಿಲ್ಲವಾಗಿ, ನನ್ನ ವಿಷಯವಾಗಿ ತಾಲ್ಲೂಕು ಸುಬೇದಾರರ ಮೂಲಕ ತಾವು ವಿಚಾರಣೆ ನಡಿಸಿಕೊಳ್ಳಬಹುದೆಂದು ಬೇಡಿಕೊಳ್ಳುತ್ತೇನೆ.

(ರುಜು) ರಾಮಭಟ್ಟ.

## 7.

ಚನ್ನಪಟ್ಟಣದ ತಾ॥ ಅಮಲ್ದಾರ್ರವರ ಸನ್ನಿಧಾನಕ್ಕೆ.

ಬೊಮ್ಮಸಂದ್ರದ ಹೋಬಳಿ ರಾಜಘಟ್ಟದ ರೈತ ಮಲ್ಲಪ್ಪನು ಬರೆದುಕೊಂಡ ಅರ್ಜಿ.

ನಾನು ಈ ಊರಲ್ಲಿ ೫೦ ರೂಪಾಯಿ ಕಂದಾಯ ಕೊಡತಕ್ಕ ಪಟ್ಟೆಯುಳ್ಳ ರೈತನಾಗಿದೇನೆ. ಭಾರೀ ಸಂಸಾರವಾದ್ದರಿಂದಲೂ ನನಗೆ ಸ್ವಂತಮನೆ ಇಲ್ಲದ್ದರಿಂದಲೂ ಈ ಊರಲ್ಲಿ ಹೊಸ ಮನೆಯನ್ನು ಕಟ್ಟಕೊಳ್ಳಬೇಕೆಂದು ಉದ್ದೇಶಿಸಿದೇನೆ. ನಾನು ಲಾಗಾಯತಿನಿಂದ ಸರ್ಕಾರದ ಜಂಗ್ಲಿಯಲ್ಲಿ ಮರವನ್ನು ಪಡೆದವನಲ್ಲ. ಈಗ ರೈತರಿಗೆ ರಿಯಾಯತು ದರಗಳ ಮೇಲೆ ಕೊಡಬಹುದೆಂದು ಇರುವ ರೂಲ್ಸಿನ ಪ್ರಕಾರ ನನಗೆ ೨೫ ಗಾಡಿ ಕಾಡುಜಾತಿಯ ಸಾಮಾನನ್ನು ಕೊಡಿಸಿಕೊಡಬೇಕೆಂದು ಬೇಡುತ್ತೇನೆ. ಅದಲ್ಲದೆ ಇದೇ ಹೋಬಳಿ ಸರ್ವಮಾನ್ಯ ಕಿತ್ತೂರು ಗ್ರಾಮದಲ್ಲಿ ಇನಾಂದಾರರಿಂದ ನಾನು ಕೊಂಡುಕೊಂಡಿರುವ ನಾಲ್ಕು ಗಾಡಿ ಹೊನ್ನೆ ಸಾಮಾನನ್ನು ನಮ್ಮ ಗ್ರಾಮಕ್ಕೆ ತಂದುಕೊಳ್ಳತಕ್ಕದ್ದಕ್ಕೆ ೧೫ ದಿವಸ ವಾಯಿದೆಯೊಡನೆ ಒಂದು ಮಾಫಿ ಲೈಸೆನ್ಸನ್ನೂ ಅಪ್ಪಣೆ ಕೊಡಿಸಬೇಕೆಂದು ಬೇಡಿಕೊಳ್ಳುತ್ತೇನೆ.

೨೮ನೇ ಜನವರಿ, ೧೮೯೩.

—|— ಈ ಗುರ್ತು ಮಲ್ಲಪ್ಪ ಹಾಕಿದ್ದಕ್ಕೆ ಈ ಗ್ರಾಮದ ಪಟೇಲ ರಾಮಪ್ಪನ ಬರಹ.

ಷರಾ :—

ಈ ಗ್ರಾಮದಲ್ಲಿ ಮಲ್ಲಪ್ಪನಿಗೆ ೫೦ ರೂಪಾಯಿನ ೧ನೇ ನಂಬರು ಖಾತೆ ಇದೆ. ಇವನಿಗೆ ಖಾನೇಷುಮಾರಿ ಲೆಕ್ಕದ ಪ್ರಕಾರ ಇರುವ ಅಹವಾಲು :

ಗಂಡು ೪. ಹೆಣ್ಣು ೩. ದನ ೧೫. ಕುರಿ ೨೬. ನೇಗಲು ೪. ಬಂಡಿ ೨.

ಇವನು ನಮಗೆ ತಿಳಿದವಟ್ಟಿಗೆ ಮಾಫಿಯಾಗಿಯಾಗಲಿ ರಿಯಾಯಿತು ದರಗಳ ಮೇಲಾಗಲಿ ಇದುವರೆಗೆ ಯಾವ ಮರದ ಸಾಮಾನನ್ನೂ ಪಡೆದಿರುವುದಿಲ್ಲ.

ಶಾನಭೋಗ ರಂಗಪ್ಪನ ರುಜು.
ಪಟೇಲ ರಾಮಪ್ಪನ ರುಜು.

8.

ಬಂಕಾಪುರದ ತಾಲ್ಲೂಕು ಮಾಮ್ಲೇದಾರರವರ ಸನ್ನಿಧಾನಕ್ಕೆ.
ಲಿಂಗೇಗೌಡನ ಅರ್ಜಿ.

ಸ್ವಾಮಿಯವರ ಸವಾರಿಯು ನಮ್ಮ ಗ್ರಾಮಕ್ಕೆ ದಯಮಾಡಿದ್ದಾಗ ಊರು ಮುಂದೆ ತಿಪ್ಪೆಗಳನ್ನು ಹಾಕಿಕೊಂಡಿರುವುದರಿಂದ ದಾರಿಯಲ್ಲಿ ಹೋಗುವವರಿಗೂ ಸುತ್ತುಮುತ್ತೂ ಇರುವ ಮನೆಗಳಿಗೂ ಈ ಗಲೀಜಿನಿಂದ ಬಹಳ ತೊಂದರೆಯುಂಟಾಗಿದೆ ಎಂದು ನಾವೆಲ್ಲಾ ಹೇಳಿಕೊಂಡುದಕ್ಕೆ, ಊರ ಹೊರಗೆ ಗೊಬ್ಬರವನ್ನು ಹಾಕಿಕೊಳ್ಳುವುದಕ್ಕೆ ತಕ್ಕ ಜಮೀನನ್ನು ಕೊಡಿಸುವುದಾಗಿ ಅಪ್ಪಣೆಯಾಯಿತು.

ಈ ಗ್ರಾಮದ ಮಲ್ಲಾರಿ ಬಿನ್ ಗೌಡಪ್ಪನ ಜಮೀನಿಗೆ ಬಡಗ ದಿಕ್ಕಿನಲ್ಲಿರುವ ಸರ್ವೆ ೪೫ನೇ ನಂಬರು ಜಮೀನು ಸರ್ಕಾರೀ ಪಡಾವ್ (ಬಂಜರ್) ಆಗಿದೆ. ಇದು ಬಹಳ ಕಲ್ಲುಗಳುಳ್ಳ ಜಮೀನಾಗಿರುವುದರಿಂದ ಸಾಗುವಳಿ ಕೆಲಸಕ್ಕೆ ಬರುವಹಾಗಿಲ್ಲ. ಇದನ್ನು ದಯವಿಟ್ಟು ಬಿಡಿಸಿಕೊಟ್ಟರೆ, ಅಲ್ಲಿ ಗ್ರಾಮದವರೆಲ್ಲರೂ ಗೊಬ್ಬರವನ್ನು ಹಾಕಿಕೊಳ್ಳುವುದಕ್ಕೆ ಬಹಳ ಅನುಕೂಲವಾಗಿರುತದೆ.

ಇದರಿಂದ ಗ್ರಾಮದ ಗಲೀಜು ದೂರಕ್ಕೆ ಹೋಗಿ ಗ್ರಾಮಸ್ಥರಿಗೆ ಆರೋಗ್ಯ ಉಂಟಾಗುವುದು. ತಾವು ಯಾವಾಗಲೂ ಪ್ರಜೆಗಳ ಕ್ಷೇಮ ಚಿಂತನೆಯನ್ನು ಮುಖ್ಯವಾಗಿ ಇಟ್ಟುಕೊಂಡಿರುವುದು ತಿಳಿದು, ಈ ಕಾರ್ಯವನ್ನು ನೆರವೇರಿಸಿಕೊಡುವಿರೆಂಬ ಭರವಸೆಯಿಂದ ಇದನ್ನು ಅರಿಕೆಮಾಡಿ ಕೊಂಡಿದೇನೆ.

೧೫ನೇ ಮಾರ್ಚಿ, ೧೯೦೫.

(ರುಜು) ಲಿಂಗೇಗೌಡ.

## 9.

## ಜಮೀನಿಗೋಸ್ಕರ ದರಖಾಸ್ತು.

ಗೋಪಾಲಪುರದ ತಾಲ್ಲೂಕು ಅಮಲ್ದಾರರವರ ಕಚೇರಿಗೆ.

ಈ ತಾಲ್ಲೂಕು ರಂಗಸಮುದ್ರದ ಹೋಬಳಿ ದಿಬ್ಬಹಳ್ಳಿಯ ಗ್ರಾಮದ ರಾಘವಯ್ಯನ ದರಖಾಸ್ತು.

ಈ ಗ್ರಾಮದಲ್ಲಿ ಈಗ ಸರ್ಕಾರೀ ಬಂಜರಾಗಿರುವ ಕೆಳಗೆ ವಿವರಿಸಿರುವ ಜಮೀನನ್ನು ಸಾಗುವಳಿಗೆ ಪಡೆದುಕೊಳ್ಳಲು ನಾನು ಅಪೇಕ್ಷೆಯುಳ್ಳವನಾಗಿರುವುದರಿಂದ, ದಯವಿಟ್ಟು ಅದನ್ನು ನನಗೆ ಈ ಸಾಲು ಲಾಗಾಯಿತು ಕೊಡಿಸಿಕೊಡಬೇಕೆಂದು ಬೇಡಿಕೊಳ್ಳುತೇನೆ.

ಜಮೀನಿನ ವಿವರ:—ಸರ್ವೆ ನಂಬರು ೫೮, ಎಕರೆ ೧೦, ಕಂದಾಯ, ೧೦ ರೂ. ಇದಕ್ಕೆ ಚಕ್ಕುಬಂದಿ: ಪೂರ್ವಕ್ಕೆ ೫೭ನೇ ನಂಬರು ಹೊಲ, ಪಶ್ಚಿಮಕ್ಕೆ ೫೯ನೇ ನಂಬರು, ಉತ್ತರಕ್ಕೆ ೪ನೇ ನಂಬರು ಬಾಗಾಯಿತು, ದಕ್ಷಿಣಕ್ಕೆ ರಾಮಪುರದ ರಸ್ತೆ.

ಪ್ರತಿವರ್ಷವೂ ಸರ್ಕಾರಕ್ಕೆ ನಿಬಂಧನೆಯಾಗಿರುವ ಕಂದಾಯ ಕೊಡುವುದು ಮುಂತಾದ ಮಾಮೂಲಿನ ಷರತ್ತುಗಳಿಗೆ ಬದ್ಧನಾಗಿರುವೆನೆಂದು ಒಪ್ಪಿ ಇದಕ್ಕೆ ರುಜು ಮಾಡಿದೇನೆ.

೧೫ನೇ ಜನವರಿ, ೧೮೯೯.

(ರುಜು) ರಾಘವಯ್ಯ.

(ಸರ್ವೆ ನಂಬರು ಗೊತ್ತಾಗಿರುವಾಗ ಚಕ್ಕುಬಂದಿ ಬರೆಯಬೇಕೆಂಬ ಆವ ಶ್ಯಕತೆ ಇಲ್ಲ. ಮುಖ್ಯವಾಗಿ ಜಮೀನು ಇಂತಾದ್ದೆಂದು ತಿಳಿದರೆ ಸಾಕು.)

## 10.

ಅಷ್ಟಗ್ರಾಮದ ತಾಲ್ಲೂಕು ಅಮಲ್ದಾರರವರ ಸನ್ನಿಧಾನಕ್ಕೆ.

ರಂಗಪ್ಪನ ಅರ್ಜಿ.

ಈ ಗ್ರಾಮದಲ್ಲಿ ನನ್ನ ಹಿಡುವಳಿಯಲ್ಲಿರುವ ಖುಷ್ಕಿ ೫ನೇ ನಂಬರು ಜಮೀನಿನ ಪೈಕಿ ಉತ್ತರದಿಕ್ಕಿನಲ್ಲಿ ೨ ಎಕರೆಯಷ್ಟು ದೊಡ್ಡ ಕೆರೆಯ ನೀರಿನಿಂದ ತರೀ ಸಾಗುವಳಿಗೆ ಲಾಯಖ್ಖಾಗಿದೆ. ದಯವಿಟ್ಟು ಇದನ್ನು ಫೋಡ್* ಮಾಡಿಸಿ, ಇದಕ್ಕೆ ತರೀದರ ದಾಖಲ್ಮಾಡಿಸಿಕೊಡ ಬೇಕೆಂದು ಬೇಡಿಕೊಳ್ಳುತ್ತೇನೆ.

೫ನೇ ಮಾರ್ಚಿ, ೧೯೩೦.

(ರುಜು) ರಂಗಪ್ಪ.

* ('ಫೋಡ್' ಮಾಡುವುದೆಂದರೆ, ಜಮೀನನ್ನು ಭಾಗಮಾಡಿ ಅದಕ್ಕೆ ಬೇರೆ ನಂಬರು ದಾಖಲ್ಮಾಡುವುದು.)

## 11.

### ಜಮೀನಿನ ರಾಜೀನಾಮೆ.

ಅಮಲ್ದಾರರವರ

ಸನ್ನಿಧಾನಕ್ಕೆ.

ಇದರ ಕೆಳಗೆ ನಮೂದಾಗುವ ಜಮೀನಿನ ಹಿಡುವಳಿದಾರನಾದ ..........................ಡಿಸ್ಟ್ರಿಕ್ಟು..........................ತಾಲ್ಲೂಕು ..........................ಗ್ರಾಮದ ವಾಸಸ್ಥನಾದ ರಾಮೇಗೌಡನ ಮಗ ನಂಜೇ ಗೌಡನೆಂಬ ನಾನು ಸದರೀ ಜಮೀನಿನ ಹಿಡುವಳಿಯನ್ನು ಬಿಟ್ಟು ಇರು ತೇನೆಂದು, ಇದಕ್ಕೆ ನಾನು ರುಜೂ ಮಾಡಿ ಇದರ ಮೂಲಕ ತಿಳಿಯ ಪಡಿಸಿರುತೇನೆ.

## ಜಮೀನಿನ ವಿವರ.

| ತಾಲ್ಲೂಕು | ಹೋಬಳಿ | ಗ್ರಾಮ | ಹಳೆ ನಂಬರು | ಹೊಸ ನಂಬರು | ಪೋಟು ಖಂಡಿ | ಖುಷ್ಕಿ, ತರಿ, ಬಾಗಾಯಿತು | ವಿಸ್ತೀರ್ಣ | | ಆಕಾರ | | |
|---|---|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | | ೯ | | |
| | | | | | | | ಎಕರೆ. | ಗುಂಟೆ | ರೂ. | ಆ. | ಪೈ. |
| | | | | | | | | | | | |

ತಾರೀಖು ನೇ ಮಾರ್ಚಿ, ೧೮

(ರುಜು) ನಂಜೇಗೌಡ.

ಈ ರಾಜೀನಾಮೆಯನ್ನು ಬರೆದುಕೊಟ್ಟವನು ಅದರಲ್ಲಿ ವಿವರಿಸಿರುವ ನಂಜೇಗೌಡನೇ ಎಂದು ನಾವು ಬಲ್ಲೆವು. ಅವನು ನಮ್ಮ ಸಮಕ್ಷಮದಲ್ಲಿ ರುಜು ಮಾಡಿದಾನೆ.

ಸಾಕ್ಷಿಗಳು.

೧............

೨............

ಜಮೀನಿನ ಗುರ್ತು ಇತರ ವಿಧವಾಗಿ ತಿಳಿಯದಿದ್ದರೆ ಚೆಕ್ಕುಬಂದಿಯನ್ನು ೬ನೇ ಸಂಖ್ಯೆಯ ಮನೆಯಲ್ಲಿ ಬರೆಯಬೇಕು.

'ಆಕಾರ' ಅಂದರೆ ಲೆಕ್ಕದಲ್ಲಿ ಜಮೀನಿಗೆ ದಾಖಲಾಗಿರುವ ಕಂದಾಯದ ಮೊಬಲಗು

## 12.

## ವರ್ಗರಾಜೀನಾಮೆ.

......................................ಅಮಲ್ದಾರರವರ ಸಮಕ್ಷಮಕ್ಕೆ

ಇದರ ಕೆಳಗೆ ನಮೂದಿಸುವ ಜಮೀನಿನ ಹಿಡುವಳೀದಾರನಾದ ......................ಡಿಸ್ಟ್ರಿಕ್ಟು..........................ತಾಲ್ಲೂಕು........ ........... ಗ್ರಾಮದ ವಾಸಸ್ಥನಾದ ತಿಮ್ಮೇಗೌಡನ ಮಗನಾದ ಲಿಂಗೇಗೌಡನೆಂಬ ನಾನು ಸದರೀ ಜಮೀನಿನ ಹಿಡುವಳಿಯನ್ನೂ ಇದರ ಸಂಬಂಧವಾದ ವಿಶಿಷ್ಟ ಹಕ್ಕನ್ನೂ ಸದರೀ ತಾಲ್ಲೂಕು............ಗ್ರಾಮದ ವಾಸಸ್ಥನಾದ ವೆಂಕಟೇಗೌಡನ ಮಗ ರಂಗೇಗೌಡನಿಗೆ ಈ ತಾರೀಖು ಲಾಗಾಯಿತು ವರ್ಗ ಕೊಟ್ಟದೇನೆಂದು ಇದರ ಮೂಲಕ ತಿಳಿಯಪಡಿಸಿದೇನೆ. ಈ ಅರ್ಥಕ್ಕೆ ನಾನು ಇದರ ಕೆಳಗೆ ರುಜೂ ಮಾಡಿದೇನೆ.

ತಾರೀಖು ನೇ ಮಾಹೆ ಸ್ ೧೮೯ ನೆಯ ಇಸವಿ

(ರುಜು) ಲಿಂಗೇಗೌಡ.

ಸಾಕ್ಷಿಗಳು.

೧ ೨

ಮೇಲೆ ಹೇಳಲ್ಪಟ್ಟ ರಂಗೇಗೌಡನೆಂಬ ನಾನು ಈ ತಾರೀಖು ಲಾಗಾಯಿತು ಮೇಲೆ ವಿವರಿಸಲ್ಪಟ್ಟ ನಂಬರು ಜಮೀನನ್ನು ಹಿಡುವಳಿಯಲ್ಲಿ ಇಟ್ಟುಕೊಳ್ಳುವುದಕ್ಕೂ ಮತ್ತು ಸರ್ಕಾರಕ್ಕೆ ಅವರ ಮೇಲೆ ಸಲ್ಲಬೇಕಾದ ಕಂದಾಯದ ಬಾಕಿಯನ್ನು ಪಾವತಿಮಾಡುವುದಕ್ಕೂ ಒಪ್ಪಿಕೊಂಡಿದೇನೆ. ಈ ಅರ್ಥಕ್ಕೆ ನನ್ನ ರುಜೂ ಮಾಡಿದೇನೆ.

(ರುಜು.) ರಂಗೇಗೌಡ.

ಮೇಲೆ ಕಂಡ ಕಬೂಲ್ನಾಮೆಯನ್ನು ಬರೆದುಕೊಟ್ಟಿರುವಾತನು ಅಲ್ಲಿ ಹೇಳಿರುವ ರಂಗೇಗೌಡನೇ ಎಂದು ನಾವು ಬಲ್ಲೆವು. ಆತನು ನಮ್ಮ ಎದುರಿಗೆ ರುಜೂ ಮಾಡಿದಾನೆ.

ಸಾಕ್ಷಿಗಳು.

## 13.

## ಕ್ರಿಮಿನಲ್ ಫಿರ್ಯಾದಿನ ಅರ್ಜಿ.

ಮೇಜಿಸ್ಟ್ರೇಟ

ರವರ ಕೋರ್ಟಿಗೆ.

ನೇ ಇಸವಿ ಕ್ರಿಮಿನಲ್ ನಂಬರು:

| ಫಿರ್ಯಾದಿ. | ಅಪರಾಧಿ. |
|---|---|
| ರಾಮಪುರದಲ್ಲಿರುವ ಬ್ರಾಹ್ಮಣಜಾತಿಯ ರಾಮಶಾಸ್ತ್ರಿಗಳ ಮಗ ೩೦ ವರ್ಷ ವಯಸ್ಸಿನ ರಾಮಣ್ಣ. | ರಂಗಾಪುರದಲ್ಲಿರುವ ರಂಗಣ್ಣನ ಮಗ ಪುಟ್ಟಾಚಾರಿ |

ನೆಯ ತಾರೀಖಿನಲ್ಲಿ ಫಿರ್ಯಾದಿಯು ಹೇಳಿಕೊಳ್ಳುವುದೇನೆಂದರೆ:

ಅಪರಾಧಿಯು ರಂಗಾಪುರದಲ್ಲಿ ಅಕ್ಕಸಾಲೆಯ ಉದ್ಯೋಗವನ್ನು ಮಾಡಿಕೊಂಡಿದ್ದಾನೆ.

೨. ಫಿರ್ಯಾದಿಯು ಒಂದು ಚಿನ್ನದ ಡಾಬನ್ನು ಮಾಡಿಸಬೇಕೆಂದು ನೇ ತಾರೀಖಿನಲ್ಲಿ ಅಪರಾಧಿಯ ವಶಕ್ಕೆ ಚಿನ್ನಕ್ಕೋಸ್ಕರ ನಲವತ್ತು ಪವನುಗಳನ್ನು ಕೊಟ್ಟನು. ಅಪರಾಧಿಯು ಅವುಗಳಿಂದ ಚಿನ್ನದ ಡಾಬನ್ನು ಮಾಡಿ, ಎಂಟು ದಿವಸದಲ್ಲಿ ಕೊಡುವುದಾಗಿ ಒಪ್ಪಿಕೊಂಡನು.

೩. ಅಪರಾಧಿಯು ಆ ಒಡವೆಯನ್ನು ವಾಯಿದೆಗೆ ಸರಿಯಾಗಿ ಕೊಡದೆ ತಪ್ಪಿದುದರಿಂದ, ಫಿರ್ಯಾದಿಗೆ ಸಂದೇಹ ಉಂಟಾಗಿ ವಿಚಾರಿಸಿದ್ದರಲ್ಲಿ, ತಾನು ಕೊಟ್ಟಿದ್ದ ಪವನುಗಳನ್ನು ನಾರಾಯಣಶೆಟ್ಟಿ ಎಂಬ ವರ್ತಕನ ಬಳಿಯಲ್ಲಿ ಒತ್ತೆ ಇಟ್ಟು, ಅಪರಾಧಿಯು ೩೦೦ ರೂಪಾಯಿ ಸಾಲ ತೆಗೆದುಕೊಂಡಿರುವುದಾಗಿ ತಿಳಿಯಬಂದಿದೆ.

೪. ತನ್ನ ವಶಕ್ಕೆ ಒಪ್ಪಿಸಲ್ಪಟ್ಟ ಪದಾರ್ಥವನ್ನು ಅಪರಾಧಿಯು ಹೀಗೆ ಅಪಹರಿಸಿಕೊಂಡಿರುವುದರಿಂದ, ಕೋರ್ಟಿನವರು ಅವನನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸಿ, ತನ್ನ ಸ್ವತ್ತನ್ನು ತನಗೆ ಹಿಂದಕ್ಕೆ ಕೊಡಿಸಿಕೊಡಬೇಕೆಂದು ಫಿರ್ಯಾದಿಯು ಪ್ರಾರ್ಥಿಸುತಾನೆ.

(ರುಜು) ರಾಮಣ್ಣ.

ಈ ಸಂಗತಿ ಕಂಡಿರುವ ಸಾಕ್ಷಿಗಳು:

೧ ರಾಮಪುರದಲ್ಲಿರುವ ಲಿಂಗಣ್ಣನ ಮಗ ಬೋರಣ್ಣ.

೨

೩

(ರುಜು) ರಾಮಣ್ಣ.

## 14.

## ಕ್ರಿಮಿನಲ್ ಅಪ್ಪೀಲ್ ಅರ್ಜಿ.

ಹಾಸನದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಸಾಹೇಬರವರ ಕೋರ್ಟಿಗೆ.

೧೯೩೩—೩೪ನೇ ವರ್ಷದ ಕ್ರಿಮಿನಲ್ ಅಪ್ಪೀಲ್

ಅರ್ಜಿ ನಂಬರು

ಅರ್ಜಿದಾರ

ಮಂಜರಾಬಾದ್ ತಾ॥

ಇರುವ ರಂಗೇಗೌಡನ ಮಗ ರಾಮೇಗೌಡ.

ಮೇಲೆ ಕಂಡ ಅರ್ಜಿದಾರನು ಅರಿಕೆಮಾಡಿಕೊಳ್ಳುವುದೇನೆಂದರೆ:—

ಈ ಮಂಜರಾಬಾದು ತಾಲ್ಲೂಕು ಮೇಜಿಸ್ಟ್ರೇಟರವರ ಕೋರ್ಟಿನ ಇದೇ ಇಸವಿಯ ೧೩ನೆಯ ನಂಬರು ಕ್ರಿಮಿನಲ್ ಮೊಕದ್ದಮೆಯಲ್ಲಿ ಅರ್ಜಿದಾರನ ಮೇಲೆ ಜುಲುಂ ತಪ್ಪಿತವನ್ನು ಹೊರಿಸಿ, ಫೈನಲ್

ಕೋಡ್ ೩೫೨ನೆಯ ಸೆಕ್‌ಷನ್ ಪ್ರಕಾರ ಅವನಿಗೆ ೨೫ ರೂಪಾಯಿನ ದಂಡವನ್ನು ತೆರಬೇಕೆಂಬ ಶಿಕ್ಷೆಯನ್ನು ವಿಧಿಸಿದಾರೆ.

(೨) ಪಿರ್ಯಾದಿಗೂ ಈ ಅರ್ಜಿದಾರನಿಗೂ ಮೊದಲಿಂದ ಜಿದ್ದಿತ್ತೆಂದೂ, ಪಿರ್ಯಾದಿಯ ಸಾಕ್ಷಿಗಳು ಅವನ ಕೈಕೆಳಗಿನ ಆಳುಗಳೆಂದೂ ಸಾಫಾಗಿ ರುಜುವಾತಾಗಿದೆ. ಇದರಿಂದಲೂ ಸಾಕ್ಷಿಗಳು ಪರಸ್ಪರ ವಿರೋಧವಾಗಿ ಹೇಳಿರುವುದರಿಂದಲೂ ಫಿರ್ಯಾದು ನಂಬುಗೆಗೆ ಅರ್ಹವಾದುದಲ್ಲ.

(೩) ಅಪರಾಧಿಯು ಆ ದಿವಸ ಬೇರೇ ಸ್ಥಳದಲ್ಲಿದ್ದನೆಂಬ ಸಂಗತಿಯು ಅಪರಾಧಿಯ ಕಡೆಯ ಸಾಕ್ಷಿಗಳಿಂದ ರುಜುವಾತಾಗಿದೆ.

(೪) ಈ ಕಾರಣಗಳಿಂದ ಖಾವಂದರು ಮೊಖದ್ದಮೆಯ ಕಟ್ಟನ್ನು ಪರಾಮರಿಸಿ, ಕೆಳಗಿನ ಕೋರ್ಟಿನ ಫೈಸಲನ್ನು ರದ್ದುಮಾಡಿ, ಗರೀಬನಾದ ಅರ್ಜಿದಾರನನ್ನು ಉದ್ಧಾರಮಾಡಬೇಕೆಂದು ಪ್ರಾರ್ಥನೆ. ಕೆಳಗಿನ ಕೋರ್ಟಿನ ಜಡ್ಜಮೆಂಟಿನ ನಕಲನ್ನು ಇದರೊಡನೆ ಹಾಜರ್ ಮಾಡಿದೆ.

## 15.

## ಸಿವಿಲ್ ದಾವೆಯ ಅರ್ಜಿ.

ಮುನ್ಸೀಫರವರ

ಕೋರ್ಟಿಗೆ.

| ವಾದಿ. | ಪ್ರತಿವಾದಿ. |
| --- | --- |
| ರಂಗಾಪುರದಲ್ಲಿರುವ ಲಿಂಗಣ್ಣನ ಮಗ ೩೫ ವರ್ಷದ ವಯಸ್ಸಿನ ರಂಗಣ್ಣ. | ರಾಮಪುರದಲ್ಲಿರುವ |

ನೆ ತಾರೀಖಿನಲ್ಲಿ

ಮೇಲ್ಕಂಡ ವಾದಿಯು ಹೇಳಿಕೊಳ್ಳುವುದೇನೆಂದರೆ:—

ವಾದಿಯಿಂದ ಪ್ರತಿವಾದಿಯು ಕೆಳಗೆ ವಿವರಿಸಿರುವ ಮನೆಯನ್ನು ನೇ ತಾರೀಖಿನಲ್ಲಿ ಮಾಡಿಕೊಂಡ ಕರಾರಿನ ಪ್ರಕಾರ ಒಂದು ವರ್ಷದ ವಾಯಿದೆಯ ವರೆಗೂ ಬಾಡಿಗೆಗೆ ತೆಗೆದುಕೊಂಡನು. ಸದರೀ ಕರಾರನ್ನು ಇದರೊಡನೆ ಹಾಜರ್ಮಾಡಿದೆ.

ಇದರಲ್ಲಿ ಕಂಡ ವಾಯಿದೆಯು ಕಳೆದುಹೋದ ಮೇಲೆ ಆ ಮನೆಯನ್ನು ಬಿಡದೆ ತಕರಾರ್ ಮಾಡುತಿದ್ದಾನೆ.

ಈ ವ್ಯವಹಾರಕ್ಕೆ ಕರಾರಿನ ವಾಯಿದೆಯು ಕಳೆದುಹೋದ ನೆಯ ತಾರೀಖಿನಲ್ಲಿ ಕಾರಣ ಉಂಟಾಯಿತು.

ಸದರೀ ಮನೆಯನ್ನು ಬಿಡಿಸಿಕೊಟ್ಟು, ಈ ದಾವೆಯ ಖರ್ಚುಗಳನ್ನು ಕೊಡಿಸಬೇಕೆಂದು ವಾದಿಯು ಪ್ರಾರ್ಥಿಸುತಾನೆ.

ಮನೆಯ ವಿವರ :

ಊರಿನ ಬೀದಿಯಲ್ಲಿರುವ

ಪೂರ್ವಕ್ಕೆ ದಕ್ಷಿಣಕ್ಕೆ
ಉತ್ತರಕ್ಕೆ ಪಶ್ಚಿಮಕ್ಕೆ

ಇವುಗಳ ಮಧ್ಯೆ ಇರುವ ನೆಯ ನಂಬರುಳ್ಳ ಮನೆ. ಇದಕ್ಕೆ ಬೆಲೆ ೧,೦೦೦ ರೂ.

(ರುಜು) ರಂಗಣ್ಣ.

ಮೇಲೆ ಹೇಳಿರುವ ಸಂಗತಿಗಳೆಲ್ಲಾ ನನಗೆ ಸ್ವತಃ ತಿಳಿದಿರುವ ಮಟ್ಟಿಗೆ ಸತ್ಯವಾಗಿದೆಯೆಂದೂ ನನಗೆ ಸ್ವತಃ ತಿಳಿಯದ ಸಂಗತಿಗಳನ್ನು ನಿಶ್ಚಯವೆಂದು ನಾನು ನಂಬಿದೇನೆಂದೂ ದೃಢವಾಗಿ ಹೇಳುತೇನೆ.

(ರುಜು) ರಂಗಣ್ಣ

## 16.

ಮುನ್ಸೀಫರವರ

ಕೋರ್ಟಿಗೆ.

ನೇ ಇಸವಿಯ ಸಿವಿಲ್ ದಾವೆ
ನಂಬರು

ವಾದಿ ಪ್ರತಿವಾದಿ

ರಂಗಣ್ಣ. ರಾಮಣ್ಣ.

೧೮೯೪ನೇ ಜನವರಿ ೧೫ನೇ ತಾರೀಖಿನಲ್ಲಿ ಮೇಲ್ಕಂಡ ವಾದಿಯು ಹೇಳಿಕೊಳ್ಳುವುದೇನೆಂದರೆ :—

೧೮೯೩ನೇ ಇಸವಿ ಜನವರಿ ತಾ॥ ೧೫ರಲ್ಲಿ ವಾದಿಯಿಂದ ೫೦ ರೂಪಾಯಿ ಸಾಲವಾಗಿ ಪಡೆದು, ಮೂರು ತಿಂಗಳ ವಾಯಿದೆಯೊಡನೆ ಪ್ರತಿವಾದಿಯು, ಇದರೊಡನೆ ಹಾಜರ್ಮಾಡಿರುವ ಪತ್ರವನ್ನು ಬರೆದು ಕೊಟ್ಟನು.

(೨) ಇದಕ್ಕೆ ಏಪ್ರಿಲ್ ೧೮ ರ ವರೆಗಿನ ಬಡ್ಡಿ ೧॥ ರೂಪಾಯಿ ಮಾತ್ರ ಕೊಟ್ಟು, ಬಾಕಿ ಅಸಲು ಬಡ್ಡಿಯನ್ನು ಕೊಡದೆ ತಪ್ಪಿದಾನೆ.

(೩) ವ್ಯಾಜ್ಯಕ್ಕೆ ಕಾರಣ ಪತ್ರದ ವಾಯಿದೇ ಕಳದ ೧೮೯೩ನೇ ಇಸವಿಯ ಏಪ್ರಿಲ್ ೧೫ನೇ ತಾರೀಖಿನಿಂದ ಉಂಟಾಯಿತು.

(೪) ಕೆಳಗೆ ವಿವರಿಸಿರುವ ಮೊಬಲಗಿಗೆ ಕೋರ್ಟು ಖರ್ಚುಗಳ ಸಹಿತ ಫೈಸಲಾಗಬೇಕೆಂದು ವಾದಿಯು ಪ್ರಾರ್ಥಿಸುತಾನೆ.

| | |
|---|---|
| ಪತ್ರದ ಅಸಲು | ರೂ. ೫೦—೦—೦ |
| ದಾವಾ ತಾರೀಖಿನ ವರೆಗೆ ಆಗುವ ಬಡ್ಡಿ : ತಿಂಗಳು ೧೦೦ಕ್ಕೆ ಶೇಕಡ ೧ ರೂ. ಪ್ರಕಾರ | ರೂ. ೬—೦—೦ |
| ಪೈಕಿ ವಸೂಲು | ರೂ. ೧—೮—೦ |

ಜಾತಾಬಾಕಿ ೪—೮—೦

ಒಟ್ಟು ೫೪—೮—೦

ಐವತ್ತುನಾಲ್ಕು ರೂಪಾಯಿ ಎಂಟಾಣೆ.

(ರುಜು) ರಂಗಣ್ಣ.

ಮೇಲೆ ಕೇಳಿರುವ ಸಂಗತಿಗಳೆಲ್ಲಾ

.............................................................ಇತ್ಯಾದಿ.

(ರುಜು) ರಂಗಣ್ಣ.

## 17.

### ಸರ್ಕಾರೀ ಕಾಗದ—ಯಾದಾಸ್ತು.

ಯಾದಾಸ್ತು ಡಿಸ್ಟ್ರಿಕ್ಟ

ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸಿನಿಂದ.

ಡಿವಿಜನ್ ಎಕ್ಸಿಕ್ಯುಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿಗೆ.

ಲಕ್ಷ್ಮೀಪುರದ ಕೆರೆಯ ಕಾಮಗಾರಿಯನ್ನು ಮಾಡಿಸುವುದರಲ್ಲಿ ತಮ್ಮ ಇಲಾಖೆಯ ಕಂಟ್ರಾಕ್ಟರ್ ಆ ಗ್ರಾಮದ ರೈತನಾದ ಲಿಂಗೇಗೌಡ ನೆಂಬುವನ ಜಮೀನಿನಲ್ಲಿ ನಾಲ್ಕು ಗುಂಡಿಗಳನ್ನು ಹೊಡೆದು, ನಷ್ಟ ಪಡಿಸಿದಾನೆಂದು ಬಂದಿರುವ ಅರ್ಜಿಯನ್ನು ತಮ್ಮ ಪರಾಮರಿಕೆ ಬಗ್ಗೆ ಇದರೊಡನೆ ರವಾನಿಸಿದೆ. ವಿಚಾರಣೆಯಿಂದ ಇದು ನಿಶ್ಚಯವಾಗಿ ತೋರಿದಲ್ಲಿ ಅದಕ್ಕೆ ತಕ್ಕ ಪರಿಹಾರದ್ರವ್ಯವನ್ನು ಕೊಡಿಸಿಕೊಡಬೇಕಾಗಿರುವುದರಿಂದ ದಯವಿಟ್ಟು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿದಲ್ಲಿ ಮುಂದಿನ ಅಮಲನ್ನು ನಡಿಸುವುದಕ್ಕೆ ಅನುಕೂಲವಾಗಿರುವುದೆಂಬ ವಿವರವನ್ನು ಶ್ರುತಪಡಿಸಿದೆ.

ಮೊಕ್ಕಾಂ ತಾ ನೇ ೧೮೯೪.

(ರುಜು)

ಡೆ. ಕಮಿಷನರ್.

## 18.

## ಉತ್ತರ.

ಲಕ್ಷ್ಮೀಪುರದ ಕೆರೆಯ ಕಂಟ್ರಾಕ್ಟರ್ ಮೇಲೆ ಲಿಂಗೇಗೌಡನೆಂಬುವ ರೈತನು ಮಾಡಿರುವ ಫಿರ್ಯಾದಿನಲ್ಲಿ ಸದರೀ ಕಂಟ್ರಾಕ್ಟರೂ ಮತ್ತೂ ನಮ್ಮ ಇಲಾಖೆಯ ಓವರ್ಸಿಯರೂ ಹೇಳುವ ಪ್ರಕಾರ ಇವರು ಗುಂಡಿ ಹೊಡೆದಿರುವ ಜಮೀನು ಸದರೀ ಲಿಂಗೇಗೌಡನ ಜಮೀನಿಗೆ ಸೇರಿದ್ದಲ್ಲವೆಂದು ತಿಳಿಯಬಂತು. ಈ ತಿಂಗಳು ೪ನೇ ತಾರೀಖಿನಲ್ಲಿ ನಾವು ಆ ಪ್ರಾಂತ್ಯ ಹೋದಾಗ ಖುದ್ದು ನೋಡಿದೆವು. ಇದು ಸ್ಪಷ್ಟವಾಗಿ ಜಮೀನಿನ ಬಾಂದುಗಳಿಂದ ಹೊರಗೆ ಇರುವುದರಿಂದ ಈ ರೈತನಿಗೆ ಯಾವ ಪರಿಹಾರವನ್ನು ಹೊಂದುವುದಕ್ಕೂ ಹಕ್ಕಿರುವುದಿಲ್ಲವಾದ ಸಂಗತಿಯನ್ನು ಶ್ರುತಪಡಿಸಿದೆ.

ತಾ॥ ೧೮೯೪, ಮೊಕ್ಕಾಂ

(ರುಜು)

ಎಕ್ಸಿಕ್ಯುಟಿವ್ ಇಂಜಿನಿಯರ್

ಡಿವಿಜನ್.

ಮೊದಲು ಬಂದ ಯಾದಿಯ ಕೆಳಗೆಯೇ ಅದರ ಉತ್ತರವನ್ನು ಬರೆವರೆ ಮೇಲೆ ತೋರಿಸಿರುವ ಹಾಗೆ 'ಉತ್ತರ' ಎಂದು ಬರೆದು ಬಿಟ್ಟರೆ ಸಾಕಾಗಿರುವುದು. ಬೇರೇ ಕಾಗದದಲ್ಲಿ ಬರೆಯಬೇಕಾದರೆ ೧೩ನೆಯ ನಮೂನೆಯಲ್ಲಿ ತೋರಿಸಿರುವಂತೆ ಸಿರ್‌ನಾಮೆಯನ್ನು (ಅಂದರೆ, ಮೇಲೆ ಬರೆಯತಕ್ಕ ವಿಳಾಸ ಮುಂತಾದ ಬರವಣಿಗೆಯನ್ನು) ಬರೆಯಬೇಕು.

## 19.

ಡೆಪ್ಯುಟಿ ಕಮಿಷನರ್

ಸಾಹೇಬರವರು.

ತಾಲ್ಲೂಕು ಅಮಲ್ದಾರರಿಗೆ ಕಳುಹಿಸಿದ ಹುಕುಂ.

ನಿಮ್ಮ ತಾಲ್ಲೂಕಿನ ಜಮಾಬಂದಿಯನ್ನು ಮಾಡುವುದಕ್ಕೆ ಈ ತಿಂಗಳು ೧೫ನೇ ತಾರೀಖಿನಲ್ಲಿ ನಾವು          ಮೊಕ್ಕಾಮಿಗೆ ಬರಬೇಕೆಂದಿರುವುದರಿಂದ ಆ ದಿನ ಮಧ್ಯಾಹ್ನ ೨ ಘಂಟೆಗೆ ತಕ್ಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ, ಕುಳಗಳು ಸದರೀ ಮೊಕ್ಕಾಮಿಗೆ ಹಾಜರಾಗುವಂತೆ ತಾಲ್ಲೂಕಿನಲ್ಲಿ ಡಂಗೂರ ಮೂಲಕ ತಿಳಿಯಪಡಿಸಿ, ತಕ್ಕ ತದರ್ಗಾದನ್ವಿಟ್ಟಿರ ತಕ್ಕದ್ದು.

ತಾರೀಖು ೧ನೇ          ೧೮೯೪ ಮೊಕ್ಕಾಂ

(ರುಜು)

ಡೆಪ್ಯುಟಿ ಕಮಿಷನರ್ ಸಾಹೇಬರಿಗೋಸ್ಕರ.

## 20.

### ಇತ್ತಿಲ್ಲೆ ಅಥವಾ ಅರ್ಜಿ.

ಡೆಪ್ಯುಟಿ ಕಮಿಷನರ್
ಸಾಹೇಬರವರ ಸನ್ನಿಧಾನಕ್ಕೆ.

ತಾಲ್ಲೂಕು ಅಮಲ್ದಾರರ ಅರ್ಜಿ:

ತಮ್ಮ  ನೇ ತಾರೀಖಿನ  ನೇ ನಂಬರು ಹುಕುಂ ಪ್ರಕಾರ ಈ ತಾಲ್ಲೂಕು ನಾಗನಹಳ್ಳಿ ಹೋಬಳಿ ನಾಗವಾಲ ಗ್ರಾಮಕ್ಕೆ ಈ ತಿಂಗಳು ೬ನೇ ತಾರೀಖಿನಲ್ಲಿ ಸೇವಕನು ಸ್ವತಃ ಹೋಗಿ, ಗ್ರಾಮಸ್ಥರನ್ನೆಲ್ಲಾ ಸೇರಿಸಿಕೊಂಡು, ಹುಕುಂ ಸಂಗತಿ ತಿಳಿಯಪಡಿಸಿದೆನು. ಅದರಲ್ಲಿ ಅಪ್ಪ

ಣೆಯಾಗಿರುವಂತೆ ತಮ್ಮ ಗ್ರಾಮದಲ್ಲಿ ಹೋಗುವ ರಸ್ತೆಯ ಪಕ್ಕದಲ್ಲಿ ತಾವು ಸಾಲು ಗಿಡಗಳನ್ನು ಹಾಕುವುದಕ್ಕೆ ತಮ್ಮ ಗ್ರಾಮದ ಸರಹದ್ದು ಬಹಳ ದೂರದವರೆಗೂ ಇರುವುದರಿಂದ ತಮ್ಮ ಗ್ರಾಮದಲ್ಲಿ ಇರುವ ರೈತರು ಸ್ವಲ್ಪ ಜನ, ಇವರಲ್ಲಿ ಒಬ್ಬೊಬ್ಬನು ಅನೇಕ ಗಿಡಗಳನ್ನು ಹಾಕಬೇಕಾಗುವುದರಿಂದ ಇದು ಸಾಧ್ಯವಾಗಲಾರದೆಂದು ತಕರಾರು ಹೇಳಿಕೊಂಡರು. ಬಹಳ ಹೊತ್ತು ಸಮಜಾಯಿಷಿ ಹೇಳಿ, ರೂಲ್ಸುಪ್ರಕಾರ ಗಿಡಗಳ ಫಲ ಮತ್ತು ಕೊನೆಗಳ ವಿಷಯದಲ್ಲಿ ತಮಗೆ ಉಂಟಾಗುವ ಹಕ್ಕನ್ನೂ ತಮ್ಮ ಗ್ರಾಮದ ಬಳಿಯಲ್ಲಿ ರಸ್ತೆಯಲ್ಲಿ ನೆರಳಿದ್ದರೆ ತಮಗೆ ಆಗುವ ಉಪಕಾರವನ್ನೂ ತಿಳಿಯಪಡಿಸಿದ್ದಲ್ಲದೆ, ಈ ಗಿಡಗಳು ದೊಡ್ಡದಾಗುವ ವರೆಗೂ ನೀರು ಹಾಕಿ ಕಾಪಾಡತಕ್ಕ ತೊಂದರೆಗೋಸ್ಕರ ಅವರಿಗೆ ರಿಯಾಯತಿಯಾಗಿ ಇನ್ನು ಐದು ವರುಷಗಳ ವರೆಗೂ ಈ ಗ್ರಾಮದ ಬಂಜರ್ ಜಮೀನಿನ ಹುಲ್ಲಬನ್ನಿಯನ್ನು ಹರಾಜಿಲ್ಲದೆ ಇವರಿಗೆ ಕೊಡುವಂತೆ ಸಿಫಾರಸು ಮಾಡುವುದಾಗಿ ಅವರನ್ನು ಒಪ್ಪಿಸಲಾಗಿದೆ. ಖಾವಂದರು ದಯವಿಟ್ಟು ಈ ರಿಯಾಯತಿಯನ್ನು ಅವರಿಗೆ ಉಂಟುಮಾಡಿಕೊಟ್ಟರೆ ಕೆಲಸ ಸಲೀಸಾಗಿ ನಡೆಯುವುದೆಂಬ ವಿಷಯವನ್ನು ಅರಿಕೆ ಮಾಡಿಕೊಂಡಿದೇನೆ.

ತಾರೀಖು ಮೊಕ್ಕಾಂ

(ರುಜು)

ಅಮಲ್ದಾರ್.

## ಸರ್ಕಾರೀ ಲಕೋಟೆಗಳ ಮೇಲೆ ಬರೆಯತಕ್ಕ ನಮೂನೆ.

............................................ಆಫೀಸಿನಿಂದ.

ಮೈಸೂರು ಸರ್ಕಾರಿ.

.............................................................

.............................................................ಆಫೀಸಿಗೆ.

(ರುಜು)

ರಾಮಯ್ಯ
ಮುನ್ಷೀ

(ಊರು)........................

ಬಲಗಡೆ ಮೇಲಿನ ಮೂಲೆಯಲ್ಲಿ "ಸರ್ಕಾರಿ" ಎಂದು ಬರೆದು ಕೆಳಗೆ ಎಡಗಡೆಯ ಮೂಲೆಯಲ್ಲಿ ಆಫೀಸಿನ ಮುನ್ಷೀ, ಗುಮಾಸ್ತೆ ಅಥವಾ ಇತರ ಸರ್ಕಾರದ ಉದ್ಯೋಗಸ್ಥನ ರುಜು ಇಲ್ಲದಿದ್ದರೆ, ಇಂತಾ ಲಕೋಟೆಗಳಿಗೆ ಸ್ಟಾಂಪಿಲ್ಲದ ಲಕೋಟೆಗಳಂತೆ ದುಗಣಿ ಹಾಸಲನ್ನು ವಸೂಲ್ಮಾಡಿಕೊಳ್ಳುವರು, ಮೈಸೂರು ಸೀಮೆಯಲ್ಲಿ ಸರ್ಕಾರೀ ಕಾಗದಗಳಿಗೆ ಸ್ಟಾಂಪು ಹಾಕುವುದಿಲ್ಲ. ಬ್ರಿಟಿಷ್ ಸೀಮೆಯಲ್ಲಿ "ಸರ್ಕಾರಿ" ಎಂದು ಗುರ್ತು ಮಾಡಿರುವ ಸ್ಟಾಂಪುಗಳನ್ನು ಹಚ್ಚುತಾರೆ.

## 3ನೆಯ ಭಾಗ.

---

### ಲೇವಾದೇವಿಯ ಪತ್ರಗಳು.

32. ವ್ಯವಹಾರವಿಷಯಕವಾದ ಲೇವಾದೇವಿಗಳಲ್ಲಿ ಮುಂದಕ್ಕೆ ಬರಬಹುದಾದ ಸಂದೇಹಗಳನ್ನೂ ವಿವಾದಗಳನ್ನೂ ಸುಲಭವಾಗಿ ಫೈಸಲ್ಮಾಡಿಕೊಳ್ಳಬೇಕೆಂದು ಕಾಗದದಲ್ಲಿ ಇಂತಾ ಲೇವಾದೇವಿಗಳ ವಿವರವನ್ನು ಬರೆದಿರುತಾರೆ. ಕೆಲವು ಪತ್ರಗಳಿಗೆ ಇಬ್ಬರು ಸೇರಿರಬೇಕು; ಕೆಲವಕ್ಕೆ ಒಬ್ಬರೇ ಸೇರತಕ್ಕದ್ದು. ಇವೆರಡರಲ್ಲಿಯೂ ಮುಖ್ಯವಾಗಿಟ್ಟುಕೊಳ್ಳತಕ್ಕ ಅಂಶವೇನೆಂದರೆ: ಬರೆಯುವವರ ಉದ್ದೇಶಗಳನ್ನೆಲ್ಲಾ ಸ್ವಲ್ಪವೂ ಅನುಮಾನಕ್ಕೆ ಆಸ್ಪದವಿಲ್ಲದೆ ಸ್ಪಷ್ಟವಾಗಿ ತಿಳಿಯುವಂತೆ ಬರೆದಿಟ್ಟಿರುವುದು. ಅರ್ಜಿಗಳನ್ನು ಸರಿಯಾಗಿ ಬರೆಯಬೇಕಾಗಿದ್ದರೆ ಹೇಗೆಯೋ, ಇದಕ್ಕೂ ಸ್ವಲ್ಪ ಮಟ್ಟಿಗೆ ಹಾಗೆಯೇ ಕಾನೂನುಗಳು ಮುಂತಾದುವುಗಳನ್ನು ತಿಳಿದುಕೊಂಡಿದ್ದರೆ ಮೇಲು.

33. ಪತ್ರಗಳಲ್ಲಿ ಪತ್ರಕ್ಕೆ ಸಂಬಂಧಪಟ್ಟ ಜನರ ಹೆಸರು, ಅವರು ಇಂತವರೇ ಎಂದು ನಿರ್ಧರವಾಗಿ ತಿಳಿಯಲು ಆವಶ್ಯಕವಾದ ಅಡ್ಡಹೆಸರು ಮುಂತಾದ ವಿವರ, ಅದರ ಸ್ಥಳ ಮತ್ತು ಕಾಲ ಅದರ ಷರತ್ತುಗಳು, ಬರೆದು ಕೊಡುವವರ ಮತ್ತು ಸಾಕ್ಷಿಗಳ ರುಜುಗಳು ಇವೆಲ್ಲಾ ಇರಬೇಕು.

34. ವ್ಯವಹಾರಗಳಲ್ಲಿ ಇಂಗ್ಲೀಷ್ ತಾರೀಖಿನ ಪ್ರಕಾರವೇ ಕಾಲನಿರ್ಣಯವಾಗತಕ್ಕದ್ದಾದುದರಿಂದ ಪ್ರತಿಯೊಂದು ಪತ್ರದಲ್ಲಿಯೂ ಇಂಗ್ಲೀಷ್ ತಾರೀಖನ್ನು ಬರೆಯಬೇಕು. ಕರ್ಣಾಟಕ ಸಂವತ್ಸರ ಮುಂತಾದುವನ್ನು ಸಾಧಾರಣವಾಗಿ ಹಾಕಬೇಕೆಂಬ ಆವಶ್ಯಕತೆ ಇಲ್ಲ; ಆದರೆ

ಹಾಕುವಾಗೆಲ್ಲಾ ಅದೂ ಇಂಗ್ಲೀಷ್ ತಾರೀಖೂ ಒಂದೇ ಆಗಿರುವಂತೆ ಹಾಕಬೇಕು. ಕೆಲವು ಪತ್ರಗಳಲ್ಲಿ ಷರತ್ತುಗಳ ಕಾಲನಿರ್ಣಯವನ್ನು ಮಾಡುವುದಕ್ಕೆ ಕರ್ಣಾಟಕದ ಮಾಸ, ತಿಥಿ ಮುಂತಾದವು ಬೇಕಾಗು ವಾಗ, ಅವನ್ನೂ ಹಾಕುವುದು ಮೇಲು.

35. ಕಾಗದ ಪತ್ರಗಳನ್ನು ಸರಿಯಾಗಿ ಬರೆಯದೆ ಇರುವುದ ರಿಂದ ಅನೇಕ ವ್ಯಾಜ್ಯಗಳು ಹುಟ್ಟುತವೆ. ಸಾಧಾರಣವಾಗಿ ವ್ಯವಹಾ ರಾಸ್ಪದವಾಗಬಹುದಾದ ಸಂಗತಿಗಳನ್ನೆಲ್ಲಾ ಕಾಗದದಲ್ಲಿ ಬರೆದಿಡುವುದೇ ಒಳ್ಳೇದು. ಕರಾರುಗಳಲ್ಲಿ ಅರ್ಥಿ ಪ್ರತ್ಯರ್ಥಿಗಳು ಮಾಡಿಕೊಳ್ಳುವ ಷರತ್ತುಗಳನ್ನೆಲ್ಲಾ ಸ್ಪಷ್ಟವಾಗಿ ತಿಳಿಯುವಂತೆ ಬರೆದಿರಬೇಕು; ಕೆಲ ವು ಷರತ್ತುಗಳನ್ನು ಬರೆದು ಕೆಲವನ್ನು ಬಿಟ್ಟರಕೂಡದು. ಎರಡೂ ಮೂರೂ ಅರ್ಥವಾಗುವಂತೆ ಇದ್ದು ಸಂದೇಹವನ್ನು ಉಂಟುಮಾಡುವ ಮಾತುಗಳನ್ನು ಉಪಯೋಗಿಸಲೇ ಕೂಡದು. ಯಾವ ಮಾತಿಗಾದ ರೂ ಸಾಧಾರಣವಾಗಿ ಒಂದು ಅರ್ಥವೂ ಸ್ಥಳಪದ್ಧತಿಯ ಪ್ರಕಾರ ಒಂದು ಅರ್ಥವೂ ಇರುವಾಗ, ಅದಕ್ಕೆ ಇಂತಾ ಅರ್ಥವೇ ಎಂಬ ಸಂಗತಿಯ ನ್ನು ಸ್ಪಷ್ಟಪಡಿಸಿರಬೇಕು.

36. ಕರಾರು ಅಥವಾ ಇತರ ಪತ್ರವು ಯಾವುದಾದರೂ ಸ್ವ ತ್ತಿನ ವಿಷಯವಾದುದಾಗಿದ್ದರೆ, ಆ ಸ್ವತ್ತನ್ನು ಚೆನ್ನಾಗಿ ವಿವರಿಸಿರ ಬೇಕು. ಸ್ಥಿರಸ್ವತ್ತಿಗೆ ಚೌತರ್ಫನ್ನೂ ಅಂದರೆ ನಾಲ್ಕುದಿಕ್ಕೂ ಇರು ವವುಗಳನ್ನೂ, ಸರ್ಕಾರದ ಲೆಕ್ಕಗಳಲ್ಲಿ ಅದಕ್ಕೆ ಯಾವುದಾದರೂ ಗು ರ್ತಿನ ಸಂಖ್ಯೆ ಬಿದ್ದಿದ್ದರೆ, ಆ ನಂಬರನ್ನೂ ಬರೆಯಬೇಕು. ಮುಖ್ಯ ವಾಗಿ ಸ್ವತ್ತು ಇಂತಾದ್ದೇ ಎಂದು ಗುರ್ತು ತಿಳಿಯಲು ತಕ್ಕ ನೆಲೆಯಾ ಗಿರುವಂತಾ ಗುರ್ತುಗಳನ್ನು ಬರೆದಿರಬೇಕು.

37. ಪತ್ರವನ್ನು ಯಾರು ಬರೆದುಕೊಡುವರೋ ಅವರು ಅದರ ಕೆಳಗೆ ತಮ್ಮ ರುಜೂ ಹಾಕಬೇಕು; ಅವರಿಗೆ ಬರೆಯುವುದು ತಿಳಿಯದಿದ್ದರೆ, ಅವರ ಕೈಯಿಂದಲೇ ಗುರ್ತು ಹಾಕಿಸಿ, ಅದು ಇಂತಾ ವರ ಗುರ್ತೆಂದು ಮತ್ತೊಬ್ಬರು ಬರೆಯಬೇಕು. ಸಾಕ್ಷಿಗಳಿರತಕ್ಕ ಪತ್ರವಾದರೆ ಲೇವಾದೇವಿಯು ನಡೆಯುವಾಗಲೇ ಸಾಕ್ಷಿಗಳ ರುಜುವ

ನ್ನೂ ಮಾಡಿಸುವುದು ಒಳ್ಳೇದು. ಸಾಧಾರಣವಾಗಿ ಓದುಬರಹ ತಿಳಿದವರನ್ನೇ ಪತ್ರಗಳಿಗೆ ಸಾಕ್ಷಿಗಳನ್ನಾಗಿ ಇಟ್ಟುಕೊಳ್ಳುವುದು ಮೇಲು.

38. ಈ ಸಂಗತಿಗಳನ್ನೆಲ್ಲಾ ಸರಿಯಾಗಿ ನೋಡಿಕೊಂಡು, ಪತ್ರಗಳನ್ನು ಬರೆದರೆ ಸಾಕಾಗಿರುವುದು. ಕನ್ನಡ ಮುಂತಾದ ಇತರ ದೇಶೀಯ ಭಾಷೆಗಳಲ್ಲಿ ಕಾಗದ ಪತ್ರಗಳನ್ನು ಮೋಡಿಯಾಗಿ ಬರೆಯುವವರೆಲ್ಲರೂ ಅನೇಕ ತಪ್ಪುಗಳನ್ನು ಬರೆಯುತಾರೆ. ಇದು ಸರಿಯಲ್ಲ; ತಕ್ಕಮಟ್ಟಿಗೂ ಬರವಣಿಗೆಯಲ್ಲಾಗಲೀ ಮಾತುಗಳಲ್ಲಾಗಲೀ ತಪ್ಪುಗಳನ್ನು ಮಾಡದೆ, ಎಷ್ಟು ಶುದ್ಧವಾಗಿಯೂ ಸ್ಪಷ್ಟವಾಗಿಯೂ ಬರೆಯುವುದು ಸಾಧ್ಯವೋ ಪ್ರತಿ ಒಬ್ಬನೂ ಅಷ್ಟು ಸರಿಯಾಗಿ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಕೆಲವರು ಮತ್ತೊಂದು ವಿಧವಾದ ತಪ್ಪುಗಳನ್ನು ಮಾಡುತಾರೆ. ಕನ್ನಡ ಭಾಷೆಯಲ್ಲಿ ವಾಡಿಕೆಯಾಗಿ ಸುಲಭವಾಗಿ ತಿಳಿಯುವ ಮಾತುಗಳಿರುವಾಗ, ಅವನ್ನು ಬಿಟ್ಟು ಹಿಂದುಸ್ತಾನಿ ಮುಂತಾದ ತಿಳಿಯದ ಮಾತುಗಳನ್ನು ಉಪಯೋಗಿಸುತಾರೆ. ಇದು ಮುಖ್ಯವಾಗಿ ಕಚೇರಿಗಳಲ್ಲಿ ಉದ್ಯೋಗಸ್ಥರಾಗಿರುವ ಮುನಿಷೀರೂ ಗುಮಾಸ್ತರೂ ಮಾಡುವ ತಪ್ಪು. ಮೋಡಿ ಎಂಬ ಬರವಣಿಗೆ ಯಾರಿಗೂ ತಿಳಿಯದಂತೆ ಅನೇಕರು ಬರೆಯುತಾರೆ. ಬರವಣಿಗೆಯ ಉದ್ದೇಶವೇ ಇತರರಿಗೆ ತಿಳಿಯತಕ್ಕದ್ದಾಗಿರಬೇಕೆಂಬುವುದಾದ್ದರಿಂದ ಹೀಗೆ ಬರೆಯುವುದು ಸರಿಯಲ್ಲ. ಇಂತಾ ತಪ್ಪುಗಳನ್ನೆಲ್ಲಾ ಬಿಟ್ಟುಬಿಟ್ಟರೆ ಕಾಗದ ಪತ್ರಗಳನ್ನು ಓದುವವರಿಗೂ ಅವುಗಳ ವಿಷಯವಾಗಿ ವ್ಯಾಜ್ಯಬಂದಾಗ ನೋಡಿ ಫೈಸಲ್ಮಾಡಬೇಕಾದವರಿಗೂ ಬಹಳ ಸುಲಭವಾಗುವುದು.

39. ಲೇವಾದೇವಿಯ ವಿಷಯವಾದ ಪತ್ರಗಳನ್ನೆಲ್ಲಾ ಸ್ಟಾಂಪಾಕ್ಟಿನ ನಿಬಂಧನೆಗಳ ಪ್ರಕಾರ ಛಾಪಾಕಾಗದಗಳ ಮೇಲೆ ಬರೆಯಬೇಕು. ಅವುಗಳನ್ನು ಇದೇ ರೀತಿಯಲ್ಲಿ ಬರೆಯಬೇಕೆಂಬುದಾಗಿ ಕೆಲವು ನಿಬಂಧನೆಗಳಿವೆ.

ಬಂದಾಣೆಯ ಸ್ಟಾಂಪು ಸಾಕಾಗುವ ಪತ್ರಗಳು ವಿನಾ ಇತರ

ಪತ್ರಗಳನ್ನೆಲ್ಲಾ ಛಾಪಾಕಾಗದದಲ್ಲಿಯೇ ಬರೆಯಬೇಕು. ಬಂದಾಣೆಯ ಸ್ಟ್ಯಾಂಪಿನಲ್ಲಿ ಬರೆಯಬೇಕಾದವುಗಳನ್ನೆಲ್ಲಾ ಸಾದಾ ಕಾಗದದಲ್ಲಿ ಬರೆದು, ಅವಕ್ಕೆ ಬಂದಾಣೆಯ ಸ್ಟ್ಯಾಂಪನ್ನು ಹಚ್ಚಬೇಕು. ಹುಂಡಿಗಳಿಗೋಸ್ಕರ ಬೇರೇ ಕಾಗದಗಳನ್ನು ಏರ್ಪಾಡು ಮಾಡಿದಾರೆ. ಅವುಗಳ ಮೇಲೆಯೇ ಅವನ್ನು ಬರೆಯಬೇಕು. ದರ್ಶನ ಹುಂಡಿಗಳನ್ನು ಮಾತ್ರ ಖಾಲೀ ಕಾಗದದಲ್ಲಿ ಬರೆದು ಅದಕ್ಕೆ ಬಂದಾಣೆಯ ಸ್ಟ್ಯಾಂಪನ್ನು ಹಚ್ಚಬಹುದು. ಯಾವ ಪತ್ರವನ್ನು ಬರೆಯಬೇಕಾದರೂ, ಅದಕ್ಕೆ ಹೇಳಿರುವ ಸ್ಟ್ಯಾಂಪಿನ ಬೆಲೆಗೆ ಬಂದೇ ಛಾಪಾಕಾಗದವಿದ್ದರೆ ಬಂದರ ಮೇಲೆಯೇ ಬರೆಯಬೇಕು. ಇಲ್ಲದಿದ್ದರೆ ಎಷ್ಟು ಸ್ವಲ್ಪ ಸಂಖ್ಯೆಯ ಕಾಗದಗಳು ಸಾಕಾದರೆ ಅಷ್ಟನ್ನು ಮಾತ್ರ ಉಪಯೋಗಿಸಿಕೊಳ್ಳಬೇಕು. ಛಾಪಾಕಾಗದಗಳನ್ನು ಮಾರುವವರ ಬಳಿಯಲ್ಲಿ ಹೀಗೆ ತಕ್ಕ ಕಾಗದಗಳು ಇಲ್ಲದೆ ಇರುವಾಗ, ಅವರು ಆ ವಿಷಯವನ್ನು ಬರೆದು, ರುಜು ಹಾಕಿ, ತಮ್ಮಲ್ಲಿ ಆ ಬೆಲೆಗೆ ಸರಿಯಾಗುವಂತೆ ಇರುವ ಕಾಗದಗಳನ್ನು ಕೊಡುವರು.

40. ಛಾಪಾಕಾಗದಗಳ ಮೇಲೆ ಪತ್ರವನ್ನು ಬರೆಯುವಾಗ ಬರವಣಿಗೆಯನ್ನು ಕಾಗದದಲ್ಲಿ ಮುದ್ರೆ ಇರುವ ಕಡೆಯಲ್ಲಿ ಮೊದಲು ಮಾಡಬೇಕು. ಮುಖ್ಯವಾಗಿ ಅದೇ ಕಾಗದದ ಮೇಲೆ ಮತ್ತೊಂದು ಪತ್ರವನ್ನು ಬರೆಯಲಿಕ್ಕೆ ಅವಕಾಶವಿರದಂತೆ ಮಾಡಿರಬೇಕು. ಬಂದೇ ದಸ್ತೈವಜಿಗೆ ಅನೇಕ ಕಾಗದಗಳನ್ನು ಉಪಯೋಗಿಸಬೇಕಾದಾಗ, ಆ ದಸ್ತೈವಜಿನ ಕೆಲಕೆಲವು ಭಾಗವು ಪ್ರತಿ ಬಂದು ಕಾಗದದ ಮೇಲೂ ಇರುವಂತೆ ಅದನ್ನು ಬರೆಯಬೇಕು. ಛಾಪಾಕಾಗದದಲ್ಲಿ ದಸ್ತೈವಜಿಗೆ ಸ್ಥಳ ಸಾಲದಿದ್ದರೆ ಅದಕ್ಕೆ ಬೇರೇ ದಪ್ಪವಾದ ಬಿಳೀ ಕಾಗದವನ್ನು ಹಚ್ಚಿ ಅದರ ಮೇಲೆ ಬರೆಯಬೇಕು; ಛಾಪಾಕಾಗದದ ಹಿಂದುಗಡೆ ಬರೆಯಕೂಡದು. ಹೀಗೆ ಖಾಲೀ ಕಾಗದವನ್ನು ಹಚ್ಚಿದಾಗ ಪತ್ರವನ್ನು ಬರೆದುಕೊಡುವವನ ಮತ್ತು ಸಾಕ್ಷಿಗಳ ರುಜುಗಳು ಆ ಖಾಲೀಕಾಗದದ ಮೇಲೆ ಬಿದ್ದಿರಬೇಕು. ಛಾಪಾಕಾಗದದ ಮೇಲೆ ಬಂದು ದಸ್ತೈವಜು ಬರೆಯಲ್ಪಟ್ಟಿರುವಾಗ, ಅದಕ್ಕೆ ಸಂಬಂಧಪಟ್ಟ ರಸೀತಿ; ಅಥವಾ ಆ

ದಸ್ತೈವಜಿನ ಹಕ್ಕನ್ನು ವರ್ಗಮಾಡುವುದಕ್ಕೋಸ್ಕರ ಮಾಡಲ್ಪಡಬಹುದಾದ ಷರಾ, ಇವು ವಿನಾ, ಅದರ ಮೇಲೆ ಸ್ಟಾಂಪಿಗೆ ಗುರಿಯಾದ ಮತ್ತೊಂದು ದಸ್ತೈವಜನ್ನು ಬರೆಯಕೂಡದು. ಹಾಲೀಕಾಗದದ ಮೇಲೆ ದಸ್ತೈವಜನ್ನು ಬರೆದು, ಬೇರೇ ಸ್ಟಾಂಪನ್ನು ಹಚ್ಚಬಹುದಾದ ಸಂದರ್ಭಗಳಲ್ಲಿ, ಹಾಗೆ ಸ್ಟಾಂಪನ್ನು ಹಚ್ಚುವವರು, ಆ ಸ್ಟಾಂಪು ಪುನಃ ಮತ್ತೊಂದು ದಸ್ತೈವಜಿಗೆ ಹಚ್ಚಲು ಉಪಯೋಗವಾಗದಂತೆ (ಅದರ ಮೇಲೆ ರುಜು ಹಾಕುವುದೂ ಅಥವಾ ಇತರ ಮಾರ್ಗಗಳಲ್ಲಿ) ಮಾಡಬೇಕು. ಈಗ ಹೇಳಿದ ಪ್ರಕಾರ ನಡೆಸದೆ ಇದ್ದರೆ ಆ ಪತ್ರವನ್ನು ಸ್ಟಾಂಪಿಲ್ಲದೆ ಬರೆದಂತೆ ಊಹಿಸುವರು.

## ನಮೂನೆಗಳು

### ೧.

### ಬರೀ ಸಾಲದ ಪತ್ರ.

ಸನ್ ೧೮೯೦ನೇ ಇಸವಿಯ ಅಕ್ಟೋಬರು ತಾರೀಖು ೫ ರಲ್ಲಿ ರಂಗಾಪುರದಲ್ಲಿರುವ ಲಿಂಗಣ್ಣನ ಮಗ ೩೫ ವರ್ಷ ವಯಸ್ಸುಳ್ಳ ರಂಗಣ್ಣನು ರಾಮಪುರದಲ್ಲಿರುವ ಶಾಮಣ್ಣನ ಮಕ್ಕಳು ರಾಮಣ್ಣನವರಿಗೆ ಬರೆದುಕೊಟ್ಟ ಪತ್ರದ ಕ್ರಮವೆಂತೆಂದರೆ:—ನಾನು ನಿಮ್ಮಿಂದ ಈ ದಿವಸ ನಗದು ಸಾಲವಾಗಿ ತೆಗೆದುಕೊಂಡಿರುವುದು ೧೫೦ ರೂಪಾಯಿ; ಇದಕ್ಕೆ ಮೊದಲೇ ಸಾಲ ತೆಗೆದುಕೊಂಡು, ನಿಮಗೆ ೧೮೮೮ನೇ ಇಸವಿಯ ಮೇ ತಿಂಗಳು ೮ನೇ ತಾರೀಖಿನಲ್ಲಿ ಬರೆದು ಕೊಟ್ಟಿದ್ದ ಪತ್ರದ ಅಸಲು ಬಡ್ಡಿಯನ್ನು ಈ ದಿವಸ ಲೆಕ್ಕಾಚಾರ ಮಾಡಿದ ಮೇರೆಗೆ ನನ್ನ ಮೇಲೆ ಬಾಕಿಯಾಗಿರುವುದು ೧೫೦ ರೂಪಾಯಿ; ಹೀಗೆ ಒಟ್ಟು ಮೊಬಲಗು ಮುನ್ನೂರು ರೂಪಾಯಿ *ನಾನು ನಿಮಗೆ ಕೊಡಬೇಕಾಗಿದೆ. ಈ

* ಅಂಕಿಯಲ್ಲಿ ಮಾತ್ರ ಹಣವನ್ನು ಹಾಕಿದ್ದರೆ, ಅದನ್ನು ಹೆಚ್ಚು ಕಡಮೆ ಮಾಡುವುದು ಸುಲಭವಾಗಿರುವುದು. ಆದ್ದರಿಂದ ಕೊಡತಕ್ಕ ಹಣ ಇಷ್ಟೆಂಬುವುದನ್ನು ಅಕ್ಷರದಲ್ಲಿ ಬರೆಯಬೇಕು.

ಮೊಬಲಗನ್ನು ಈ ತಾರೀಖಿನಿಂದ ಒಂದುವರ್ಷ ವಾಯಿದೆ ಕಳದ ಕೂಡಲೇ ಕೊಡಲು ಬದ್ಧನಾಗಿದೇನೆ. ಅದುವರೆಗೂ ತಿಂಗಳು ಒಂದಕ್ಕೆ ಸೇಕಡಾ ಒಂದು ರೂಪಾಯಿನಂತೆ ಬಡ್ಡಿಯನ್ನೂ ಸೇರಿಸಿ ಕೊಡುತೇನೆ. ವಾಯಿದೆಗೆ ಸರಿಯಾಗಿ ಹಣವನ್ನು ಪಾವತೀಮಾಡದೆ ತಪ್ಪಿದಪಕ್ಷದಲ್ಲಿ ಮುಂದಕ್ಕೆ ನಡೆಯುವ ದಿವಸಕ್ಕೆ ತಿಂಗಳಿಗೆ ಬಾಕೀ ಇರುವ ಅಸಲು ಮೊಬಲಗಿನ ಮೇಲೆ ಸೇಕಡಾ ಒಂದೂವರೆ ರೂಪಾಯಿನಂತೆ ಬಡ್ಡಿಯನ್ನು ಸೇರಿಸಿ ಕೊಡಲುಳ್ಳವನೆಂಬುದಾಗಿ ಇದು ನಾನು ಮನಃಪೂರ್ವಕವಾಗಿ ಬರೆದು*ಕೊಟ್ಟ ಪತ್ರ.

(ರುಜು) ರಂಗಣ್ಣ.

ಇದಕ್ಕೆ ಸಾಕ್ಷಿಗಳು :—

(ರುಜು) ತಿಮ್ಮಣ್ಣ—ರಾಮಪುರದಲ್ಲಿರುವ ಲಿಂಗಪ್ಪನ ಮಗ.

(ರುಜು) ಬೊಮ್ಮಣ್ಣ—ರಂಗಾಪುರದಲ್ಲಿರುವ ಅಪ್ಪೂಗೌಡನ ಮಗ.

ಇದಕ್ಕೆ ಹಾಕತಕ್ಕ ಸ್ಟಾಂಪಿನ ಬೆಲೆ :—

ಅಸಲು ಸಾಲ ೧೦ ರೂ. ಮೀರದಿದ್ದರೆ, ಸ್ಟಾಂಪಿನ ಬೆಲೆ ೨ ಆ.; ೧೦ ರೂಪಾಯಿನ ಮೇಲೆ ೫೦ ರೂ. ಮೀರದಿದ್ದರೆ ೪ ಆ.; ಅದರ ಮೇಲೆ ೧೦೦ ರೂ. ಮೀರದಿದ್ದರೆ ೮ ಆ.; ಅದರ ಮೇಲಿದ್ದರೆ, ೧,೦೦೦ ರೂಪಾಯಿನವರಿಗೂ, ಪ್ರತಿ ೧೦೦ ರೂಪಾಯಿಗೆ ೮ ಆಣೆಯನ್ನೂ ಮೇಲೆ ವಿಷಮವಾಗಿ ಉಳಿಯುವುದಕ್ಕೆ ೮ ಆಣೆಯನ್ನೂ ಸೇರಿಸಿಕೊಳ್ಳತಕ್ಕದ್ದು. ೧,೦೦೦ ರೂಪಾಯಿನ ಮೇಲಿರುವ ಮೊಬಲಗಿಗೆ ಪ್ರತಿ ೫೦೦ ರೂಪಾಯಿಗೂ ೨ ರೂ. ೮ ಆಣೆಯನ್ನು ಹಾಕಿ, ಮೇಲೆ ಉಳಿಯುವ ವಿಷಮಕ್ಕೆ ೨ ರೂ. ೮ ಆಣೆಯನ್ನು ಸೇರಿಸಬೇಕು.

ಮೊಬಲಗು, ವಾಯಿದೆ, ಬಡ್ಡಿಯ ದರ—ಇವುಗಳನ್ನು ಹೇಳುವ ಮುಖ್ಯವಾದ ಮಾತುಗಳಿಗೆ ಕೆಳಗೆ ಗೆರೆಯ ಗುರ್ತನ್ನು ಹಾಕಿ ಬರೆದರೆ, ಪತ್ರದ ಮುಖ್ಯಾಂಶಗಳನ್ನು ಜಾಗ್ರತೆಯಾಗಿ ತಿಳಿದುಕೊಳ್ಳಲು ಅನುಕೂಲವಾಗುವುದು.

---

* ಮತ್ತೊಬ್ಬರ ಕೈಲಿ ಬರಿಸಿದರೆ, ಸಾಕ್ಷಿಗಳ ರುಜುಗಳ ಕೆಳಗೆ ಇಂತಾತನ ಬರಹ ಎಂದು ಬರಿಸಬೇಕು.

## ೨.

## ಪ್ರಾಮಿಸರಿ ನೋಟು.

ರಂಗಾಪುರ,
೧೮೯೦ನೇ ಇಸವಿ ಮೇ ತಾ|| ೮.

ಕೇಳಿದ ಕೂಡಲೇ ರಾಮಪುರದಲ್ಲಿರುವ ಶಾಮಣ್ಣನವರ ಮಕ್ಕಳು ರಾಮಣ್ಣನವರಿಗಾಗಲೀ ಅವರ ಅನುಜ್ಞೆಯ ಪ್ರಕಾರ ಇತರರಿಗಾಗಲೀ ಕೆಳಗೆ ರುಜೂ ಮಾಡಿರುವ ನಾನು ಪಡೆದಿರುವ ಪ್ರತಿಫಲಕ್ಕಾಗಿ ಇನ್ನೂರು ರೂಪಾಯಿಯನ್ನು ಕೊಡಲು ಒಪ್ಪಿದೇನೆ.

(ರುಜು) (ಲಿಂಗಣ್ಣನ ಮಗನಾದ) ರಂಗಣ್ಣ.

ರೂ. ೨೦೦—೦—೦ ಮಾತ್ರ.

ಪ್ರಾಮಿಸರೀ ನೋಟಿಗೆ ಸಾಕ್ಷಿಗಳನ್ನು ಹಾಕಿಸತಕ್ಕ ವಾಡಿಕೆ ಇಲ್ಲ. ವಾಯಿದೆ ಹಾಕಬೇಕಾದರೆ, ಮೇಲಿನ ನಮೂನೆಯಲ್ಲಿ "ಕೇಳಿದ ಕೂಡಲೇ" ಎಂದಿರುವ ಸ್ಥಳದಲ್ಲಿ "ಈ ತಾರೀಖಿನಿಂದ ೯೦ ದಿವಸದ ವಾಯಿದೆ ಕಳೆದಕೂಡಲೇ" ಎಂದು ಬರೆಯಬೇಕು.

ಇಂಗ್ಲೀಷ್ ಪಂಚಾಂಗದ ಪ್ರಕಾರ ಕೆಲವು ತಿಂಗಳಲ್ಲಿ ೩೧ ದಿನವೂ ಕೆಲವು ತಿಂಗಳಲ್ಲಿ ೩೦ ದಿನವೂ ಪೆಬ್ರುವರಿಯಲ್ಲಿ ೨೮—೨೯ ದಿನವೂ ಇರುವುದರಿಂದ ತೊಂಬತ್ತು ದಿನವೆಂದರೆ ಮೂರು ತಿಂಗಳೆಂದಾಗುವುದಿಲ್ಲ. ತಿಂಗಳು ಹಾಕಬೇಕೆಂದಾಗ ಹಾಗೆಯೇ ಬರೆಯಬೇಕು.

## ೩.

## ಹುಂಡಿ.

ರಾಮಪುರ,
೧೫ನೇ ಜೂನ್, ೧೮೯೦.

ಚನ್ನಪಟ್ಟಣದಲ್ಲಿರುವ ಮ|| ಜವಳಿ ಅಂಗಡೀ ಚನ್ನಶೆಟ್ಟರಿಗೆ ರಾಮಪುರದಲ್ಲಿರುವ ರಾಮಶೆಟ್ಟಿಯು ಬರೆಸಿಕಳುಹಿಸಿದ ಹುಂಡಿಯ ವಿವ

ರವೇನೆಂದರೆ: ಈ ಹುಂಡಿಯನ್ನು ನಿಮ್ಮಲ್ಲಿ ಮ॥ ರಂಗಣ್ಣನವರಾಗಲಿ, ಅವರಿಂದ ಅನುಜ್ಞೆಹೊಂದಿದವರಾಗಲಿ, ತಂದು ಹಾಜರ್ಪಡಿಸಿದ ಕೂಡಲೇ (ಅಥವಾ, ತಂದು ನಿಮಗೆ ಮೊಖಾಬಿಲೆ ಮಾಡಿಕೊಟ್ಟ ಮೇಲೆ ೩೦ ದಿವಸದ ವಾಯಿದೆಯಾದ ಕೂಡಲೇ) ಅವರಿಗೆ ಮುನ್ನೂರು ರೂಪಾಯನ್ನು ಸಲ್ಲಿಸಬೇಕು.

(ರುಜು) ರಾಮಶೆಟ್ಟಿ.

ರೂ. ೩೦೦—೦—೦ ಮಾತ್ರ.

೪.

ರಶೀತಿ.

ರಂಗಾಪುರ,

೧೫ನೇ ಜೂನ್, ೧೮೯೦.

ಈ ದಿವಸ ನಾನು ರಂಗಾಪುರದ ರಂಗಣ್ಣನವರಿಗೆ ಖರೀದಿಗೆ ಕೊಟ್ಟ ಒಂದು ಜೊತೆ ಎತ್ತಿನ ಕ್ರಯದ ಹಣ ಇನ್ನೂರು ರೂಪಾಯನ್ನು ಅವರಿಂದ ಪಡೆದುಕೊಂಡು, ಈ ರಸೀತಿಯನ್ನು ಬರೆದುಕೊಟ್ಟದೇನೆ

(ರುಜು) ರಾಮಣ್ಣ.

ರೂ. ೨೦೦—೦—೦ ಮಾತ್ರ.

ಮೇಲಿನ ಪತ್ರಗಳಿಗೆ ಹಾಕತಕ್ಕ ಸ್ಟ್ಯಾಂಪುಗಳ ವಿವರ.—

| | ರೂ. | ಆ. |
|---|---|---|
| ರಸೀತಿಯನ್ನು ಕೊಡತಕ್ಕ ಮೊಬಲಗು ಅಥವಾ ಇತರ ಸ್ವತ್ತು ೨೦ ರೂಪಾಯಿನ ಬೆಲೆಗೆ ಮೀರಿರುವ ಪಕ್ಷದಲ್ಲಿ ಸ್ಟ್ಯಾಂಪು ಹಾಕಬೇಕಾದದ್ದು........................................ | ೦ | ೧ |

೨೦ ರೂಪಾಯಿ ಅಥವಾ ಕಮ್ಮಿಯಾದ ಮೊಬಲಗಿಗೆ ರಸೀತಿಯನ್ನು ಕೊಟ್ಟರೆ ಅದಕ್ಕೆ ಸ್ಟ್ಯಾಂಪು ಹಾಕುವುದು ಆವಶ್ಯಕವಲ್ಲ. ಸ್ಟ್ಯಾಂಪುಕಾಗದದಲ್ಲಿ ಬರೆದಿರುವ ಪತ್ರದ ಹಣ ಕೊಟ್ಟುದಕ್ಕೆ ಆ ಪತ್ರದ ಮೇಲೆಯೇ ರಸೀತಿಯನ್ನು ಬರೆದುಕೊಟ್ಟರೆ ಅದಕ್ಕೂ ಸ್ಟ್ಯಾಂಪು ಬೇಕಾಗಿಲ್ಲ.

ವಾಯಿದೆ ಇಲ್ಲದ ಪ್ರಾಮಿಸರೀ ನೋಟು, ದರ್ಶನ ಹುಂಡಿ, ಚೆಕ್ಕು ಇವಕ್ಕೆ ಅಸಲುಮೊಬಲಗು ಎಷ್ಟಾದರೂ ಒಂದಾಣೆಯ ಸ್ಟಾಂಪನ್ನು ಹಾಕಬೇಕು.

ಹುಂಡಿ ಅಥವಾ ಪ್ರಾಮಿಸರೀ ನೋಟುಗಳಿಗೆ ವಾಯಿದೆಯು ಒಂದುವರ್ಷಕ್ಕಿಂತ ಹೆಚ್ಚಾಗಿ ಹಾಕಿದ್ದರೆ ಅವಕ್ಕೆ ಮೇಲೆ ಸಾಧಾರಣವಾದ ಪತ್ರಗಳಿಗೆ ಹೇಳಿರುವ ದರಗಳ ಮೇರೆಗೆ ಸ್ಟಾಂಪನ್ನು ಹಾಕಬೇಕು. ವರ್ಷದ ವಾಯಿದೆಗೆ ಮೀರದೆ ಇದ್ದರೆ, ಕೆಳಗೆ ತೋರಿಸಿರುವ ದರಗಳ ಪ್ರಕಾರ ಸ್ಟಾಂಪು ಹಾಕಲ್ಪಡಬೇಕು.

| | | | | ರೂ. | ಆ. |
|---|---|---|---|---|---|
| ಅಸಲು ಮೊಬಲಗು | ೨೦೦ | ರೂಪಾಯಿನವರೆಗೆ | .... | ೦ | ೨ |
| ಅದರ ಮೇಲೆ | ೪೦೦ | ,, | .... | ೦ | ೪ |
| ,, | ೬೦೦ | ,, | .... | ೦ | ೬ |
| ,, | ೧,೦೦೦ | ,, | .... | ೦ | ೧೦ |
| ,, | ೧,೨೦೦ | ,, | .... | ೦ | ೧೨ |
| ,, | ೧,೬೦೦ | ,, | .... | ೧ | ೦ |
| ,, | ೨,೫೦೦ | ,, | .... | ೧ | ೮ |

ಅದರ ಮೇಲೆ ೧೦,೦೦೦ ರೂಪಾಯಿನ ವರೆಗೂ ಪ್ರತಿ ೨,೫೦೦ ರೂಪಾಯಿಗೆ ೧ ರೂ. ೮ ಆ. ವಿಷಮವಾಗಿ ಉಳಿಯುವ ಚಿಲ್ಲರೆ ೧ ರೂಪಾಯಿ ೮ ಆಣೆ ಹಾಕಲ್ಪಡಬೇಕು. ೧೦,೦೦೦ ರೂಪಾಯಿನ ಮೇಲೆ ೩೦,೦೦೦ ರೂಪಾಯಿನ ವರೆಗೂ ಪ್ರತಿ ೫,೦೦೦ ರೂಪಾಯಿಗೆ ೩ ರೂಪಾಯಿನ ಸ್ಟಾಂಪಿನಂತೆಯೂ, ೩೦,೦೦೦ ರೂಪಾಯಿನ ಮೇಲೆ ಪ್ರತಿ ೧೦,೦೦೦ಕ್ಕೆ ೬ ರೂಪಾಯಿನಂತೆಯೂ ಹೆಚ್ಚಿಸಿಕೊಳ್ಳತಕ್ಕದ್ದು.

೫.

## ಸ್ಥಿರಸ್ವತ್ತಿಗೆ ಸಂಬಂಧಪಡುವ ಪತ್ರ.

ಸನ್ ಒಂದು ಸಾವಿರದ ಎಂಟುನೂರ ತೊಂಬತ್ತನೇ ಇಸವೀ ಮಾರ್ಚಿ ತಾರೀಖು ಇಪ್ಪತ್ತೈದಕ್ಕೆ ಸರಿಯಾದ ವಿಕೃತಿನಾಮಸಂವತ್ಸರದ ಚೈತ್ರ ಬಹುಳ ಪಾಡ್ಯಮಿ ಭಾನುವಾರದಲ್ಲಿ ರಾಮಪುರದಲ್ಲಿರುವ ಶಾಮಣ್ಣನವರ ಮಕ್ಕಳು ಮೂವತ್ತೆಂಟು ವರ್ಷ ವಯಸ್ಸುಳ್ಳ ರಾಮಣ್ಣನವರಿಗೆ ರಂಗಾಪುರದಲ್ಲಿರುವ ಲಿಂಗಣ್ಣನವರ ಮಗ ಮೂವತ್ತು ವರ್ಷದ ವಯಸ್ಸಿನ ರಂಗಣ್ಣನು ಬರೆದುಕೊಟ್ಟ.........................

ಪ್ರತಿಪೊಂದು ಪತ್ರದಲ್ಲಿಯೂ ಆದಿಭಾಗವನ್ನು ಹೀಗೆ ಬರೆದರೆ ಸಾಕಾಗಿರುವುದು. ಸ್ಥಿರಸ್ವತ್ತಿನ ವಿಷಯವಾದ ಪತ್ರಗಳು ಸಾಧಾರಣವಾಗಿ ರಿಜಿಸ್ಟರ್ಮಾಡಿಸತಕ್ಕವಾಗಿಯೇ ಇರುವುವು. ರಿಜಿಸ್ಟರ್ಮಾಡಿಸತಕ್ಕ ಪತ್ರಗಳಲ್ಲೆಲ್ಲಾ ತಾರೀಖು ದಿನ ಮುಂತಾದುವು ಯಾವುದಕ್ಕೂ ಅಂಕಿಯನ್ನು ಹಾಕಕೂಡದು. ಮೇಲೆ ತೋರಿಸಿರುವಂತೆ ಎಲ್ಲಾ ಅಕ್ಷರಗಳಲ್ಲಿಯೇ ಇರಬೇಕು. ಮೇಲೆ ಹೇಳಿರುವಷ್ಟನ್ನು ಬರೆದು, ಮುಂದಕ್ಕೆ ಇಂತಾ ಪತ್ರವೆಂದು ಹೇಳಿ, ಅದರ ಷರತ್ತುಗಳನ್ನು ಬರೆಯಬೇಕು.

೬.

## ಆಧಾರದ ಪತ್ರ.

...............ಬರೆದುಕೊಟ್ಟ ಆಧಾರದ ಪತ್ರದ ಕ್ರಮವೆಂತೆಂದರೆ :— ಈ ದಿವಸ ನನ್ನ ಜರೂರು ನಿಮಿತ್ತವಾಗಿ ನಿಮ್ಮಲ್ಲಿ ಸಾಲವಾಗಿ ಮುನ್ನೂರು (೩೦೦) ರೂಪಾಯನ್ನು ತೆಗೆದುಕೊಂಡಿದೇನೆ. ಈ ಮೊಬಲಗನ್ನು ಈ ತಾರೀಖು ಲಾಗಾಯಿತು ಎರಡು ವರ್ಷಗಳೊಳಗಾಗಿ ಸೇಕಡಾ ಒಂದು ರೂಪಾಯಿನ ಮೇರೆಗೆ ಬಡ್ಡಿಯ ಸಹಿತವಾಗಿ ತೀರಿಸಲುಳ್ಳವನು. ಈ ಅಸಲು ಬಡ್ಡಿಗಾಗಿ ಕೆಳಗೆ ವಿವರಿಸಿರುವ ಸ್ವತ್ತನ್ನು ನಿಮಗೆ ಪೂರ್ವಾಧಿಯಾವುದೂ ಇಲ್ಲದೆ, ಮೊದಲನೇ ಆಧಾರ ಮಾಡಿಕೊಟ್ಟಿದೇನೆ. ಮೇಲೆ

ಕಂಡ ವಾಯಿದೆಯೊಳಗಾಗಿ ನಾನು ಅಸಲು ಬಡ್ಡಿ ಸಹಾ ತೀರಿಸದಿದ್ದರೆ ಇದೇ ಸ್ವತ್ತನ್ನು ನೀವು ಬಿಡಿಸಿಕೊಂಡು, ಭೋಗ್ಯವಾಗಿ ಅನುಭವಿಸಿ ಕೊಳ್ಳಬಹುದು. ಅಥವಾ, ನಿಮ್ಮ ಹಣವನ್ನು ವಾಯಿದೆ ಕಳೆದ ಮೇಲೆ ನಿಮ್ಮ ಇಷ್ಟಬಂದಂತೆ ಸ್ವತ್ತಿನಿಂದಾಗಲಿ, ನನ್ನ ಇತರ ಆಸ್ತಿಯಿಂದಾ ಗಲೀ ಬರಮಾಡಿಕೊಳ್ಳಬಹುದು.

ಸ್ವತ್ತಿನ ವಿವರ.—(ಕಡೂರು) ರೆಜಿಸ್ಟ್ರೇಷನ್ ಡಿಸ್ಟ್ರಿಕ್ಟ್ ತರೀಕೆರೆ ಸಬ್ ಡಿಸ್ಟ್ರಿಕ್ಟಿಗೆ ಸೇರಿದ ರಂಗಾಪುರದಲ್ಲಿರುವ ರೆವಿನ್ಯೂ ಸರ್ವೆ ಲೆಕ್ಕದ ಒಂಬತ್ತನೆಯ ನಂಬರುಳ್ಳ ನನ್ನ ಹೆಸರಿನಲ್ಲಿ ದಾಖಲಾಗಿರುವ ತೋಟ. ಇದರ ವಿಸ್ತೀರ್ಣ ಎಂಟೆಕರೆ, ಕಂದಾಯ ಐವತ್ತು ರೂಪಾಯಿ, ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ ರಾಮಯ್ಯನ ಗದ್ದೆ, ದಕ್ಷಿಣಕ್ಕೆ ಲಿಂಗನ ಹೊಲ, ಪಶ್ಚಿಮಕ್ಕೆ ಕೆರೆಯ ಏರಿ, ಉತ್ತರಕ್ಕೆ ಗ್ರಾಮಕ್ಕೆ ಹೋಗುವ ಬಂಡಿಯ ದಾರಿ.

ಈ ಆಧಾರದ ಪತ್ರವನ್ನು ಮನಃಪೂರ್ವಕವಾಗಿ ಬರೆದುಕೊಟ್ಟು ಇದರ ಕೆಳಗೆ ರುಜೂ ಮಾಡಿದೇನೆ.

(ರುಜು) ರಂಗಣ್ಣ.

ಇದಕ್ಕೆ ಸಾಕ್ಷಿಗಳು.

೧. (ರುಜು)................

೨. (ರುಜು)........ .......

ಇದಕ್ಕೆ ಬರೀಸಾಲದ ಪತ್ರಕ್ಕೆ ಹಾಕತಕ್ಕಷ್ಟು ಸ್ಟಾಂಪನ್ನು ಹಾಕಬೇಕು.

೭.

## ಭೋಗ್ಯಪತ್ರ.

...............ಬರೆದು ಕೊಟ್ಟ ಭೋಗ್ಯಪತ್ರದ ಕ್ರಮವೆಂತೆಂದರೆ, ನಿಮ್ಮಿಂದ ನಾನು ಈ ದಿವಸ ಎರಡು ಸಾವಿರ ರೂಪಾಯಿಗಳನ್ನು ಸಾಲ ವಾಗಿ ತೆಗೆದುಕೊಂಡು, ಅದಕ್ಕೋಸ್ಕರ ಕೆಳಗಿನ ಪಟ್ಟಿಯಲ್ಲಿ ವಿವರಿಸಿ ರುವ ನನ್ನದಾಗಿಯೂ ನನ್ನ ಸ್ವಂತ ಅನುಭವದಲ್ಲಿಯೂ ಇರುವ ಸ್ಥಿರಸ್ವತ್ತನ್ನು ನಿಮಗೆ ಶುದ್ಧ ಭೋಗ್ಯವಾಗಿ ಒಪ್ಪಿಸಿದೇನೆ. ಇದನ್ನು ಇದುವರೆಗೂ ರೂಢಿಸುತ್ತಿದ್ದ ಮಾಮೂಲಿನ ಪ್ರಕಾರ ನೀವು ರೂಢಿಸಿ ಕೊಂಡು ಬರತಕ್ಕದ್ದು. ಬರುವ ಹುಟ್ಟುವಳಿಯಲ್ಲಿ ಸರ್ಕಾರಕ್ಕೆ ಸಲ್ಲ ಬೇಕಾದ ಕಂದಾಯ ಐವತ್ತು ರೂಪಾಯನ್ನು ನೀವೇ ಕೊಟ್ಟು ಕೊಂಡು, ಉಳಿದುದನ್ನು ನಿಮ್ಮ ಬಡ್ಡಿಗೂ ಅದು ಕಳದು ನಿಲ್ಲುವುದ ನ್ನು ಅಸಲಿಗೂ ಉತ್ತಾರ ಕಟ್ಟಿಕೊಳ್ಳಬೇಕು. ಹಣಕ್ಕೆ ವರ್ಷವೊಂ ದಕ್ಕೆ ಶೇಕಡಾ ಆರು ರೂಪಾಯಿನಂತೆ ಬಡ್ಡೀ ಹಾಕಿಕೊಳ್ಳತಕ್ಕದ್ದು. ಈ ದಿವಸದಿಂದ ಐದು ವರ್ಷ ಕಳೆದನಂತರ ನಾನು ಅಸಲಿಗೆ ಯಾವಾಗ ಒಂದುನೂರು ರೂಪಾಯಿಗೆ ಕಡಮೆ ಇಲ್ಲದೆ ಮೊಬಲಗನ್ನು ಸಲ್ಲಿಸಿದರೆ ಅದನ್ನು ವಸೂಲು ಕಟ್ಟಿಕೊಳ್ಳಬೇಕು. ಹೀಗೆ ಅಸಲು ಬಡ್ಡೀ ಪೂರಾ ತೀರಿದ ಮೇಲೆ ನನ್ನ ಸ್ವತ್ತನ್ನು ನೀವು ನನಗೆ ಬಿಟ್ಟುಕೊಡಬೇಕು.

ಸ್ವತ್ತಿನ ವಿವರ..........................................................

ಈ ಭೋಗ್ಯಪತ್ರವನ್ನು ಮನಃಪೂರ್ವಕವಾಗಿ ಬರೆದು ಕೊಟ್ಟು ಇದರ ಕೆಳಗೆ ರುಜು ಮಾಡಿದೇನೆ.

(ರುಜು) ರಂಗಣ್ಣ.

ಇದಕ್ಕೆ ಸಾಕ್ಷಿಗಳು.

೧. (ರುಜು)

೨. (ರುಜು)

ಇದಕ್ಕೆ ಕ್ರಯಪತ್ರಕ್ಕೆ ಹಾಕುವಂತೆ ಮೊಬಲಗಿಗೆ ತಕ್ಕ ಸ್ಟಾಂಪನ್ನು ಹಾಕ ಬೇಕು,

೮.

## ಗೇಣೀಕರಾರು—ರೈತ ಕೊಡತಕ್ಕದ್ದು.

............ಬರೆದು ಕೊಟ್ಟ ಜವಿರ್ಾ ಗುತ್ತಿಗೆ ಕರಾರಿನ ಕ್ರಮವೆಂತೆಂದರೆ :—ನಾನು ಕೆಳಗೆ ನಮೂದಿಸಿರುವ ನಿಮ್ಮ ಸ್ವಂತ ಜಮೀನನ್ನು ನಿಮ್ಮಿಂದ ಸಾಗುವಳಿಗೆ ತೆಗೆದುಕೊಂಡಿರುವುದರಿಂದ ಅದನ್ನು ಈ ಲಾಗಾಯಿತು ಹತ್ತು ವರ್ಷದವರೆಗೂ ಕ್ರಮವಾಗಿ ಸಾಗುವಳಿ ಮಾಡಿಕೊಂಡು, ನಿಮಗೆ ಗುತ್ತಿಗೆಯಾಗಿ ವರ್ಷವೊಂದಕ್ಕೆ ಮಾಘಬಹುಳ ಅಮಾವಾಸ್ಯೆಯ ತರುವಾಯ ಫಾಲ್ಗುಣ ಬಹುಳ ಅಮಾವಾಸ್ಯೆಯೊಳಗಾಗಿ ಹತ್ತು ಸೇರಿನ ಕೊಳಗದಲ್ಲಿ ಐವತ್ತು ಖಂಡಗ ಸಣ್ಣಬತ್ತವನ್ನೂ ಹತ್ತು ಬಂಡಿ ನೆಲ್ಲು ಹುಲ್ಲನ್ನೂ ನಿಮ್ಮ ಮನೆಗೆ ನನ್ನ ಸ್ವಂತ ಖರ್ಚಿನಿಂದ ತಂದು ಒಪ್ಪಿಸತಕ್ಕವನು. ಇದಕ್ಕೆ ಕಂದಾಯವನ್ನು ನೀವೇ ಕೊಡತಕ್ಕದ್ದು ಯಾವ ವರ್ಷವಾದರೂ ಫಾಲ್ಗುಣ ಬಹುಳ ಅಮಾವಾಸ್ಯೆಯೊಳಗಾಗಿ ನಾನು ಗುತ್ತಿಗೆಯ ಬತ್ತವನ್ನಾಗಲಿ ಹುಲ್ಲನ್ನಾಗಲಿ ಕೊಡದಿದ್ದರೆ ನೀವು ಮೂರು ತಿಂಗಳು ವಾಯಿದೆಯೊಡನೆ ನೋಟೀಸ್ ಕೊಟ್ಟು, ಆ ವಾಯಿದೆಗೂ ತಪ್ಪಿದರೆ ನನ್ನಿಂದ ಜಮೀನನ್ನು ಬಿಡಿಸಿಕೊಳ್ಳಬಹುದು. ಇದಲ್ಲದೆ, ನಾನು ಈ ಜಮೀನಿನಲ್ಲಿ ಪೂರಾ ಆಗಲಿ, ಸ್ವಲ್ಪ ಭಾಗಕ್ಕೆ ಆಗಲಿ ಕಬ್ಬನ್ನು ಹಾಕಿದರೆ, ನೀವು ಮೇಲೆ ಹೇಳಿದ ಗುತ್ತಿಗೆಯ ಬತ್ತ ಮತ್ತು ಹುಲ್ಲನ್ನೇ ಆಗಲಿ ಅಥವಾ ನಿಮ್ಮ ಇಷ್ಟಬಂದರೆ ಕಬ್ಬಿನ ಫಸಲಿನಲ್ಲಿ ಮೂರರಲ್ಲೊಂದು ಭಾಗ ಫಸಲನ್ನೇ ಆಗಲಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು.

ಜಮೀನಿನ ವಿವರ ;—............ರೆಜಿಸ್ಟ್ರೇಷರ್ ಡಿಸ್ಟ್ರಿಕ್ಟ........

ಮೇಲ್ಕಂಡ ಷರತ್ತುಗಳಿಗೆ ಒಪ್ಪಿ ಜಮೀನನ್ನು ನನ್ನ ಸ್ವಾಧೀನಕ್ಕೆ ತೆಗೆದುಕೊಂಡು, ಈ ಕರಾರನ್ನು ನನ್ನ ಮನಃಪೂರ್ವಕವಾಗಿ ಬರೆದು ಕೊಟ್ಟಿದೇನೆ.

(ರುಜು)............

ಸಾಕ್ಷಿಗಳು.

೧. (ರುಜು)............

೨. (ರುಜು)............

೯.

## ಗೇಣೀ ಕರಾರು—ಜಮೀನ್ದಾರ ಕೊಡತಕ್ಕದ್ದು.

.........................................................ಬರೆದುಕೊಟ್ಟ ಜಮೀನಿನ ಗುತ್ತಿಗೆಯ ಪಟ್ಟೆಯ ವಿವರವೆಂತೆಂದರೆ:—ಇದರ ಕೆಳಗೆ ವಿವರಿಸಿರುವ ನನ್ನ ಸ್ವಂತ ಜಮೀನನ್ನು ನಿಮಗೆ ಈ ಸಾಲ್ ಲಾಗಾಯಿತು ಹತ್ತು ವರ್ಷದವರೆಗೂ ಅಂದರೆ...........ವರ್ಷದ ಮಾಘ ಬಹುಳ ಅಮಾವಾಸ್ಯೆಯವರೆಗೂ ಗುತ್ತಿಗೆಯು ಸಾಗುವಳಿಗೆ ಕೊಟ್ಟು, ಈ ದಿವಸ ಜಮೀನನ್ನು ನಿಮ್ಮ ಸುಫರ್ದಿಗೆ ಕೊಟ್ಟದೇನೆ. ಇದಕ್ಕೆ ಗುತ್ತಿಗೆ ವರ್ಷವೊಂದಕ್ಕೆ ಹತ್ತು ಸೇರಿನ ಕೊಳಗದಲ್ಲಿ ಐವತ್ತು ಖಂಡಗ ಸಣ್ಣ ಬತ್ತವನ್ನೂ ಹತ್ತು ಬಂಡಿ ನೆಲ್ಲು ಹುಲ್ಲನ್ನೂ ನಿಮ್ಮ ಸ್ವಂತ ಖರ್ಚಿಟ್ಟುಕೊಂಡು, ನಮ್ಮ ಮನೆಗೆ ತಂದು, ಮಾಘ ಬಹುಳ ಅಮಾವಾಸ್ಯೆಯಿಂದ ಫಾಲ್ಗುಣ ಬಹುಳ ಅಮಾವಾಸ್ಯೆಯೊಳಗಾಗಿ ಒಪ್ಪಿಸಬೇಕು. ಇದಲ್ಲದೆ, ಈ ಜಮೀನಿನಲ್ಲಿ ಪೂರಾ ಜಮೀನಿನಲ್ಲಾಗಲಿ, ಸ್ವಲ್ಪ ಭಾಗಕ್ಕೆ ಆಗಲಿ ಕಬ್ಬು ಬಿತ್ತಿ ಬೆಳದರೆ, ನಮ್ಮ ಇಷ್ಟಾನುಸಾರವಾಗಿ ಮೇಲ್ಕಂಡ ಗುತ್ತಿಗೆಯ ಬತ್ತ ಮತ್ತು ಹುಲ್ಲನ್ನು ಕೊಡತಕ್ಕದ್ದು. ಇದಲ್ಲದೆ ಕಬ್ಬು ಬೆಳದ ಪ್ರದೇಶಕ್ಕೆ ತಕ್ಕ ಬತ್ತದ ಗುತ್ತಿಗೆಯನ್ನು ಕಡಿಮೆಮಾಡಿಕೊಂಡು, ಮೂರರಲ್ಲಿ ಒಂದು ಭಾಗದ ಕಬ್ಬಿನ ಫಸಲಿನ ವಾರವನ್ನು ಕೊಡಬೇಕೆಂದು ನಾನು ಅಪೇಕ್ಷಿಸಿದರೆ ಅದೇ ಪ್ರಕಾರ ಕೊಡಬೇಕು. ಯಾವ ಸಂವತ್ಸರದಲ್ಲಿಯಾದರೂ ಫಾಲ್ಗುಣ ಬಹುಳ ಅಮಾವಾಸ್ಯೆಯೊಳಗಾಗಿ ನೀವು ಗುತ್ತಿಗೆಯನ್ನು ಸಲ್ಲಿಸದಿದ್ದರೆ ನಾನು ಬರವಣಿಗೆಯ ಮೂಲಕ ನಿಮಗೆ ನೋಟೀಸ ಕೊಡಬೇಕು. ಸದರೀ ನೋಟೀಸ ನಿಮಗೆ ತಲಪಿದ ಮೂರು ತಿಂಗಳೊಳಗಾಗಿ ಗುತ್ತಿಗೆಯನ್ನು ಬೇಬಾಕಾಗಿ ಪಾವತಿಮಾಡದಿದ್ದರೆ ಮೂರು ತಿಂಗಳು ಕಳದ ಕೂಡಲೇ ನಾನು ಅಪೇಕ್ಷಿಸಿದಾಗ ನೀವು ಜಮೀನನ್ನು ಬಿಟ್ಟುಕೊಡತಕ್ಕದ್ದು.

ಜಮೀನಿನ ವಿವರ...........................

ಮೇಲೆ ಕಂಡ ಷರತ್ತುಗಳೊಡನೆ ಈ ಜಮೀನನ್ನು ನಿಮ್ಮ ಸ್ವಾ

ಧೀನಕ್ಕೆ ಕೊಟ್ಟು, ಈ ಕರಾರನ್ನು ನನ್ನ ಮನಃಪೂರ್ವಕವಾಗಿ ಬರೆದು ಕೊಟ್ಟಿರುವೆನು.

(ರುಜು)..............

ಇದಕ್ಕೆ ಸಾಕ್ಷಿಗಳು.

೧......................

೨......................

## ಗೇಣೀಕರಾರಿಗೆ ಸ್ಟಾಂಪುಗಳು.

ವಾಯಿದೆಯು ೩ ವರ್ಷದೊಳಗಾಗಿ ಇದ್ದರೆ, ಒಂದು ವರ್ಷಕ್ಕೆ ಕೊಡಬೇಕಾದ ಗುತ್ತಿಗೆಯ ಬೆಲೆಗೆ ತಕ್ಕ ಮೊಬಲಗಿನ ಬರೀ ಸಾಲದ ಪತ್ರಕ್ಕೆ ಎಷ್ಟೋ ಅಷ್ಟು

೩ ವರ್ಷಕ್ಕೆ ಮೀರಿದ ವಾಯಿದೆ ಇದ್ದರೆ, ಒಂದು ವರ್ಷದ ಗುತ್ತಿಗೆಯ ಬೆಲೆಯ ಕ್ರಯಪತ್ರಕ್ಕೆ ತಕ್ಕಷ್ಟು ಸ್ಟಾಂಪು.

೧೦.

## ಕ್ರಯಪತ್ರ.

.............................................ಬರೆದುಕೊಟ್ಟ ಮನೆಯ ಕ್ರಯಪತ್ರದ ಕ್ರಮವೆಂತೆಂದರೆ;

ಈ...........ಡಿಸ್ಟ್ರಿಕ್ಟು...........ಸಬ್ ಡಿಸ್ಟ್ರಿಕ್ಟು.......ಗ್ರಾಮದ ...........ಬೀದಿಯಲ್ಲಿ..... ......ನೇ ನಂಬರು ಮನೆಗೆ ಚಕ್ಕುಬಂದಿ ಪೂರ್ವಕ್ಕೆ................................................................................. ಈ ಮಧ್ಯೆ ಇರುವ ಹಲಿಗೆ ಸೇರ್ವೆಯಾಗಿರುವ ಮಹಡಿಯ ಕಟ್ಟಡದ ಪೂರ್ವಪಶ್ಚಿಮ........ಗಜ, ದಕ್ಷಿಣೋತ್ತರ........ಗಜ; ಇದಕ್ಕೆ ಸೇರಿದ ಹೆಂಚಿನ ಮನೆ........ಅಂಕಣ, ಇದರ ಅಂಗಳ ಹಿತ್ತಲು ಸಹಿತ ಪೂರಾ ನಿವೇಶನದ ಒಟ್ಟು ಅಳತೆ ಪೂರ್ವಪಶ್ಚಿಮ........ಗಜ, ದಕ್ಷಿಣೋತ್ತರ

.......ಗಜ ಉಳ್ಳ ಈ ನನ್ನ ಸ್ವಯಾರ್ಜಿತವಾದ ಮನೆಯನ್ನು ತಮ್ಮಿಂದ ನಾಲ್ಕುಸಾವಿರ ರೂಪಾಯಿ ಪಡೆದುಕೊಂಡು, ಸದರೀ ಮೊಬಲಗಿಗೆ ಕ್ರಯಕ್ಕೆ ಕೊಟ್ಟು, ಈ ದಿವಸ ನಿಮ್ಮ ಸ್ವಾಧೀನಕ್ಕೆ ಕೊಟ್ಟಿದೇನೆ. ಸದರೀ ಸ್ವತ್ತಿನ ಮೇಲೆ ಇಲ್ಲಿಂದ ಮುಂದೆ ನನ್ನ ಬಾಧ್ಯತೆ ಏನೂ ಇರುವುದಿಲ್ಲ. ಇದುವರೆಗೆ ನಾನು ಯಾರಿಗೂ ಈ ಸ್ವತ್ತಿನ ಮೇಲೆ ಆಧಾರ ಭೋಗ್ಯಾದಿಗಳನ್ನು ಮಾಡಿಕೊಟ್ಟಿಲ್ಲ. ಹಾಗೆ ನಾನೇ ಆಗಲೀ, ಅಥವಾ ನನ್ನ ಪೂರ್ವದ ವಾರಸ್ದಾರರೇ ಆಗಲೀ ನ್ಯಾಯಕ್ಕೆ ಸಲ್ಲುವ ಯಾವುದಾದರೂ ಪೂರ್ವಾಧಿಯನ್ನುಂಟುಮಾಡಿದ್ದರೆ ಅದನ್ನು ನಾನೇ ಪಿಮೋಚನೆ ಮಾಡಿಕೊಡಲು ಬದ್ಧನಾಗಿರುವೆನು. ಇನ್ನುಮೇಲೆ ಸದರೀ ಸ್ವತ್ತಿನ ನಿಧಿನಿಕ್ಷೇಪಾದಿ ಅಷ್ಟಭಾಗ್ಯಗಳಿಗೂ ಆಧಿಕ್ರಯಾದಿ ಚತುರ್ವ್ಯವಹಾರಗಳಿಗೂ ನೀವೇ ಬಾಧ್ಯರಾಗಿ, ನಿಮ್ಮ ಪುತ್ರಪೌತ್ರಾದಿ ವಂಶಪಾರಂಪರ್ಯವಾಗಿ ಅದನ್ನು ಅನುಭವಿಸಿಕೊಳ್ಳತಕ್ಕ ಹಕ್ಕುಳ್ಳವರೆಂದು ನನ್ನ ಮನಸ್ಸಂತೋಷದಿಂದ ಬರೆದುಕೊಟ್ಟ ಕ್ರಯಪತ್ರ ಸಹಿ.

(ರುಜು)................

ಸಾಕ್ಷಿಗಳು.

೧. ....................

೨. ................

## ಕ್ರಯಪತ್ರಕ್ಕೆ ಹಾಕತಕ್ಕ ಸ್ಟಾಂಪು.

ಸ್ವತ್ತನ್ನು ಮಾರುವ ಬೆಲೆಯು ೫೦ ರೂಪಾಯಿಗೆ ಮೀರದಿದ್ದರೆ ೮ ಆಣೆ; ಅದರ ಮೇಲೆ ೧೦೦ ರೂ ಮೀರದಿದ್ದರೆ, ೧ ರೂ.; ೧,೦೦೦ ರೂಪಾಯಿನವರೆಗೆ ಪ್ರತಿ ೧೦೦ ರೂಪಾಯಿಗೂ ೧ ರೂ.; ವಿಷವು ಉಳಿಯುವ ಚಿಲ್ಲರೆಗೆ ೧ ರೂ.; ಅದರ ಮೇಲೆ ಎಷ್ಟಾದರೂ ಪ್ರತಿ ೫೦೦ ರೂಪಾಯಿಗೆ ೫ ರೂ.; ಮೇಲೆ ಉಳಿಯುವ ಚಿಲ್ಲರೆಗೆ ೫ ರೂ.

೧೧.

## ನೌಕರಿಯ ಕರಾರು.

೧೮೯೩ ನೆಯ ಇಸವಿ ಜುಲೈ ೧೪ನೇ ತಾರೀಖಿನಲ್ಲಿ ಬೆಂಗಳೂರು ತಾಲ್ಲೂಕು ಬಸವಾಪುರದಲ್ಲಿರುವ ಬಸವೇಗೌಡರ ಮಕ್ಕಳು ಮರಿಬಸಪ್ಪನವರಿಗೆ ಸದರೀ ತಾಲ್ಲೂಕು ತಿಮ್ಮಾಪುರದಲ್ಲಿರುವ ಬೇಗ್ಡೆ ಜಾತಿಯ ಬೋಳನ ಮಗ ಮಾರನು ಬರೆದುಕೊಟ್ಟ ನೌಕರಿಯ ಕರಾರಿನ ಕ್ರಮವೆಂತೆಂದರೆ, ನಾನು ಈ ತಾರೀಖು ಲಾಗಾಯಿತು ಮೂರು ವರ್ಷಗಳವರೆಗೂ ನಿಮ್ಮ ಮನೆಯಲ್ಲಿ ದನ ಕಾಯುವುದು ಅಥವಾ ನೀವು ಹೇಳುವ ಜೇರಾಯಿತಿಗೆ ಸಂಬಂಧಪಡುವ ಇತರ ಕಾರ್ಯಗಳನ್ನು ಮಾಡಿಕೊಂಡಿರತಕ್ಕದ್ದು. ಇದಕ್ಕಾಗಿ ನಾನು ನಿಮ್ಮಿಂದ ಈ ದಿವಸ ಮುಂಗಡವಾಗಿ ೫೦ ರೂಪಾಯಿ ತೆಗೆದುಕೊಂಡಿದೇನೆ. ನಾನು ನಿಮ್ಮಲ್ಲಿ ಚಾಕರಿ ಇರುವವರೆಗೂ ಈ ಹಣಕ್ಕೆ ಬಡ್ಡಿ ಇಲ್ಲ. ಮತ್ತು ನನಗೆ ಸಂಬಳ ವರ್ಷಕ್ಕೆ ಇಪ್ಪತ್ತೈದು ರೂಪಾಯಿ, ಇನ್ನೂರು ಸೇರಿನ ನಾಲ್ಕು ಖಂಡಗ ರಾಗಿ, ಮೂರು ರೂಪಾಯಿನದೊಂದು ಕಂಬಳಿ ಕೊಡಬೇಕು. ತಿಂಗಳಿಗೆ ೨ ದಿನಕ್ಕೆ ಹೆಚ್ಚಾಗಿ ಉಳಿಕೆಯಾದರೆ ಅದಕ್ಕೆ ತಕ್ಕ ಸಂಬಳವನ್ನು ನೀವು ಕಡಿಮೆ ಮಾಡಿಕೊಳ್ಳಬಹುದು. ಖಾಹಿಲೆಯ ಸಬಬಿಲ್ಲದೆ ನಾನು ನಿಮ್ಮ ಕೆಲಸವನ್ನು ಬಿಟ್ಟುಬಿಟ್ಟಲ್ಲಿ, ನೀವು ಕೊಟ್ಟಿರುವ ಹಣಕ್ಕೆ ಬಿಟ್ಟಲಾಗಾಯಿತು ಸೇಕಡ ೧ ರೂಪಾಯಿನಂತೆ ಬಡ್ಡಿ ಸೇರಿಸಿ, ಕೇಳಿದ ಕೂಡಲೇ ಕೊಡಲುಳ್ಳವನು. ವಾಯಿದೆ ತೀರಿದ ಮೇಲೆ ಕೆಲಸವನ್ನು ಬಿಡುವಾಗ ನಿಮ್ಮ ಅಸಲು ಹಣ ನಿಮಗೆ ಪಾವತಿ ಮಾಡಲುಳ್ಳವನು. ನಿಮ್ಮ ಕೆಲಸವನ್ನು ನಾನು ಸರಿಯಾಗಿ ಮಾಡದೆ ಆಗಲೀ, ನಿಷ್ಕಾರಣವಾಗಿ ಬಿಡುವುದರಿಂದಲೇ ಆಗಲೀ ನಿಮಗೆ ನಷ್ಟ ಉಂಟಾದರೆ ಅದನ್ನು ನಾನೇ ಕಟ್ಟಿಕೊಡಲುಳ್ಳವನೆಂದು ಒಪ್ಪಿ ಬರೆದುಕೊಟ್ಟ ಕರಾರು ಸಹಿ.

+ ಈ ಗುರ್ತು ಮಾರ ಹಾಕಿದ್ದಕ್ಕೆ ಶಾನುಬೋಗ ರಾಮಯ್ಯನ ಬರಹ.

ಸಾಕ್ಷಿಗಳು.

........................ ........................

ಇದು ಶಾ॥ ರಾಮಯ್ಯನಿಂದ ಬರೆಯಲ್ಪಟ್ಟದು.

## ೧೨.

## ಗುತ್ತಿಗೆಯ ಕೆಲಸದ ಕರಾರು.

೧೮೯೫ನೆಯ ಏಪ್ರಿಲ್ ೪ನೇ ತಾರೀಖಿನಲ್ಲಿ ಶಿವನಾಪುರದ ಶಿವರಾಯರವರಿಗೆ ಇದೇ ಊರಲ್ಲಿ ಬೆಂಗಳೂರಿಂದ ಬಂದು, ಕಂಟ್ರಾಕ್ಟು ಕೆಲಸಗಳನ್ನು ಮಾಡಿಸುತಿರುವ ಮೇಸ್ತ್ರಿ ಪಾಪಣ್ಣನು ಬರೆದುಕೊಟ್ಟ ಕರಾರು ಹೇಗೆಂದರೆ :—ನೀವು ಈ ಊರಿನ ದೊಡ್ಡ ಬೀದಿಯಲ್ಲಿ ೫ನೇ ಸಂಖ್ಯೆಯ ನಿವೇಶನದಲ್ಲಿ ಕಟ್ಟಿಸುತಿರುವ ಮಹಡೀ ಮನೆಯ ಕಾಮಗಾರಿಯನ್ನು ಈ ತಾರೀಖಿನ ಲಾಗಾಯಿತು ಆರು ತಿಂಗಳೊಳಗಾಗಿ ಇಟ್ಟಿಗೆ, ಗಾರೆ ಮತ್ತು ಮರಗೆಲಸವನ್ನೆಲ್ಲಾ ಮಜಬೂತಾಗಿ ತಮ್ಮ ಅಂದಾಜು ಮತ್ತು ಪ್ಲಾನಿಗೆ * ಅನುಸಾರವಾಗಿ ಕಟ್ಟಿ ಪೂರೈಸಿ ಕೊಡಲುಳ್ಳವನು. ಇದಕ್ಕೆ ನನ್ನ ಕೆಲಸ ನಡೆದಹಾಗೆಲ್ಲಾ ವಾರಕ್ಕೊಂದು ಸಲ ಕೆಲಸವನ್ನು ಅಳತೆಮಾಡಿಕೊಂಡು, ಆದ ಕೆಲಸಕ್ಕೆ ಇದಕ್ಕೆ ಸೇರಿಸಿರುವ ದರಗಳ ಪಟ್ಟಿಯ ಮೇರೆಗೆ ಆಗುವ ಮೊಬಲಗನ್ನು ತಾವು ಪಾವತಿ ಮಾಡಬೇಕು. ಉಪಯೋಗಿಸುವ ಸಾಮಾನಿನಲ್ಲಿಯೇ ಆಗಲೀ, ಕೆಲಸದ ಮಜಬೂತಿನ ವಿಷಯದಲ್ಲಿಯೇ ಆಗಲೀ ತಕರಾರು ಉಂಟಾದರೆ, ಅದರ ವಿಷಯದಲ್ಲಿ ನನ್ನ ಕಡೆಯುವರಾದ ಒಬ್ಬರೂ ತಮ್ಮ ಕಡೆಯುವರಾದ ಇಬ್ಬರೂ ನಿಂತು ಫೈಸಲ್ಮಾಡುವಂತೆ ಇಬ್ಬರೂ ಒಪ್ಪಿಕೊಳ್ಳತಕ್ಕದ್ದು. ಈ ವಿಷಯದಲ್ಲಿ ಯಾವುದೊಂದು ಹೆಚ್ಚು ಕಡಮೆ ಬಂದರೂ, ನನ್ನ ಸ್ವಂತ ಖರ್ಚಿನಿಂದ ನಾನು ಸರಿಮಾಡಿಕೊಳ್ಳತಕ್ಕವನು. ಮತ್ತು ಕಟ್ಟಡವು ಪೂರೈಸಲ್ಪಟ್ಟ, ಮೂರು ವರ್ಷದೊಳಗಾಗಿ ಸಾಮಾನು ಅಥವಾ ಕಾಮಗಾರಿಯ ಕೊರತೆಯಿಂದ ಕಟ್ಟಡಕ್ಕೆ ಯಾವುದೊಂದು ಕೇಡು ಸಂಭವಿಸಿದರೂ ಅದನ್ನು ಸರಿಮಾಡಲು ನಾನೇ ಜವಾಬ್ದಾರನಾಗಿರತಕ್ಕದ್ದು. ಈ ರೀತಿಯಾಗಿ ನನ್ನ ಮನಃಪೂರ್ವಕವಾಗಿ ಒಪ್ಪಿ, ಈ ಕರಾರನ್ನು ಬರೆದುಕೊಟ್ಟದೇನೆ.

---

* ‘ಪ್ಲಾನ’ ಅಂದರೆ ಮನೆಯನ್ನು ಈ ರೀತಿಯಾಗಿ ಕಟ್ಟಬೇಕೆಂಬುವ ನಮೂನೆ ಮತ್ತು ಅಳತೆಗಳನ್ನು ತೋರಿಸುವ ನಕ್ಷೆ ಅಥವಾ ಚಿತ್ರಪಟ.

ದರಗಳ ಪಟ್ಟಿ.

ಇಟ್ಟಿಗೆ ಗಾರೆ ಘನ ಅಡಿ ೧ಕ್ಕೆ ೨॥ ಆಣೆ.

ತಾರ್ಸಿ ಚದರ ೧ಕ್ಕೆ ೨೦ ರೂ.

..............................................

..............................................

ಮೇಸ್ತ್ರಿ ಪಾಪಣ್ಣನ ರುಜು.

ಸಾಕ್ಷಿಗಳು.

..............................

..............................

೧೧, ೧೨ನೇ ನಮೂನೆಯ ಕರಾರುಗಳನ್ನು ೮ ಆಣೆಯ ಛಾಪಾ ಕಾಗದಗಳಲ್ಲಿ ಬರೆಯಬೇಕು.

೧೩.

## ಪಾರೀಖತ್ತು.

೧೯ ಸಾವಿರದ ...................ಬುಧವಾರದಲ್ಲಿ ರಂಗಾಪುರದಲ್ಲಿರುವ ದೊಡ್ಡ ಮನೇ ರಾಮಾಭಟ್ಟರ ಮಕ್ಕಳು ಒಂದನೇ ನಲವತ್ತು ವರ್ಷ ವಯಸ್ಸಿನ ರಾಮಣ್ಣ, ಎರಡನೇ ಮುವತ್ತೈದು ವರ್ಷದ ವಯಸ್ಸಿನ ರಂಗಣ್ಣ, ಮೂರನೇ ಹತ್ತು ವರ್ಷದ ಮೈನರಾದ ನರಸಿಂಹನ ಪರವಾಗಿ ಇವನ ತಾಯಿ ಪಾತಿಯಾಗಿರುವ ರಾಮಾಭಟ್ಟರ ದ್ವಿತೀಯ ಪತ್ನಿಯಾದ ಇಪ್ಪತ್ತೈದು ವರ್ಷ ವಯಸ್ಸುಳ್ಳ ಪಾರ್ವತಮ್ಮ ನಾವು ಮೂವರೂ ಸೇರಿ ಪಾತಿಯಾಗಿರುವ ರಾಮಾಭಟ್ಟರ ಚರ ಸ್ಥಿರ ಆಸ್ತಿಗಳು ಇದುವರೆಗೂ ಸಮಷ್ಟಿಯಾಗಿ ನಮ್ಮೆಲ್ಲರ ಅನುಭವದಲ್ಲಿದ್ದುದನ್ನು ಪಂಚಾಯತರ ಮುಖತಃ ಹಂಚಿಕೊಂಡಿರುವ ಕ್ರಮವೆಂತೆಂದರೆ :—

ನಮ್ಮ ತಂದೆಯವರಾದ ರಾಮಾಭಟ್ಟರು ಮಾಡಿರುವ ಸಾಲಗಳು ಕೆಳಗೆ ಸೇರಿಸಿರುವ ಒಂದನೇ ಪಟ್ಟಿಯಲ್ಲಿ ವಿವರಿಸಿರುವಂತೆ ಎರಡು ಸಾವಿರ ರೂಪಾಯಿ ಕೊಡಬೇಕಾದ ಬಾಕಿ ಇವೆ. ಈ ಸಾಲಗಳನ್ನು

ನಮ್ಮ ಕುಟುಂಬದ ಆಸ್ತಿಯಲ್ಲಿ ಚಿನ್ನ ಬೆಳ್ಳಿ ನಾಣ್ಯ ನಗದಾಗಿ ಇರುವ ಐದುಸಾವಿರ ರೂಪಾಯಿನಿಂದ ತೀರಿಸತಕ್ಕದ್ದು.

ಎರಡನೇ ಪಟ್ಟಿಯಲ್ಲಿ ಕಂಡಿರುವಂತೆ ಸದರೀ ರಾಮಾಭಟ್ಟರಿಗೆ ಆರು ಸಾವಿರ ರೂಪಾಯಿ ಸಾಲಗಳು ಬರಬೇಕಾಗಿವೆ. ಈ ಮೊಬಲಗನ್ನು ನಮ್ಮಲ್ಲಿ ಹಿರಿಯನಾದ ರಾಮಣ್ಣನು ರಾಜೀ ದಾವಾ ಮುಂತಾದ ಉಚಿತವಾದ ಮಾರ್ಗಗಳಲ್ಲಿ ವಸೂಲ್ಮಾಡತಕ್ಕದ್ದು. ಆತನ ಹೆಸರಿಗೆ ವಾರಸು ಸರ್ಟಿಫಿಕೇಟನ್ನು ಪಡೆದುಕೊಳ್ಳತಕ್ಕದ್ದು. ಇದಕ್ಕೆಲ್ಲಾ ಖರ್ಚಿಗಾಗಿ ನಗದು ಹಣದಿಂದ ಒಂದು ಸಾವಿರ ರೂಪಾಯಿಯನ್ನು ಆತನ ವಶಕ್ಕೆ ಕೊಡಬೇಕು. ವಸೂಲಾದ ಹಣವನ್ನು ನಾವು ಸಮವಾಗಿ ಹಂಚಿಕೊಳ್ಳುವುದು.

ನಮ್ಮ ಚಿಕ್ಕತಾಯಿಯಾದ ಪಾರ್ವತಮ್ಮನವರಿಗೆ ಜೀವನಾಂಶಕ್ಕೂ ಆಕೆಯ ಮಗಳು ಸೀತಮ್ಮನ ಮದುವೆಗೂ ಎರಡು ಸಾವಿರ ರೂಪಾಯನ್ನು ಅವರ ವಶಕ್ಕೆ ಕೊಟ್ಟುಬಿಡುವುದು. ಆ ಮೊಬಲಗನ್ನು ಅವರು ಹೇಗೆ ಖರ್ಚುಮಾಡಿಕೊಂಡರೂ ನಮ್ಮ ಅಡ್ಡಿ ಇಲ್ಲ. ನಾವು ಆ ಖರ್ಚುಗಳ ಭಾರವನ್ನು ಮುಂದಕ್ಕೆ ವಹಿಸತಕ್ಕದ್ದಿಲ್ಲ.

ಒಡವೆ ಪಾತ್ರೆ ಪದಾರ್ಥ ಮುಂತಾದ ಚರಸ್ವತ್ತನ್ನು ಸಮಾಂಶವಾಗಿ ಪಂಚಾಯತರು ಬೆಲೆ ಕಟ್ಟಿ ಪಟ್ಟಿಗಳನ್ನು ಮಾಡಿಕೊಟ್ಟದ್ದನ್ನು ನಾವೆಲ್ಲರೂ ಅಂಗೀಕರಿಸಿ, ಅವುಗಳ ಪ್ರಕಾರ ನಮ್ಮ ನಮ್ಮ ಪಾಲಿಗೆ ಬಂದ ಆರು ಸಾವಿರ ರೂಪಾಯಿನ ಸೊತ್ತನ್ನು ನಾವುನಾವು ಬೇರೇ ತೆಗೆದುಕೊಂಡಿದೇವೆ; ನರಸಿಂಹನ ಸ್ವತ್ತನ್ನು ಅವನ ತಾಯಿ ಪಾರ್ವತಮ್ಮನಾದ ನಾನು ಪಡೆದುಕೊಂಡಿದೇನೆ.

ಮನೆ ಹೊಲ ಗದ್ದೆ ತೋಟಗಳು ಮುಂತಾದ ಸ್ಥಿರಸ್ವತ್ತನ್ನು ಕೆಳಗೆ ಸೇರಿಸಿರುವ ಪಟ್ಟಿಗಳ ಪ್ರಕಾರ ಪ್ರತಿ ಒಬ್ಬರೂ ಹತ್ತು ಸಾವಿರ ರೂಪಾಯಿ ಬಾಳುವ ಆಸ್ತಿಯನ್ನು ಪಡೆದದೇವೆ.

ಈ ಪ್ರಕಾರದಲ್ಲಿ ನಾವೆಲ್ಲರೂ ಮನಃಪೂರ್ವಕವಾಗಿ ಒಪ್ಪಿ ನಮಗೆ ಇದುವರೆಗೂ ಇದ್ದ ಸಮಷ್ಟಿಯಾಗಿದ್ದ ಅರ್ಥಸಂಬಂಧವನ್ನು ತಪ್ಪಿಸಿ

ಕೊಂಡು, ಈ ಪಾರೀಖತ್ತಿಗೆ ನಮ್ಮ ನಮ್ಮ ರುಜುಗಳನ್ನು ಸಾಕ್ಷಿಗಳ ಮುಖತಃ ಮಾಡಿದೇವೆ.

(ರುಜು) ರಾಮಣ್ಣ.
(ರುಜು) ರಂಗಣ್ಣ.
(ಗುರ್ತು) ಇಲ್ಲಿ ಪಾರ್ವತಮ್ಮ ಮಾಡಿದ ಗುರ್ತಿಗೆ
ಈಕೆಯ ಅಣ್ಣನಾದ ನಾರಣಪ್ಪನ ಬರಹ.

ಸಾಕ್ಷಿಗಳು.

(ರುಜು)
(ರುಜು)

ಕೊಡಬೇಕಾದ ಸಾಲಗಳ ಪಟ್ಟಿ :—

ರಾಮಪುರದ ರಾಮಸೆಟ್ಟರಿಗೆ ಅಂಗಡೀ ಲೆಕ್ಕದ ಪ್ರಕಾರ ನೇ ತಾರೀಖಿನವರೆಗೆ ಬಾಕಿ......................ರೂ. ೫೫೬ ೦ ೦

ಇತ್ಯಾದಿ. ................

ಒಟ್ಟು ಮೊಬಲಗು........೨,೦೦೦ ೦ ೦

ಎರಡು ಸಾವಿರ ರೂಪಾಯಿ.

ಬರಬೇಕಾದ ಸಾಲಗಳ ಪಟ್ಟಿ :—

ಚರಸ್ವತ್ತಿನ ಹಂಚಿಕೇ ಪಟ್ಟಿ :—

ರಾಮಣ್ಣನ ಪಾಲು...................
ರಂಗಣ್ಣನ ಪಾಲು...................
ನರಸಿಂಹನ ಪಾಲು...................

ಸ್ಥಿರಸ್ವತ್ತಿನ ಹಂಚಿಕೇ ಪಟ್ಟಿ :—

.......................
.......................
.......................

(ರುಜು) ರಾಮಣ್ಣ,
ಇತ್ಯಾದಿ.

ಸಾಕ್ಷಿಗಳು.

.........................

.........................

ಈ ಪತ್ರವು ರಾಮಪುರದ ಶಾನುಭೋಗ ರಾಮಯ್ಯ ಬರೆದದ್ದು.

ಇದಕ್ಕೆ ಸ್ಟಾಂಪಿನ ಬೆಲೆ:

ಒಂದು ಆಸ್ತಿಯಲ್ಲಿ ಅನೇಕ ಭಾಗಗಳಾದಾಗ, ಹೆಚ್ಚಾಗಿ ಉಳಿಯುವ ಭಾಗವೊಂದನ್ನು ಬಿಟ್ಟು, ಬಾಕೀ ಭಾಗಗಳ ಒಟ್ಟು ಬೆಲೆಯ ಮೊಬಲಗಿನ ಸಾಲದ ಪತ್ರಕ್ಕೆ ತಕ್ಕಷ್ಟು.

## ೧೪.

## ಉಯಿಲ್ ಅಥವಾ ಮರಣಶಾಸನ.

ಸರ್ ಒಂದು ಸಾವಿರದ ಎಂಟುನೂರ.................................. ವಾರದಲ್ಲಿ ರಂಗಾಪುರದ ರಾಮಣ್ಣನ ಮಗನಾದ ನಾನು ಬರೆದು ಇಟ್ಟ ಕೊನೇ ಇಚ್ಛಾಪತ್ರದ (ಅಥವಾ ಉಯಿಲಿನ) ಕ್ರಮವೆಂತೆಂದರೆ, ನನ್ನ ಮರಣಾನಂತರ ನನ್ನ ಗೃಹಕೃತ್ಯಗಳು ನಡೆಯತಕ್ಕ ರೀತಿಯನ್ನು ನಿಶ್ಚಯಪಡಿಸಲು ಈ ಪತ್ರವನ್ನು ಬರೆದಿದೇನೆ. ನನಗೆ ಗಂಡು ಮಕ್ಕಳಿಲ್ಲದೆ ಇರುವುದರಿಂದ ನನ್ನ ಪತ್ನಿಯಾದ ರಾಧೆಯು ನನ್ನ ಅಣ್ಣನ ಮಗನಾದ ಈಗ ಎರಡು ವರ್ಷದವನಾಗಿರುವ ರಾಮನನ್ನು ದತ್ತು ತೆಗದುಕೊಳ್ಳಬೇಕು. ಅವನು ದೊಡ್ಡವನಾಗುವವರೆಗೂ ಗೃಹಕೃತ್ಯದ ಆಡಳಿತಗಳನ್ನೆಲ್ಲಾ ಅವನ ಪರವಾಗಿ ನನ್ನ ಹೆಂಡತಿಯೇ ನೋಡಿಕೊಳ್ಳತಕ್ಕದ್ದು. ಅವನು ಪ್ರಬುದ್ಧನಾದಮೇಲೆ ಅವರವರಿಗೆ ಸರಿಬೀಳದಿದ್ದರೆ, ನನ್ನ ಹೆಂಡತಿಯು (ಇದಕ್ಕೆ ಸೇರಿಸಿರುವ ಪಟ್ಟಿಯಲ್ಲಿ ವಿವರಿಸಿರುವ) ನನ್ನ ಸ್ವಾರ್ಜಿತವಾದ ಸೊತ್ತನ್ನೆಲ್ಲಾ ಸಂಪೂರ್ಣ ಸ್ವಾತಂತ್ರ್ಯದೊಡನೆ ತನ್ನದಾಗಿಯೇ ಅನುಭವಿಸಿಕೊಂಡು ಬರಬೇಕು. ನನ್ನ ಅಕ್ಕನಾದ ರಂಗಮ್ಮನು ಮನೇ ತಪ್ಪಿದವಳಾಗಿ ಇರುವುದರಿಂದ ಆಕೆಯು ಜೀವವತಿಯಾಗಿರುವವರೆಗೂ ಆಕೆಗೆ ವರ್ಷಕ್ಕೆ ಒಂದು ನೂರು ರೂಪಾಯಿಯನ್ನು ನನ್ನ ಆಸ್ತಿ

ಯಿಂದ ಸಲ್ಲಿಸಬೇಕು. ಈ ಹಣಕ್ಕೆ (ವಿವರಿಸಿರುವ) ಸ್ವತ್ತು ಈಡಾಗಿರತಕ್ಕದ್ದು............ಇತ್ಯಾದಿ. ಈ ಪ್ರಕಾರ ಯಾವದೊಂದು ಉಪದ್ರವೂ ಇಲ್ಲದೆ ನನ್ನ ಮನಸ್ಸು ಸರಿಯಾದ ಸ್ಥಿತಿಯಲ್ಲಿರುವಾಗ ನನ್ನ ಖುದ್ದು ರಾಜಿಯಿಂದ ಈ ಇಚ್ಛಾಪತ್ರವನ್ನು ನನ್ನ ಸ್ವಹಸ್ತದಿಂದ ಬರೆದು, ಅದಕ್ಕೆ ಈ ಕೆಳಗೆ ರುಜು ಮಾಡಿರುವ ಸಾಕ್ಷಿಗಳ ಮುಖತ. ರುಜು ಮಾಡಿದೇನೆ.

(ರುಜು) ರಂಗಣ್ಣ.

ಸಾಕ್ಷಿಗಳು.

(ರುಜು)

(ರುಜು)

ಉಯಿಲಿಗೆ ಸ್ಟಾಂಪು ಅಗತ್ಯವಿಲ್ಲ. ಇದನ್ನು ರೆಜಿಸ್ಟರ್ ಮಾಡಿಸಬೇಕೆಂಬ ನಿರ್ಬಂಧವೂ ಇಲ್ಲ.

## 4ನೆಯ ಭಾಗ.

---

### ಲೆಕ್ಕಗಳನ್ನು ಬರೆಯುವ ಮಾರ್ಗ.

41. ಓದುಬರಹ ತಿಳಿಯದವರು ಕೂಡ ಗೋಡೆಯ ಮೇಲೆ ಬೊಟ್ಟುಗಳನ್ನಿಡುವುದು ಮುಂತಾದ ಮಾರ್ಗಗಳಲ್ಲಿ ಲೆಕ್ಕವನ್ನಿಟ್ಟುಕೊಳ್ಳುವುದುಂಟು. ವಿಶೇಷವಾಗಿ ವ್ಯಾಪಾರದ ಅಥವಾ ಇತರ ವಿಧವಾದ ಅನೇಕ ಲೇವಾದೇವಿಗಳನ್ನು ನಡಿಸುವವರು ಸರಿಯಾದ ಲೆಕ್ಕಗಳನ್ನು ಇಟ್ಟುಕೊಳ್ಳುವುದರಿಂದ ಬಹಳ ಪ್ರಯೋಜನ ಉಂಟೆಂಬುವುದು ಎಲ್ಲರಿಗೂ ತಿಳಿದಿರುವುದು. ಲೇವಾದೇವಿಯ ವಿಷಯದಲ್ಲಿ ವ್ಯವಹಾರ ಬಂದಾಗ ಕೋರ್ಟು ಮುಂತಾದ ಸ್ಥಾನಗಳಲ್ಲಿ ಕ್ರಮವಾಗಿ ಇಡಲ್ಪಟ್ಟಿರುವ ಲೆಕ್ಕಗಳನ್ನು ನಂಬುವಂತೆ ಹಿಂದುಮುಂದು ಸರಿಯಾಗಿ ತಿಳಿಯದಂತೆ ಇರುವ ಲೆಕ್ಕಗಳನ್ನು ನಂಬಲಾರರು. ಇದಲ್ಲದೆ, ಲೆಕ್ಕವನ್ನಿಟ್ಟುಕೊಳ್ಳದವರಿಗೆ, ತಮ್ಮ ಸ್ವಂತವಾದ ಆಸ್ತಿ ಲೇವಾದೇವಿ ಮುಂತಾದವುಗಳ ಜ್ಞಾಪಕ ತಪ್ಪಿಹೋಗುವುದು. ಸ್ವಲ್ಪವಾದ ಲೇವಾದೇವಿಯುಳ್ಳವರು ಕೂಡ ಆಗಾಗ್ಗ ತಮ್ಮ ಜಮೊಖರ್ಚಿನ ಲೆಕ್ಕವನ್ನು ನೋಡಿಕೊಳ್ಳುತ್ತಿದ್ದರೆ, ಅನೇಕ ಸಾರಿ ಹೆಚ್ಚು ಖರ್ಚಿಗೆ ಬೀಳದೆ, ತಮ್ಮ ಸ್ಥಿತಿಗೆ ತಕ್ಕ ಹದ್ದಿನೊಳಗಾಗಿ ಇರುವರೆಂಬುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ.

42. ಲೆಕ್ಕಗಳನ್ನು ಬರೆಯುವವರು ತಾವು ಯಾವ ಆಡಳಿತಗಳ ವಿಷಯವಾಗಿ ಬರೆಯಬೇಕೋ ಅದಕ್ಕೆ ತಕ್ಕಂತೆ ಅನೇಕ ವಿಧವಾದ ವಹಿಗಳನ್ನಿಡಬೇಕು. ಲೇವಾದೇವಿಯ ವಿಷಯದಲ್ಲಿ ಯಾವ ಸಂಗತಿಯಾದರೂ ಹೇಗೆ ನಡೆದಿದೆಯೋ ಎಂಬುವುದನ್ನು ತಿಳಿದುಕೊಳ್ಳಬೇಕಾದಾಗ, ವಿಶೇಷ ತೊಂದರೆಯೂ ಕಾಲವ್ಯಯವೂ ಇಲ್ಲದೆ, ಅದನ್ನು ತಿಳಿದು

ಕೊಳ್ಳುವುದಕ್ಕೆ ತಕ್ಕ ರೀತಿಯಲ್ಲಿ ಲೆಕ್ಕಗಳು ಬರೆಯಲ್ಪಟ್ಟಿರಬೇಕೆಂಬು ವುದೇ ಮುಖ್ಯೋದ್ದೇಶವಾಗಿರತಕ್ಕದ್ದು.

43. ಖಾಸಗೀ ಲೆಕ್ಕ ಅಂದರೆ, ಮನೆಯ ಕೆಲಸಗಳಿಗೋಸ್ಕರ ನಡಿಸಬಹುದಾದ ಜಮಾಖರ್ಚಿನ ಲೆಕ್ಕವು ವಿಶೇಷ ತೊಡಕಾಗಿರಲಾರದಾ ದುದರಿಂದ ಅದರ ನಮೂನೆಯನ್ನು ಮೊದಲು ತೋರಿಸಲಾಗುವುದು. ಗೃಹಕೃತ್ಯಗಳನ್ನು ನಿರ್ವಹಿಸತಕ್ಕ ಕೆಲಸ ಸಹಜವಾಗಿ ಮನೆಯ ಯಜಮಾನಿಯಾದ ಹೆಂಗಸಿನ ಕೆಲಸವಾಗುದರಿಂದ, ಈ ಲೆಕ್ಕವನ್ನು ಬರೆಯುವ ರೀತಿಯನ್ನು ಆಕೆಯೇ ಚೆನ್ನಾಗಿ ತಿಳಿದುಕೊಂಡು, ಆ ಪ್ರಕಾರ ಆಚರಿಸಿಕೊಂಡು ಬಂದರೆ, ಅನೇಕ ಪುರುಷರಿಗೆ ಬಹಳ ತೊಂ ದರೆಯು ಕಡಮೆಯಾಗುವುದು.

೧.

## ಗೃಹಕೃತ್ಯದ ಲೆಕ್ಕದ ನಮೂನೆ.

### ಚನ್ನಪಟ್ಣದ ಕರಿಬಸವಸೆಟ್ಟರ ಮನೆಯ ಲೆಕ್ಕ.

### ಜಯ ಸಂವತ್ಸರಕ್ಕೆ.

ಮೇಲೆ ಹೇಳಿರುವಂತೆ ಅಂಕಿತವನ್ನು ಪುಸ್ತಕದ ಮೇಲಿನ ಹಾಳೆಯಲ್ಲಿ ಬರೆದು, ಒಳಗೆ ಮೊದಲನೇ ಪುಟದಿಂದ ಲೆಕ್ಕವನ್ನು ಬರೆಯಬೇಕು.

| ಜಮಾ | | | ಚೈತ್ರ ಶುದ್ಧ | ಖರ್ಚು | | |
|---|---|---|---|---|---|---|
| ರೂ. | ಆ. | ಪೈ. | | ರೂ. | ಆ | ಪೈ |
| | | | ಶುದ್ಧ ೧. | | | |
| ೫೦ | ೦ | ೦ | ಯಜಮಾನರಿಂದ | | | |
| | | | ಅಕ್ಕಿ ಪಲ್ಲ ೧ಕ್ಕೆ................................ | ೮ | ೮ | ೦ |
| | | | ಸಾದೆ ಬಂಡಿ ೧ಕ್ಕೆ................................ | ೨ | ೩ | ೦ |
| | | | ಶು. ೪. | | | |
| | | | ಬಾಳೇಹಣ್ಣು........................................ | ೦ | ೦ | ೬ |
| | | | ತೆಂಗಿನಕಾಯಿ ೨ಕ್ಕೆ....................... .... | ೦ | ೧ | ೪ |
| | | | ಸಾಂಬ್ರಾಣಿ........................................ | ೦ | ೦ | ೧ |
| | | | ಉದ್ದಿನಬೇಳೆ ಸೇರು ೧ಕ್ಕೆ......................... | ೦ | ೨ | ೪ |
| | | | ಲಿಂಗಣ್ಣನವರ ಅಂಗಡಿಯಲ್ಲಿ ಸಾಲ ತರಿಸಿರುವುದು ಪಂಚೆ ೧ಕ್ಕೆ..............೩-೪-೦ | | | |
| | | | ಶು. ೧೧. | | | |
| | | | ತೊಗರಿಬೇಳೆ ಸೇರು ೨೫ಕ್ಕೆ.................... | ೨ | ೮ | ೦ |
| | | | ಇದಕ್ಕೆ ಕೂಲಿ................................... | ೦ | ೦ | ೬ |
| | | | ಶು. ೧೨. | | | |
| | | | ತುಪ್ಪ ಧಡಿಯಕ್ಕೆ................................ | ೨ | ೪ | ೦ |
| | | | ಬೆಲ್ಲ ಅಡೀಸೇರಿಗೆ.............................. | ೦ | ೩ | ೦ |
| | | | ಸಾಸುವೆ ಸೇರು ೧ಕ್ಕೆ............................ | ೦ | ೧ | ೮ |
| | | | ಶು. ೧೪. | | | |
| | | | ಮದುವೆಗೆ ಕೇಳಿದ ಬ್ರಾಹ್ಮಣರಿಗೆ ಕೊಟ್ಟದ್ದು. | ೧ | ೦ | ೦ |
| | | | ಬಹುಳ ೫. | | | |
| | | | ಸೀರೆ ೧ಕ್ಕೆ........................................ | ೧೦ | ೨ | ೦ |
| | | | ಹುವ್ವು............................................. | ೦ | ೪ | ೦ |
| ೧೫ | ೦ | ೦ | ಲಿಂಗಮ್ಮನವರಿಗೆ ಸಾಲಾ ಕೊಟ್ಟದ್ದು ಬಾಬತು | | | |

| ಜಮಾ | | | ಚೈತ್ರ ಬಹುಳ. | ಖರ್ಚು | | |
|---|---|---|---|---|---|---|
| ರೂ. | ಆ. | ಪೈ | ಬಹುಳ ೬. | ರೂ. | ಆ | ಪೈ |
| | | | ಅಕ್ಕಿ ಸೇರು ೫೦ಕ್ಕೆ........................... | ೫ | ೪ | ೦ |
| | | | ಸೌವ ಗಾಡಿ ೧ಕ್ಕೆ........................... | ೧ | ೧೪ | ೦ |
| | | | ಮೆಣಸಿನಕಾಯಿ ಪಂಚೇರಿಗೆ........................ | ೦ | ೫ | ೦ |
| | | | ಬ. ೧೧. | | | |
| | | | ಜೀರಿಗೆ ೧ ಸೇರು........................... | ೦ | ೨ | ೮ |
| | | | ಉಪ್ಪು ೪ ಸೇರಿಗೆ........................... | ೦ | ೬ | ೮ |
| | | | ಬಾಳೆಹಣ್ಣು ೨೦ಕ್ಕೆ........................... | ೦ | ೧ | ೮ |
| ೨೦ | ೦ | ೦ | ಯಜಮಾನರು ಊರಲ್ಲಿಲ್ಲದ್ದರಿಂದ ರಂಗಣ್ಣನವರಲ್ಲಿ ಸಾಲವಾಗಿ ತೆಗದುಕೊಂಡದ್ದು. | | | |
| | | | ಬ. ೧೨ | | | |
| | | | ಲಕ್ಷ್ಮಮ್ಮನವರಿಗೆ ಸಾಲವಾಗಿ ಕೊಟ್ಟದ್ದು.... | ೧೫ | ೦ | ೦ |
| | | | ಆಳಿಗೆ ಹೋದ ತಿಂಗಳಿನ ಸಂಬಳ................ | ೫ | ೦ | ೦ |
| | | | ಮನೆಯ ಬಾಡಿಗೆ ಹೋದ ತಿಂಗಳಿಗೆ............ | ೧೦ | ೦ | ೦ |
| | | | ಬ. ೩೦ | | | |
| | | | ಜಂಗಮಯ್ಯಗಳಿಗೆ ದಕ್ಷಿಣೆ ಕೊಟ್ಟದ್ದು....... | ೨ | ೪ | ೨ |
| ೮೫ | ೦ | ೦ | ಜಮಾ. ತಿಂಗಳಿಗೆ ಒಟ್ಟು ಖರ್ಚು | ೬೭ | ೧೨ | ೧೧ |
| | | | ಕೈಲಿ ಬಾಕಿ ನಿಂತಿರುವುದು | ೧೭ | ೩ | ೧ |
| | | | ತಿಂಗಳಿಗೆ ಖರ್ಚಿನ ತಪಶೀಲು. | ೮೫ | ೦ | ೦ |
| | | | ಮನೆಯ ಖರ್ಚು .............................. | ೨೪ | ೬ | ೧೧ |
| | | | ಜವಳಿ ತೆಗೆದುಕೊಂಡದ್ದು........................ | ೧೦ | ೨ | ೦ |
| | | | ಸಾಲವಾಗಿ ಕೊಟ್ಟಿರುವುದು...................... | ೧೫ | ೦ | ೦ |
| | | | ಆಳಿನ ಸಂಬಳ.............................. | ೫ | ೦ | ೦ |
| | | | ಮನೆಯ ಬಾಡಿಗೆ | ೧೦ | ೦ | ೦ |
| | | | ಧರ್ಮ ಖರ್ಚು | ೩ | ೪ | ೦ |
| | | | ಸಾಲ ತೆಗದುಕೊಂಡದ್ದು—ಜವಳಿ....೩-೩-೦ | | | |

44. ಮೇಲೆ ತೋರಿಸಿರುವಂತೆ ಆಯಾ ದಿನ ನಡೆಯುವ ಜಮಾ ಖರ್ಚುಗಳನ್ನು ತೋರಿಸುವ ಲೆಕ್ಕವನ್ನು ರೋಜ್‌ವಾರ್ ಬುಕ್ಕು ಅಥವಾ ದಿನಗಟ್ಲೆಯ ಲೆಕ್ಕದ ವಹಿ ಎಂದು ಹೇಳುತ್ತಾರೆ. ಇದರಲ್ಲಿ ದಿನಗಳ ಕ್ರಮಾನುಸಾರವಾಗಿ ನಡೆಯುವ ಲೇವಾದೇವಿಗಳನ್ನೆಲ್ಲಾ ತೋರಿಸಬೇಕು. ಮನೆಯ ಖರ್ಚಿಗೋಸ್ಕರ ಹಣಕೊಟ್ಟು ತೆಗೆದುಕೊಂಡ ಪದಾರ್ಥಗಳ ವಿಷಯವಾಗಿ ಬೇರೆ ಯಾವ ಲೆಕ್ಕದ ದಾಖಲೆಯೂ ಬೇಕಾಗುವುದಿಲ್ಲ. ಮೇಲಿನ ನಮೂನೆಯನ್ನು ನೋಡಿಕೊಂಡರೆ ಕೆಲವು ಸಾಲ ಕೊಟ್ಟಿರುವುದು, ಸಾಲ ತಂದಿರುವುದು ಈ ಪ್ರಮೇಯಗಳಿವೆ. ಇಂತಾ ವಿಷಯಗಳನ್ನು ಮಾತ್ರ ಬೇರೆ ಬುಕ್ಕಿನಲ್ಲಿ ಆಯಾ ಆಸಾಮಿಗಳ ಹೆಸರಿನ ಲೇವಾದೇವಿಯು ಬೇರೆ ಕಾಣುವಂತೆ ಬರೆದಿಟ್ಟರೆ ಸಾಕಾಗಿರುವುದು. ನಗದು ಹಣ ಬಂದುದನ್ನು ಎಡಗಡೆಯ ಪಕ್ಕದಲ್ಲೂ, ನಗದು ಹಣ ಖರ್ಚಾದುದನ್ನು ಬಲಗಡೆಯ ಪಕ್ಕದಲ್ಲೂ ಬರೆದಿದೆ. ಶು. ೪ರಲ್ಲಿ ಅಂಗಡಿಯಲ್ಲಿ ಸಾಲವಾಗಿ ಪಂಚೆಯನ್ನು ತರಿಸಿಕೊಂಡಿರುವುದು ನಗದು ಜಮಾಖರ್ಚಲ್ಲವಾದುದರಿಂದ ಅದರ ಬೆಲೆಯನ್ನು ಈ ಸಾಲುಗಳಲ್ಲಿ ತೋರಿಸಿಲ್ಲ. ಲೆಕ್ಕದ ಕೊನೆಯಲ್ಲಿ ತೋರಿಸಿರುವಂತೆ ತಿಂಗಳಿಗೊಂದು ಸಲ ಗೋಷ್ವಾರೆಯನ್ನು ಬರೆದಿಟ್ಟರೆ, ಇಂತಿಂತಾ ಖರ್ಚು ಇಷ್ಟಾಗಿದೆ ಎಂದು ಸುಲಭವಾಗಿ ತಿಳಿಯಬರುತ್ತದೆ. ಆಸಾಮಿಗಳ ಹೆಸರಿನ ಮೇಲೆ ಇಡತಕ್ಕ ಖಾಸಗೀ ಲೆಕ್ಕದ ನಮೂನೆಯನ್ನು ಮುಂದೆ ತೋರಿಸಿದೆ.

## ೨

## ಚನ್ನಪಟ್ಟಣದ ಕರಿಬಸವ ಸೆಟ್ಟರ ಮನೆಯ ಲೆಕ್ಕ—ಆಸಾಮಿವಾರು.

ಮನೆಯ ಬಾಡಿಗೆ—ನಾವಿರುವ ಮುಸಿಯಪ್ಪನವರ ಮನೆಯ ಬಾಬತ್ತು.

| ರೂ. | ಆ | ಪೈ. | | ರೂ. | ಆ. | ಪೈ |
|---|---|---|---|---|---|---|
| | | | ವಿಜಯ ಸಂ॥ ಫಾಲ್ಗುಣದ ಬಾಡಿಗೆ—ಜಯ ಸಂ॥ ಚೈತ್ರ ಬ. ೧೨ ಯಲ್ಲಿ ಕೊಟ್ಟದ್ದು. | ೧೧ | ೦ | ೦ |

ಜವಳೀ ಅಂಗಡಿಯ ಲಿಂಗಣ್ಣನವರ ಲೆಕ್ಕ.

| ರೂ. | ಆ. | ಪೈ. | | ರೂ. | ಆ. | ಪೈ. |
|---|---|---|---|---|---|---|
| ೩ | ೪ | ೦ | ಇವರಿಂದ ಜಯ ಸಂ॥ ಚೈತ್ರ ಶು. ೪ಯಲ್ಲಿ ಸಾಲ ತರಿಸಿರುವುದು—ಹುಡುಗನ ಪಂಚೆಯ ಕ್ರಯ. | | | |

ಮಹಡೀ ಮನೆ ಮರಿಯಪ್ಪನವರ ಕುಟುಂಬ
ಲಿಂಗಮ್ಮನವರ ಲೆಕ್ಕ.

| ರೂ. | ಆ. | ಪೈ. | | ರೂ. | ಆ. | ಪೈ. |
|---|---|---|---|---|---|---|
| ೧೫ | ೦ | ೦ | ಇವರು ಮೊದಲು ಸಾಲವಾಗಿ ತೆಗೆದುಕೊಂಡು ಹೋಗಿದ್ದುದನ್ನು ಜಯ ಸಂ\|\| ಚೈತ್ರ ಬ. ೫ ಯಲ್ಲಿ ವಾಪಸು ಕೊಟ್ಟರು. | | | |

ಸರ್ಜಾಪುರದ ರಂಗಣ್ಣನವರ ಲೆಕ್ಕ.

| ರೂ. | ಆ. | ಪೈ. | | ರೂ. | ಆ. | ಪೈ. |
|---|---|---|---|---|---|---|
| ೨೦ | ೦ | ೨ | ಜಯ ಸಂ\|\| ಚೈತ್ರ ಬ. ೧೧ ಯ ಲ್ಲಿ ಸಾಲವಾಗಿ ತೆಗೆದುಕೊಂಡುದು. | | | |

ವೆಂಕಟರಮಣಸೆಟ್ಟರ ಕುಟುಂಬ ಲಕ್ಷ್ಮಮ್ಮನವರ ಲೆಕ್ಕ.

| ರೂ. | ಆ | ಪೈ | | ರೂ. | ಆ | ಪೈ. |
|---|---|---|---|---|---|---|
| | | | ಜಯ ಸಂ\|\| ಚೈತ್ರ ಬ. ೧೨ ಯಲ್ಲಿ ಇವರಿಗೆ ಸಾಲವಾಗಿ ಕೊಟ್ಟುದು .... | ೧೫ | ೦ | ೦ |

ಈ ಪುಸ್ತಕದಲ್ಲಿ ಹಾಳೆಯ ಅಗಲವನ್ನು ನೋಡಿಕೊಂಡು ಒಂದೊಂದು ಹೆಸರಿಗೆ ಎಷ್ಟು ಸ್ಥಳ ಆವಶ್ಯಕವೆಂದು ತೋರುವುದೋ ಹಾಗೆ ಒಂದು ಅಥವಾ ಹೆಚ್ಚಾದ ಪುಟಗಳನ್ನು ಬಿಟ್ಟು, ಲೇವಾದೇವಿ ನಡೆದಾಗಲೆಲ್ಲಾ ಅಲ್ಲಿ ಬರೆಯುತ್ತ ಬರಬೇಕು. ಬಿಟ್ಟದ್ದ ಸ್ಥಳ ಮುಗಿದುಹೋದರೆ ಪುಸ್ತಕದ ಇಷ್ಟನೇ ಪುಟದಲ್ಲಿ ಮುಂದಕ್ಕೆ ಬರೆದಿದೆ ಎಂದು ಕೆಳಗೆ ಗುರ್ತು ಹಾಕಿಕೊಂಡು, ಮತ್ತೊಂದು ಸ್ಥಳದಲ್ಲಿ ಮುಂದಕ್ಕೆ ಬರೆಯಬೇಕು.

ಇದರಲ್ಲಿಯೂ ನಮಗೆ ಬರುವುದೆಲ್ಲಾ ಎಡಗಡೆಯೂ ನಾವು ಕೊಡುವುದೆಲ್ಲಾ ಬಲಗಡೆಯೂ ಬರೆಯಬೇಕು. ನಾವು ಮತ್ತೊಬ್ಬರಿಂದ ಸಾಲ ತಂದರೆ ಅದನ್ನು ಎಡಗಡೆ ಬರೆಯಬೇಕು. ಅದನ್ನು ತೀರಿಸಿದಾಗ ಮೊಬಲಗನ್ನು ಬಲಗಡೆ ದಾಖಲ್ಮಾಡಬೇಕು.

ಮೇಲೆ ಲಿಂಗಮ್ಮನವರ ಲೆಕ್ಕದಲ್ಲಿ ಆಕೆ ಸಾಲವನ್ನು ತೀರಿಸಿರುವುದನ್ನು ಮಾತ್ರ ಬರೆದಿದೆ. ಸಾಲ ಕೊಟ್ಟಾಗ ಅದು ಹಿಂದಿನ ತಾರೀಖಿಗೆ ದಾಖಲಾಗಿರುತದೆಯಾದುದರಿಂದ, ತೀರಿಸಿದುದನ್ನೂ ಇಲ್ಲಿ ಬರೆಯಬೇಕು.

45. ಅಂಗಡಿಗಳಲ್ಲಿ ನಡೆಯುವ ವ್ಯಾಪಾರದ ಯೋಗ್ಯತಾನುಸಾರವಾಗಿ ಅನೇಕ ಪುಸ್ತಕಗಳನ್ನಿಟ್ಟುಕೊಳ್ಳಬಹುದು. ಕೊಂಚವೇ ವ್ಯಾಪಾರ ನಡಿಸುವ ಅಂಗಡಿಗಳಲ್ಲಿ ಮೇಲೆ ತೋರಿಸಿರುವ ನಮೂನೆಯ ಎರಡು ಪುಸ್ತಕಗಳನ್ನಿಟ್ಟರೆ ಸಾಕಾಗಿರುವುದು. ಸಾಧಾರಣವಾಗಿ ವಾಡಿಕೆಯಲ್ಲಿ "ರೋಜು", "ವರ್ಗ" ಎಂಬ ಎರಡು ಬುಕ್ಕುಗಳನ್ನಿಡುವುದೇ ಪದ್ಧತಿಯಾಗಿದೆ. ಕೆಲವರು ಸಾಮಾನನ್ನು ಸಾಲವಾಗಿ ಮಾರುವುದನ್ನು ಬೇರೆ ಬುಕ್ಕಿನಲ್ಲಿ ಬರೆದುಕೊಳ್ಳುತಾರೆ. ಮತ್ತು ಕೆಲವು ಅಂಗಡಿಗಳಲ್ಲಿ ನಿಷ್ಕರ್ಷೆಯಾಗಿ ವಿಕ್ರಯವಾಗದೆ ತೆಗೆದುಕೊಂಡು ಹೋಗುವ ಮಾಲುಗಳನ್ನೆಲ್ಲಾ ಅಮಾನತ್ತು ಬುಕ್ಕಿನಲ್ಲಿ ಬರೆದುಕೊಳ್ಳುತಾರೆ. ಮುಂದೆ

ಅಂಗಡಿಗಳಲ್ಲೆಲ್ಲಾ ಇಡಬಹುದಾದ ಲೆಕ್ಕಗಳ ನಮೂನೆಯನ್ನು ಬರೆದಿದೆ: ಅವುಗಳಲ್ಲಿ ಸಮಯೋಚಿತವಾದ ಬದಲಾವಣೆಯನ್ನು ಮಾಡಿಕೊಂಡರೆ, ಯಾವ ವ್ಯಾಪಾರಕ್ಕಾದರೂ ಸಾಕಾಗಿದೆಯೆಂದು ತೋರುತದೆ.

46. ಇದರ ಕೆಳಗೆ ಮೊದಲು ತೋರಿಸಿರುವ ನಮೂನೆಗಳು ರೋಜುವಾರ್ ಬುಕ್ಕು ಒಂದು, ಆಸಾಮಿವಾರ್ ವರ್ಗದಬುಕ್ಕು ಒಂದು. ಎರಡನ್ನು ಮಾತ್ರ ಇಡುವುದಕ್ಕೆ ತಕ್ಕವುಗಳಾಗಿವೆ. ನಗದು ಜಮಾ ಖರ್ಚನ್ನೂ ಜಿನಸಿಯ ಜಮಾಖರ್ಚನ್ನೂ ಬೇರೆ ಬೇರೆ ರೋಜುವಾರ್ ಬುಕ್ಕಿನಲ್ಲಿಯೇ ತೋರಿಸಬೇಕು. ಅಂಗಡಿಯ ಲೆಕ್ಕಗಳು ದಾವೆಗಳಿಗೆ ಬೇಕಾಗಿ ಬರುವುದರಿಂದ ಇವುಗಳಲ್ಲೆಲ್ಲಾ ಇಂಗ್ಲೀಷ್ ತಾರೀಖೇ ಹಾಕುವುದು ಮೇಲು. ದಿನಗಳ ಕ್ರಮಾನುಸಾರವಾಗಿ ಬರೆಯಲ್ಪಡುವ "ರೋಜ್" ಬುಕ್ಕಿನಲ್ಲಿ ಯಾವ ತಾರೀಖಿನ ಲೆಕ್ಕವನ್ನು ಬೇಕಾದರೂ ಜಾಗ್ರತೆಯಾಗಿ ಹುಡುಕುವ ಹಾಗೆ ಇರುವಂತೆ ಪ್ರತಿ ಒಂದು ಪುಟದ ತಲೆಯ ಮೇಲೆಯೂ ಅದರಲ್ಲಿರುವ ಮೊದಲನೇ ವರ್ಷ ತಿಂಗಳು ಮತ್ತು ತಾರೀಖನ್ನು ಸ್ಪಷ್ಟವಾಗಿ ಬರೆಯಬೇಕು. ಮಧ್ಯೆ ಹಾಕುವ ತಾರೀಖಿನ ಅಂಕಿಗಳು ಲೆಕ್ಕದ ಇತರ ಅಂಕಿಗಳೊಡನೆ ಕಲೆತುಕೊಂಡು ಹೋಗದಂತೆ ಅವನ್ನು ಬೇರೆ ಕೆಂಪು ಶಾಯಿನಿಂದ ಬರೆಯುವುದರಿಂದಲೋ ಅಥವಾ ಅವುಗಳ ಕೆಳಗೆ ಗೆರೆ ಹಾಕುವುದು (ಜನವರಿ ೧೫) ಅಥವಾ ಎರಡು ಪಾರ್ಶ್ವಗಳಲ್ಲಿಯೂ ಗೀಟು ಹಾಕುವುದು (—೫—) ಮುಂತಾದ ಮಾರ್ಗಗಳಲ್ಲಿ ಬೇರೆ ಕಾಣುವಂತೆ ಬರೆಯಬೇಕು. ಪುಟದ ಮೇಲ್ಗಡೆಯಲ್ಲಿ ಇಸವಿ ತಿಂಗಳು ಹಾಕಿದರೆ ಆ ತಿಂಗಳು ಮುಗಿಯುವ ವರೆಗೂ ಆ ಪುಟದಲ್ಲಿ ಬರೀ ತಾರೀಖಿನ ಅಂಕಿಯನ್ನು ಬರೆದರೆ ಸಾಕಾಗಿರುವುದು.

## ೩.

## ಬೆಂಗಳೂರು ತರಗಿನ ಪೇಟೆಯ ಆಲೂರು ಬೋರಣ್ಣನವರ ಅಂಗಡಿಯ ರೋಜ್‌ವಾರ್ ಲೆಕ್ಕ.

### 1890ನೇ ಇಸವಿ ಜನವರಿ.

| ನಗದು ಜಮ | | | ಜಿನಸಿ ಜಮ | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ. | ರೂ. | ಆ. | ಪೈ. | | ರೂ. | ಆ. | ಪೈ. | ರೂ. | ಆ. | ಪೈ. |
| | | | | | | 1 | | | | | | |
| | | | | | | ಈ ದಿನ ವ್ಯಾಪಾರ ಮೊದಲು ಮಾಡುವಾಗ ಅಂಗಡಿಯಲ್ಲಿದ್ದ ನಗದು ಮತ್ತು ಸರಕಿನ ತಪ್ಸೀಲು :— | | | | | | |
| | | | ೨೨೦ | ೦ | ೦ | ಸಣ್ಣ ಅಕ್ಕಿ ಪಲ್ಲ ೨೨ಂಕ್ಕೆ ದರ ೧೦ ರೂ. ನಲ್ಲಿ. | | | | | | |
| | | | ೪೦೦ | ೦ | ೦ | ದಪ್ಪ ಅಕ್ಕಿ ಪಲ್ಲ ೫೦ಂಕ್ಕೆ ದರ ೮ ರೂ. ನಲ್ಲಿ. | | | | | | |
| | | | ೩೦೦ | ೦ | ೦ | ರಾಗಿ ಪಲ್ಲ ೧೦೦ಂಕ್ಕೆ ದರ ೩ ರೂ. ನಲ್ಲಿ. | | | | | | |
| ೫೦೦ | ೦ | ೦ | | | | ನಗದು ಹಾಜರಿರುವುದು | | | | | | |
| | | | | | | ಈ ದಿನ ಬಸವಣ್ಣನವರಿಗೆ ಮಾರಿದ್ದು ಸಣ್ಣ ಅಕ್ಕಿ ೪ ಪಲ್ಲ ದರ ೧೦॥ ರೂ. ನಲ್ಲಿ. | ೪೨ | ೦ | ೦ | | | |
| ೩೩ | ೦ | ೦ | | | | ನಗದು ಬಿಕರಿ ದಪ್ಪ ಅಕ್ಕಿ ೪ ಪಲ್ಲ ದರ ೮। ಮೇರೆಗೆ. | | | | | | |
| | | | | | | ತಾರೀಖು 2ರಿಂದ ಜಮಾ ಖರ್ಚಿಲ್ಲ. | | | | | | |
| | | | | | | 5 | | | | | | |
| | | | | | | ಲಿಂಗಪ್ಪನವರ ಖರ್ಚು ರಾಗಿ ೧೬ ಪಲ್ಲ ೩ ರೂ. ೬ ಆಣೆ ಮೇರೆಗೆ. | ೫೪ | ೦ | ೦ | | | |

| ನಗದು ಜಮಾ | | | ಜಿನಸಿ ಜಮಾ | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ | ಪೈ | ರೂ. | ಆ | ಪೈ. | | ರೂ. | ಆ. | ಪೈ | ರೂ | ಆ. | ಪೈ |
| ೨೬ | ೦ | ೦ | | | | ನಗದು ಬಿಕರಿ ರಾಗಿ ೮ ಪಲ್ಲ ದರ ೩\| ರೂ. ಮೇರೆಗೆ. | | | | | | |
| ೪೨ | ೦ | ೦ | | | | ನಗದು ಬಿಕರಿ ಸಣ್ಣ ಅಕ್ಕಿ ೪ ಪಲ್ಲ ದರ ೧೦\|\| ರೂ. ಮೇರೆಗೆ. | | | | | | |
| | | | | | | ರಾಮಯ್ಯನವರ ಖರ್ಚು: ಸಣ್ಣ ಅಕ್ಕಿ ಪಲ್ಲ ೧ಕ್ಕೆ .... | ೧೧ | ೦ | ೦ | | | |
| | | | | | | ದಪ್ಪಕ್ಕಿ ಪಲ್ಲ ೧ಕ್ಕೆ .... | ೧೩ | ೦ | ೦ | | | |
| | | | | | | 6 | | | | | | |
| | | | | | | ಬಸವಣ್ಣನವರ ಖರ್ಚು ರಾಗಿ ಪಲ್ಲ ೫೦ಕ್ಕೆ ೩\| ರಲ್ಲಿ .... | ೧೬೨ | ೮ | ೦ | | | |
| | | | | | | ಲಿಂಗಪ್ಪನವರ ಖರ್ಚು: ದಪ್ಪ ಅಕ್ಕಿ ಪಲ್ಲ ೧೧ಕ್ಕೆ ೭\|\|\| ರೂ. ನಲ್ಲಿ. | ೮೩ | ೮ | ೦ | | | |
| | | | | | | ಸಿಂಗೇಗೌಡರಿಗೆ ದಪ್ಪಕ್ಕಿ ಪಲ್ಲ ೧ಕ್ಕೆ ... | ೧೩ | ೦ | ೦ | | | |
| | | | | | | ಸಣ್ಣಕ್ಕಿ ಪಲ್ಲ ೨ಕ್ಕೆ .... | ೨೨ | ೦ | ೦ | | | |
| ೧೬ | ೪ | ೦ | | | | ನಗದು ಬಿಕರಿ ರಾಗಿ ಪಲ್ಲ ೫ಕ್ಕೆ ೩\|ರಲ್ಲಿ. | | | | | | |
| | | | | | | 7ರಿಂದ 14ರ ವರೆಗೆ ಜಮಾ ಖರ್ಚಿಲ್ಲ. | | | | | | |
| | | | | | | 15 | | | | | | |
| | | | | | | ಸಿಂಗೇಗೌಡರಿಂದ ಜಮಾ ದಳ್ಳಾಳಿ ಮಾರಾಟಕ್ಕೋಸ್ಕರ ರಾಗಿ ಪಲ್ಲ ೧೦೦. | | | | | | |
| | | | | | | ಸ್ವಂತಕ್ಕೆ ತೆಗೆದುಕೊಂಡದ್ದು ನಗದು .... | | | | ೮೦ | ೦ | ೦ |

| ನಗದು ಜಮಾ | | | ಜಿನಸಿ ಜಮಾ | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ. | ರೂ. | ಆ | ಪೈ. | | ರೂ. | ಆ | ಪೈ | ರೂ. | ಆ. | ಪೈ |
| | | | | | | ಸ್ವಂತಕ್ಕೆ ಸಣ್ಣ ಅಕ್ಕಿ ಪಲ್ಲ ೨ಕ್ಕೆ .... | ೨೨ | ೦ | ೦ | | | |
| | | | | | | ನಗದು ಹಣಕ್ಕೆ ಕೊಂಡದ್ದು ಸಣ್ಣಕ್ಕಿ ಪಲ್ಲ ೧೦ ದರ ೧೦॥ಯಲ್ಲಿ | | | | ೧೦೫ | ೦ | ೦ |
| | | | | | | 16 | | | | | | |
| | | | ೨೨೦ | ೦ | ೦ | ಲಿಂಗಪ್ಪನವರ ಜಮಾ ಸಣ್ಣ ಅಕ್ಕಿ ಪಲ್ಲ ೨೦ಕ್ಕೆ ದರ ೧೧ರಲ್ಲಿ. | | | | | | |
| ೧೦೮ | ೦ | ೦ | | | | ನಗದು ಬಿಕರಿ ದಪ್ಪಕ್ಕಿ ಪಲ್ಲ ೧೨ಕ್ಕೆ ರೂ. ೯ರಲ್ಲಿ. | | | | | | |
| | | | | | | 17ರಿಂದ 24ರ ವರೆಗೆ ಜಮಾ ಖರ್ಚು ಇಲ್ಲ | | | | | | |
| | | | | | | 25 | | | | | | |
| ೨೦ | ೦ | ೦ | | | | ರಾಮಯ್ಯನವರ ಜಮಾ ನಗದು. | | | | | | |
| | | | | | | 26 | | | | | | |
| ೨೪೮ | ೦ | ೦ | | | | ಸಿಂಗೇಗೌಡರ ಬಾಬತ್ತು ರಾಗಿ ನಗದು ಬಿಕರಿ ೬೪ ಪಲ್ಲ ದರ ೪ ರೂ. ನಲ್ಲಿ. ದಳ್ಳಾಳಿ ರೂ. ಗೆ ೬ ಪೈ. ಜಾತ ಇವರ ಲೆಕ್ಕಕ್ಕೆ ಜಮೆ. | | | | | | |
| ೮ | ೦ | ೦ | | | | ದಳ್ಳಾಳಿ—ಮೇಲಿನ ಬಿಕರಿಗೆ ಖರತಕ್ಕದ್ದು. | | | | | | |

| ನಗದು ಜಮು | | | ಜಿನಸಿ ಜಮು | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ. | ರೂ. | ಆ | ಪೈ. | | ರೂ. | ಆ. | ಪೈ. | ರೂ. | ಆ. | ಪೈ. |
| | | | | | | 27 | | | | | | |
| | | | | | | ರಾಮಯ್ಯನವರಿಗೆಮೂ ಬದಲ್ ಕೊಟ್ಟದ್ದು. | | | | ೨೫ | ೦ | ೦ |
| ೧೫೦ | ೦ | ೦ | | | | ಬಸವಣ್ಣನವರಿಂದ ನಗದು ಜಮೆ .... | | | | | | |
| | | | | | | 28 | | | | | | |
| | | | | | | ಬಸವಣ್ಣನವರಿಗೆ ಸಣ್ಣಕ್ಕಿ ಪಲ್ಲ ೫ಕ್ಕೆ ದರ ೧೨ರಲ್ಲಿ .... | ೬೦ | ೦ | ೦ | | | |
| | | | | | | ಸಿಂಗೇಗೌಡರಿಗೆ ನಗದು ಕೊಟ್ಟದ್ದು .... | | | | ೧೩೫ | ೦ | ೦ |
| | | | | | | 29 | | | | | | |
| | | | | | | ಲಿಂಗಪ್ಪನವರಿಗೆಖರ್ಚು ಸಿಂಗೇಗೌಡರರಾಗಿಪೈಕಿ ೩೨ಪಲ್ಲ ೩\|\|\|ರಲ್ಲಿ. | ೧೨೦ | ೦ | ೦ | | | |
| | | | ೧೧೬ | ೪ | ೦ | ಸಿಂಗೇಗೌಡರ ಜಮೆ | | | | | | |
| | | | | | | ಮೇಲಿನಮೊಬಲಗು ಲಿಂಗಪ್ಪನವರಿಗೆ ಖರ್ಚು ಬಿದ್ದಿರುವುದರಿಂದ ದಳ್ಳಾಳಿ ವಜಾ ಜಾತ. | | | | | | |
| | | | ೩ | ೧೨ | ೦ | ದಳ್ಳಾಳಿ ಜಮೆ. | | | | | | |

| ನಗದು ಜಮಾ | | | ಜಿನಸಿ ಜಮಾ | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ. | ರೂ. | ಆ. | ಪೈ. | | ರೂ. | ಆ. | ಪೈ. | ರೂ. | ಆ. | ಪೈ. |
| | | | | | | 30 | | | | | | |
| | | | | | | ರಾಮಯ್ಯನವರಿಗೆಪತ್ರದಮೇಲೆ ಕೊಟ್ಟ ಸಾಲ | | | | ೧೦೦ | ೦ | ೦ |
| ೨ | ೮ | ೦ | | | | ರಾಮಯ್ಯನವರಿಂದಮೇಲಿನಸಾಲದ ೧೦ ತಿಂಗಳಿನಬಾಬತು ಬಡ್ಡಿ ಮುಂಗಡವಾಗಿಜಮೆ ಬಂದದ್ದು ದರ ‖ ರೂ. ನಲ್ಲಿ. | | | | | | |
| | | | | | | ನಗದು ಖರ್ಚು ಅಂಗಡಿ ಬಾಡಿಗೆ .... | | | | ೨೦ | ೦ | ೦ |
| | | | | | | 31 | | | | | | |
| ೧೦೦ | ೦ | ೦ | | | | ಲಿಂಗಪ್ಪನವರಿಂದನಗದು | | | | | | |
| ೧೧೫ | ೦ | ೦ | | | | ನಗದು ಬಿಕರಿ ಸಣ್ಣಕ್ಕಿ ಪಲ್ಲ ೧೦ಕ್ಕೆ ೧೧‖ ರೂ. ನಲ್ಲಿ | | | | | | |
| ೪೫ | ೦ | ೦ | | | | ನಗದು ಬಿಕರಿ ದಪ್ಪಕ್ಕಿ ಪಲ್ಲ ೫ಕ್ಕೆ ೯ ರೂ. ನಲ್ಲಿ | | | | | | |
| | | | | | | ಸ್ವಂತಕ್ಕೆ ಖರ್ಚು ಮದುವೆಯೊಂದು ಬಂದ ಬ್ರಾಹ್ಮಣನಿಗೆಕೊಟ್ಟ ಅಕ್ಕಿ ಪಲ್ಲ ೧ಕ್ಕೆ .... | ೧೦ | ೦ | ೦ | | | |

ಮೊದಲನೇ ದಿನ ಅಂಗಡಿಯಲ್ಲಿರುವ ಜಿನಸು, ನಗದು ಎರಡನ್ನೂ ಬರೆಯುವುದರಿಂದ ಮುಂದೆ ಆಗುವ ಜಮಾಖರ್ಚಿನ ದಾಖಲೆ ಮೇಲೆ, ಇರುವ ಮಾಲಿನ ಬೆಲೆ ಉಂಟಾದ ಲಾಭ ನಷ್ಟ ಮುಂತಾದುವನ್ನು ತಿಳಿದುಕೊಳ್ಳುವುದಕ್ಕೆ ಸುಲಭವಾಗಿರುವುದು. ಇದು ಎಲ್ಲರೂ ನೋಡತಕ್ಕ ರೋಜಿನಲ್ಲಿ ಇದ್ದರೆ ಅನಾನುಕೂಲವೆಂದು ತೋರಿದಾಗ ಈ ತಪ್ಸೀಲನ್ನೆಲ್ಲಾ ಬೇರೆ ಬುಕ್ಕಿನಲ್ಲಿ ಬರೆದಿಟ್ಟುಕೊಳ್ಳಬಹುದು: ಅಥವಾ ಬಿಟ್ಟೇಬಿಡಬಹುದು.

ನಗದು ಬಿಕರಿಮಾಡಿ ಹಣ ಜಮೆ ಕಟ್ಟಿಕೊಂಡಾಗ ಅದೇ ಮೊಬಲಗನ್ನು ನ್ಯಾಯವಾಗಿ ಜಿನಸಿನ ಖರ್ಚು ಸಾಲಿನಲ್ಲಿಯೂ ನಮೂದು ಮಾಡಬೇಕು. ಆದರೆ ಇದರಿಂದ ತಕ್ಕ ಪ್ರಯೋಜನವೇನೂ ಕಾಣುವುದಿಲ್ಲ; ಸುಮ್ಮನೆ ಅಂಕಿಗಳು ಹೆಚ್ಚಾಗುವುದರಿಂದ ಬಿಟ್ಟುಬಿಟ್ಟಿದೆ. ಅದೇಪ್ರಕಾರ ನಗದು ಹಣಕೊಟ್ಟು ಜಿನಸಿಯನ್ನು ಕೊಂಡುಕೊಂಡಾಗ ಹಣವನ್ನು ಖರ್ಚುಮಾಡಿ ಜಿನಸಿಯ ಜಮೆಯ ಸಾಲಿನಲ್ಲಿ ಅದೇ ಮೊಬಲಗನ್ನು ಜಮೆ ಕಟ್ಟಿಕೊಳ್ಳಬೇಕು. ಇದನ್ನೂ ಇಲ್ಲಿ ತೋರಿಸಲಿಲ್ಲ. ಲೆಕ್ಕವನ್ನು ಸವಿಸ್ತಾರವಾಗಿ ಇಡಬೇಕೆಂಬುವರು ಬೇಕಾದರೆ ಆ ನಮೂನೆಯಲ್ಲಿಡಬಹುದು.

ನಗದು ಲೇವಾದೇವಿ ನಡಿಸಿದಾಗ ಆಸಾಮಿಗಳಿಗೂ ವರ್ತಕನಿಗೂ ಮುಂದಕ್ಕೆ ಯಾವುದೊಂದು ಸಂಬಂಧವೂ ಉಳಿದಿರುವುದಿಲ್ಲವಾದುದರಿಂದ ಅವರ ಹೆಸರನ್ನು ಬರೆಯುವುದರಲ್ಲಿ ತಕ್ಕ ಪ್ರಯೋಜನವಿಲ್ಲ. ಆದರೆ ಬರೆದುಕೊಂಡರೆ ದೋಷವೇನೂ ಇಲ್ಲ.

15ನೇ ತಾರೀಖಿನಲ್ಲಿ ದಳ್ಳಾಳಿ ಮಾರಾಟಕ್ಕೆ ಬಂದ ರಾಗಿಯನ್ನು ಜಮೆ ಕಟ್ಟಿಕೊಂಡಿದೆ. ಅದನ್ನು ನಗದು ಅಥವಾ ಜಿನಸಿಯ ಜಮೆಯ ಸಾಲಿಗೆ ಬರೆಯದೆ ಇರುವುದಕ್ಕೆ ಕಾರಣವೇನೆಂದರೆ, ಆ ಮಾಲು ಸಿಂಗೇಗೌಡರದಾಗಿಯೇ ಇರುತ್ತದೆ: ಕ್ರಯ ನಿಷ್ಕರ್ಷೆಯಾಗಿಲ್ಲ; ಮಾರಿದರೆ ಹಣ ಕೊಡಬೇಕು, ಇಲ್ಲದಿದ್ದರೆ ರಾಗಿಯೇ ವಾಪಸು ಕೊಡತಕ್ಕದ್ದು. ಕೆಲವರು ಇಂತಾದ್ದನ್ನು ಲೆಕ್ಕದಲ್ಲಿ ಬರೆಯುವುದೇ ಇಲ್ಲ; ಇದು ಶುದ್ಧ ತಪ್ಪು. ಸರಿಯಾದ ವರ್ತಕನು ಯಾವುದನ್ನು ಕೊಟ್ಟರೂ ತೆಗೆದುಕೊಂಡರೂ ಅದಕ್ಕೆಲ್ಲಾ ಸರಿಯಾದ ಲೆಕ್ಕದ ದಾಖಲೆಯನ್ನಿಟ್ಟುಕೊಂಡೇ ಇರಬೇಕು.

29ನೇ ತಾರೀಖಿನಲ್ಲಿ ಈ ರಾಗಿಯಲ್ಲಿ ೩-೦ ಪಲ್ಲವನ್ನು ಲಿಂಗಪ್ಪನವರಿಗೆ ಸಾಲಕ್ಕೆ ಮಾರಿದೆ. ಹಣ ಬರದೆ ಇದ್ದರೂ ಅದಕ್ಕೆ ಸಿಂಗೇಗೌಡರಿಗೆ ಈ ವರ್ತಕನೇ ಜವಾಬ್ದಾರನಾದುದರಿಂದ, ಆ ರಾಗಿಯು ಆದಿನ ಸಿಂಗೇಗೌಡನಿಂದ ಈ ವರ್ತಕನಿಗೆ ದಳ್ಳಾಳಿ ಮಜಾ ಹೋಗಿ ನಿಂತ ಮೊಬಲಗಿಗೆ ಕ್ರಯವಾದಂತೆ ಆಗುವುದು. ಆದ್ದರಿಂದ ಅದು ಸಿಂಗೇಗೌಡರಿಂದ ಜಮೆ ಬಂದಂತೆ ದಾಖಲ್ಮಾಡಲ್ಪಟ್ಟಿದೆ. ಅದರ ಬೆಲೆಗೆ ವರ್ತಕನು ತಾನು ಜವಾಬ್ದಾರನಾಗದಿದ್ದರೆ, ಅದಕ್ಕೋಸ್ಕರ ಬೇರೆ ಲೆಕ್ಕವನ್ನಿಡಬೇಕು.

ಲೆಕ್ಕದಲ್ಲಿ 'ಇಂತವರಿಗೆ' ಎಂದರೆ ಅವರಿಗೆ ಕೊಟ್ಟ ಖರ್ಚೆಂದೂ, 'ಅವರಿಂದ' ಎಂದರೆ ಅವರಿಂದ ಬಂದ ಜಮೆ ಎಂದೂ ತಿಳಿದುಕೊಳ್ಳುವಂತೆ ಬರೆಯಬೇಕು.

ರೋಜಿನಲ್ಲಿ ಬರೆದಿರುವವುಗಳನ್ನು ಎತ್ತಿ ವರ್ಗಕ್ಕೆ ಬರೆದುಕೊಳ್ಳುವಾಗ ಯಾವ ಹೆಸರಿನ ವರ್ಗಕ್ಕೆ ಹೋಗಬೇಕೋ ಆ ಹೆಸರು ಮೊದಲು ಬರುವಂತೆ ವಿಂಗಡಿಸಿ ಬರೆಯಬೇಕು. ಮತ್ತು ಪ್ರತಿ ಸಂಗತಿಯಲ್ಲಿಯೂ ಆ ಹೆಸರು ಬೇಗ ಕಣ್ಣಿಗೆ ಬೀಳುವಂತೆ ಅದನ್ನು ಸಾಲಿನಿಂದ ಒಳಕ್ಕಾಗಲಿ ಹೊರಕ್ಕಾಗಲಿ ಒತ್ತಿ ಬರೆಯುವುದು ಮೇಲು.

## ೪.

## ವರ್ಗದ ನಮೂನೆ.

### ಆಲೂರು ಬೋರಣ್ಣನವರ ಅಂಗಡಿಯ ವರ್ಗದ ಬುಕ್ಕು.

### ೧೮೯೦ನೇ ಇಸವಿಯ ಜನವರಿಯ ಲಾಗಾಯಿತು.

ಬಸವಣ್ಣನವರ ವರ್ಗ

| ನಗದು ಜಮ | | | ಜಿನಸಿ ಜಮ | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ | ರೂ. | ಆ. | ಪೈ | | ರೂ. | ಆ. | ಪೈ. | ರೂ. | ಆ | ಪೈ. |
| | | | | | | ಜನವರಿ೧ನೇತಾ. ಖರ್ಚು ಅಕ್ಕಿ ೪ ಪಲ್ಲ (ರೋ. ೧) | ೪೨ | ೦ | ೦ | | | |
| | | | | | | ೬-೧-೯೦ ಖರ್ಚು ರಾಗಿ ೫೦ ಪಲ್ಲ ( ) | ೧೬೨ | ೮ | ೦ | | | |
| ೧೫೦ | ೦ | ೦ | | | | ೨೭-೧-೯೦. ಜಮಾ ನಗದು ( ) | | | | | | |
| | | | | | | ೨೮-೧-೯೦. ಖರ್ಚು ಅಕ್ಕಿ ೫ ಪಲ್ಲ ( ) | ೬೦ | ೦ | ೦ | | | |
| ೧೫೦ | ೦ | ೦ | | | | | | | | | | |
| ೧೧೪ | ೮ | ೦ | | | | ಮುಂದಿನವರ್ಗಕ್ಕೆ ಖರ್ಚು | | | | | | |
| ೨೬೪ | ೮ | ೦ | | | | | ೨೬೪ | ೮ | ೦ | | | |

ಲಿಂಗಪ್ಪನವರ ವರ್ಗ.

| ನಗದು ಜಮ | | | ಜಿನಸಿ ಜಮ | | | | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ. | ರೂ. | ಆ. | ಪೈ. | | ರೂ. | ಆ. | ಪೈ. | ರೂ. | ಆ. | ಪೈ. |
| | | | | | | ೫-೧-೯೦ ಖರ್ಚು ರಾಗಿ ೧೬ ಪಲ್ಲ ( ) | ೫೪ | ೦ | ೦ | | | |
| | | | | | | ೬-೧-೯೦ ಖರ್ಚು ಅಕ್ಕಿ ೧೦ ಪಲ್ಲ ( ) | ೮೭ | ೮ | ೦ | | | |
| | | | ೨೨೧ | ೦ | ೦ | ೧೬-೧-೯೦ ಜಮ ಅಕ್ಕಿ ೨೦ ಪಲ್ಲ ( ) | | | | | | |
| | | | | | | ೨೯-೧-೯೦ ಖರ್ಚು ರಾಗಿ ೩೨ ಪಲ್ಲ ( ) | ೧೨೦ | ೦ | ೦ | | | |
| | | | ೧೦೦ | ೦ | ೦ | ೩೧-೧-೯೦ ಜಮ ನಗದು ( ) | | | | | | |

| ನಗದು ಜಮ | | | ಜಿನಸಿ ಜಮ | | | ರಾಮಯ್ಯನವರ ವರ್ಗ | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ | ಪೈ. | ರೂ. | ಆ. | ಪೈ | | ರೂ. | ಆ. | ಪೈ. | ರೂ. | ಆ. | ಪೈ |
| | | | | | | ೫-೧-೯೦ ಖರ್ಚು ಅಕ್ಕಿ ಪಲ್ಲ ೩ | ೨೮ | ೦ | ೦ | | | |
| ೨೦ | ೦ | ೦ | | | | ೨೫-೧-೯೦ ಜಮ ನಗದು ( ) | | | | | | |
| | | | | | | ೨೭-೧-೯೦ ಖರ್ಚು ನಗದು ( ) | | | | ೨೫ | ೦ | ೦ |
| | | | | | | ೩೦-೧-೯೦ ಖರ್ಚು ನಗದು ( ) | | | | ೧೦೦ | ೦ | ೦ |
| ೭ | ೮ | ೦ | | | | ಜಮ ನಗದು ( ) | | | | | | |

| ನಗದು ಜಮ | | | ಜಿನಸಿ ಜಮ | | | ಸಿಂಗೇಗೌಡರ ವರ್ಗ | ಜಿನಸಿ ಖರ್ಚು | | | ನಗದು ಖರ್ಚು | | |
|---|---|---|---|---|---|---|---|---|---|---|---|---|
| ರೂ. | ಆ. | ಪೈ | ರೂ. | ಆ. | ಪೈ. | | ರೂ. | ಆ. | ಪೈ. | ರೂ. | ಆ | ಪೈ. |
| | | | | | | ೬-೧-೯೦ ಖರ್ಚು ಅಕ್ಕಿ ೪ ಪ. ( ) | ೩೯ | ೦ | ೦ | | | |
| | | | | | | ೧೫-೧-೯೦ ಜಮ ದಳ್ಳಾಳಿ ಬಿಕರಿಗೆರಾಗಿ ಪ. ೧೦೦ ( ) | | | | | | |
| ೨೪೮ | ೦ | ೦ | | | | ೨೬-೧-೯೦ ಜಮ ದಳ್ಳಾಳಿ ರಾಗಿ ಪೈಕಿ ನಗದು ಬಿಕರಿಆದಬಗೆ ( ) | | | | | | |
| | | | | | | ೨೮-೧-೯೦ ಖರ್ಚು ನಗದು ( ) | | | | ೧೭೫ | ೦ | ೦ |
| | | | ೧೧೬ | ೦ | ೦ | ೨೯-೧-೯೦ ಜಮ ದಳ್ಳಾಳಿರಾಗಿ ಪ ೩೨ ( ) | | | | | | |

| ಬೋರಣ್ಣನವರ ಸ್ವಂತ ವರ್ಗ. | | | | | | | | | | | | |
|---|---|---|---|---|---|---|---|---|---|---|---|---|
| ನಗದು ಜಮ | | | ಜಿನಸಿ ಜಮ | | | | ಜಿನಸಿ ಖರ್ಚು | | | ನಗದು ಖರ್ಚು | | |
| ರೂ. | ಆ. | ಪೈ. | ರೂ. | ಆ. | ಪೈ. | | ರೂ. | ಆ. | ಪೈ | ರೂ. | ಆ. | ಪೈ. |
| | | | ೯೦೦ | ೦ | ೦ | ೧-೧-೯೦ ಜಮ ಬಂಡವಾಳದ ಸರಕು ( ) | | | | | | |
| ೫೦೦ | ೦ | ೦ | | | | ಜಮ ಬಂಡವಾಳ ನಗದು ( ) | | | | | | |
| ೩೩ | ೦ | ೦ | | | | ನಗದು ಬಿಕರಿ ಅಕ್ಕಿ ಪಲ್ಲ ೪ ( ) | ೩೩ | ೦ | ೦ | | | |
| ೬೮ | ೦ | ೦ | | | | ೫-೧-೯೦ ನಗದು ಬಿಕರಿ ( ) | ೬೮ | ೦ | ೦ | | | |
| ೧೬ | ೪ | ೦ | | | | ೬-೧-೯೦ ನಗದು ಬಿಕರಿ ( ) | ೧೬ | ೪ | ೦ | | | |
| | | | | | | ೧೫-೧-೯೦ ಖರ್ಚು ನಗದು ( ) | | | | ೫೦ | ೦ | ೦ |
| | | | | | | ಖರ್ಚು ಅಕ್ಕಿ ೨ಪ. | ೨೨ | ೦ | ೦ | | | |
| | | | ೧೦೫ | ೦ | ೦ | ನಗದು ಕೊಂಡದ್ದು ಅಕ್ಕಿ ( ) | | | | ೧೦೫ | ೦ | ೦ |
| ೧೮೦ | ೦ | ೦ | | | | ೧೬-೧-೯೦ ನಗದು ಬಿಕರಿ ಅಕ್ಕಿ ( ) | ೧೦೮ | ೦ | ೦ | | | |
| ೮ | ೦ | ೦ | | | | ೨೬-೧-೯೦ ಜಮ ದಲ್ಲಾಳಿ ( ) | | | | | | |
| ೩ | ೧೨ | ೦ | | | | ೨೯-೧-೯೦ ಜಮ ದಲ್ಲಾಳಿ ( ) | | | | | | |
| | | | | | | ೩೦-೧-೯೦ ಖರ್ಚು ಅಂಗಡಿ ಬಾಡಿಗೆ( ) | | | | ೨೭ | ೦ | ೦ |
| ೧೬೦ | ೦ | ೦ | | | | ೩೧-೧-೯೦ ನಗದುಬಿಕರಿ ಅಕ್ಕಿ ಪ.೧೫ಕ್ಕೆ | ೧೬೦ | ೦ | ೦ | | | |
| | | | | | | ಖರ್ಚು ಅಕ್ಕಿ ( ) | ೧೦ | ೦ | ೦ | | | |

ವರ್ಗದಲ್ಲಿ ರೋಜು ಬುಕ್ಕಿನಲ್ಲಿರುವಷ್ಟು ತಪ್ಸೀಲನ್ನು ಬರೆಯುವ ಕೆಲಸವಿಲ್ಲ. ರೋಜಿನಲ್ಲಿ ನೋಡಿಕೊಳ್ಳುವುದಕ್ಕೆ ಸುಲಭವಾಗಿರುವಂತೆ ಪಕ್ಕದಲ್ಲಿ ಈ ಸಂಗತಿಯು ಅದರಲ್ಲಿ ಯಾವ ಪುಟದಲ್ಲಿದೆಯೋ ಆ ಪುಟದ ಸಂಖ್ಯೆಯನ್ನು ಬರೆಯಬೇಕು. (ಹೇಗೆಂದರೆ–ರೋ. 1–ಎಂದರೆ ರೋಜು ಬುಕ್ಕಿನಲ್ಲಿ 1ನೇ ಪುಟ ಎಂದರ್ಥ.

ರೋಜು ಬುಕ್ಕಿನಲ್ಲಿರುವ ಸಂಗತಿಗಳೆಲ್ಲಾ ವರ್ಗಕ್ಕೆ ದಾಖಲಾಗಿವೆ ಎಂದು ನಿಶ್ಚಯಪಡಿಸಿಕೊಳ್ಳುವುದಕ್ಕೆ ವರ್ಗದಲ್ಲಿ ಬರೆದ ಕೂಡಲೆ ರೋಜುವಾರ ಬುಕ್ಕಿನಲ್ಲಿ ಆ ಸಂಗತಿಯ ಪಕ್ಕದಲ್ಲಿ ಯಾವದಾದರೂ ಗುರ್ತು ಮಾಡಬೇಕು. ಇದನ್ನು ಸೂಚಿಸುವುದಕ್ಕೆ ಎಡಗಡೆ ಪಕ್ಕದಲ್ಲಿ ಹೀಗೆ ಗೀಟು (–) ಹೊಡೆಯುವುದು ವಾಡಿಕೆಯಾಗಿದೆ.

ವರ್ಗದಿಂದ ಮುಖ್ಯ ಪ್ರಯೋಜನವು ಆಸಾಮಿಗಳ ಲೆಕ್ಕವನ್ನು ಸರಿಯಾಗಿ ತಿಳಿದುಕೊಳ್ಳುವುದು. ಆದ್ದರಿಂದ ರೋಜ್ ಬುಕ್ಕಿನ ಲೇವಾದೇವಿಗಳನ್ನೆಲ್ಲಾ ಒಂದನ್ನೂ ಬಿಡದೆ ಇದಕ್ಕೆ ಎತ್ತಿ ಬರೆದುಕೊಳ್ಳಬೇಕು. ಜಮ ಖರ್ಚು ಎರಡುಕಡೆಯನ್ನೂ ತೇರೀಜು ಮಾಡಿದರೆ ಜಮ ಹೆಚ್ಚಾಗಿದ್ದು ಖರ್ಚು ಕಡಮೆಯಾಗಿದ್ದರೆ, ಹೆಚ್ಚಾದ ಮೊಬಲಗು ಅಂಗಡಿಯಿಂದ ಆಸಾಮಿಗೆ ಬಾಕಿ ಸಲ್ಲತಕ್ಕದ್ದಾಗಿರುವುದು, ಖರ್ಚು ಬಾಬು ಹೆಚ್ಚಾಗಿದ್ದರೆ ಅಷ್ಟು ಆಸಾಮಿಯಿಂದ ಅಂಗಡಿಗೆ ಬಾಕಿ ಬರಬೇಕೆಂದು ಅರ್ಥವಾಗುವುದು.

ಅಂಗಡಿಯ ಲೆಕ್ಕದೊಂದಿಗೆ ತನ್ನ ಸ್ವಂತ ಜಮಾ ಖರ್ಚುಗಳನ್ನು ಸೇರಿಸಿಕೊಂಡರೆ, ಲೆಕ್ಕ ಕ್ರಮವಾಗಿ ತಿಳಿಯದೆ ಅಂಗಡಿಯಲ್ಲಿ ಬಂದ ಲಾಭ ನಷ್ಟಗಳು ಇಷ್ಟೆಂದು ತಿಳಿಯುವುದಿಲ್ಲ. ಆದ್ದರಿಂದ ಸ್ವಂತಕ್ಕೆ ತೆಗೆದುಕೊಂಡದ್ದು ಮುಂತಾದದ್ದು ಬೇರೇ ತಿಳಿಯುವಂತೆ, ಲೆಕ್ಕದಲ್ಲಿ ದಾಖಲ್ಮಾಡಿ ಅದಕ್ಕೆ ಬೇರೇ ವರ್ಗ ಬರೆಯಬೇಕು.

ನಗದು ಮಾರಾಟ ಮತ್ತು ಕೊಳ್ಳುವಿಕೆಯನ್ನು ಸ್ವಂತ ವರ್ಗದಲ್ಲಿ ದಾಖಲ್ಮಾಡುವಾಗ, ಜಿನಸಿ ಹೋಗಿ ಹಣ ಜಮ ಬರುವುದು ಅಥವಾ ಹಣ ಹೋಗಿ ಜಿನಸಿ ಜಮ ಬರುವುದು. ಆದ್ದರಿಂದ ವರ್ಗದಲ್ಲಿ ಜಮ ಖರ್ಚು ಎರಡನ್ನೂ ಒಂದೇ ಸ್ಥಳದಲ್ಲಿ ತೋರಿಸಬೇಕು ಆದರೆ ನಗದಿಗೆ ಬೇರೇ ಜಿನಸಿಗೆ ಬೇರೇ ವರ್ಗವನ್ನಿಟ್ಟರೆ ಇಂತಾ ಬಾಬುಗಳನ್ನು ಅಲ್ಲಿ ಬರೆಯಬೇಕು. ಸ್ವಂತ ಉಪಯೋಗಕ್ಕೆ ತೆಗೆದುಕೊಳ್ಳುವುದು

ಅಥವಾ ಅಂಗಡಿಗೆ ಹೆಚ್ಚಾಗಿ ಹಣ ಹಾಕುವುದು ಇಂತವುಗಳನ್ನು ಮಾತ್ರ ಸ್ವಂತ ವರ್ಗಕ್ಕೆ ಬರೆಯಬೇಕು. ಮತ್ತು ಇಂತಾ ವರ್ಗಗಳು ಬೇರೇ ಇಲ್ಲದಿದ್ದರೂ ಜಿನಸಿ ಜಮಾಖರ್ಚಿನ ಬಾಬಿನಲ್ಲಿ ಖರ್ಚು ಜಮ ಹಾಕದೆ ನಗದು ಬಾಬಿಗೆ ಮಾತ್ರ ಹಾಕಿದರೂ ಸಾಕಾಗಿರಬಹುದು.

ದಳ್ಳಾಳಿ ಬಂದುದನ್ನು ಈ ಲೆಕ್ಕದಲ್ಲಿ ಐನ್ ಜಮೆಯಂತೆ ತೋರಿಸಿದೆ ಬೇಕಾದರೆ ಅದನ್ನೂ ಸೇರಿಸಿ ಒಟ್ಟು ಮೊಬಲಗನ್ನು ಆಸಾಮಿಯ (ಅಂದರೆ ಇಲ್ಲಿ ಸಿಂಗೇಗೌಡನ) ಲೆಕ್ಕಕ್ಕೆ ಜಮ ಕಟ್ಟಿ, ದಳ್ಳಾಳಿಯನ್ನು ಆತನ ಲೆಕ್ಕಕ್ಕೆ ಖರ್ಚು ಹಾಕಿಕೊಳ್ಳಬಹುದು. ಹಾಗೆ ಮಾಡಿದರೆ ಅದನ್ನು ಸ್ವಂತ ವರ್ಗದಲ್ಲಿ ಬೇರೆ ಜಮ ಕಟ್ಟಕೂಡದು. ಯಾಕೆಂದರೆ ಇತರರಿಗೆ ಖರ್ಚು ಬಿದ್ದಿರುವುದೆಲ್ಲಾ ಸ್ವಂತಕ್ಕೆ ಜಮ ಬಂದಂತೆಯೇ ಅರ್ಥವಾಗುವುದು.

ನಗದು ಬಂದ ಆದಾಯ ನಷ್ಟ ಅಂದರೆ ತನಗೆ ಬಂದ ದಳ್ಳಾಳಿ ಅಥವಾ ಬಡ್ಡಿ, ತಾನು ತೆರುವ ದಳ್ಳಾಳಿ ಮುಂತಾದದ್ದು ಬೇರೇ ತಿಳಿಯಬೇಕಾದರೆ ಅದಕ್ಕೋಸ್ಕರ ಕೆಳಗೆ ತೋರಿಸುವ ಮೇರೆಗೆ ಬೇರೆ ವರ್ಗ ಬರೆದರೆ ಮೇಲು. ಹಾಗೆಯೇ ಕೆಳಗೆ ತೋರಿಸಿರುವಂತೆ ಬೇರೆ ಬೇರ ಜಿನಸಿಗಳಿಗೂ ವರ್ಗ ಬರೆಯುವುದು.

ಐನ್ ಆದಾಯವೆಚ್ಚದ ವರ್ಗ.

| ರೂ. | ಆ. | ಪೈ. | | ರೂ. | ಆ. | ಪೈ. |
|---|---|---|---|---|---|---|
| ೮ | ೦ | ೦ | ೨೬—೧—೯೦: ಜಮ ಸಿಂಗೇಗೌಡರ ರಾಗಿ ಬಿಕರಿ ಬಾಬತು ದಳ್ಳಾಳಿ ( ) | | | |
| ೩ | ೧೨ | ೦ | ೨೯—೧—೯೦: ಜಮ. ಸಿಂಗೇಗೌಡರ ರಾಗಿ ಬಿಕರಿ ಬಾಬತು ( ) | | | |
| ೨ | ೦ | ೦ | ೩೦—೧—೯೦: ಜಮ. ರಾಮಯ್ಯನವರಿಂದ ಬಡ್ಡಿ ಬಾಬತು ( ) | | | |
| | | | ಖರ್ಚು. ಅಂಗಡಿ ಬಾಡಿಗೆ.. | ೨೦ | ೦ | ೦ |

## ನಗದು ವರ್ಗ.

| ರೂ. | ಆ. | ಪೈ. | | ರೂ. | ಆ. | ಪೈ. |
|---|---|---|---|---|---|---|
| ೫೯೦ | ೦ | ೦ | ೧—೧—೯೦. ಜಮು ಬಂಡವಾಳದ ಬಾಬತು | | | |
| ೩೩ | ೦ | ೦ | ಜಮು ಅಕ್ಕಿ ಬಿಕರಿ | | | |
| ೬೮ | ೦ | ೦ | ೫—೧—೯೦. ಜಮು. ರಾಗಿ ಅಕ್ಕಿ ಬಿಕರಿ ( ) | | | |
| ೧೬ | ೪ | ೦ | ೬—೧—೯೦. ಜಮು. ಬಿಕರಿ ಬಾಬತು ( ) | | | |
| | | | ೧೫—೧—೯೦. ಖರ್ಚು. ಸ್ವಂತಕ್ಕೆ ( ) | ೫೦ | ೦ | ೦ |
| ೧೯೮ | ೦ | ೦ | ೧೬—೧—೯೦. ಜಮು. ಬಿಕರಿ ಬಾಬತು. ( ) | | | |
| ೨೦ | ೦ | ೦ | ೨೫—೧—೯೦. ಜಮು. ರಾಮಯ್ಯನವರ ಬಾಬತು. ( ) | | | |
| ೨೫೬ | ೦ | ೦ | ೨೬—೧—೯೦ ಜಮು ರಾಗಿ ಬಿಕರಿ ಬಾಬತು ದಳ್ಳಾಳಿ ಸಹಿತ. | | | |
| | | | ೨೭—೧—೯೦. ಖರ್ಚು. ರಾಮಯ್ಯನವರಿಗೆ( ) | ೨೫ | ೦ | ೦ |
| ೧೫೦ | ೦ | ೦ | ಜಮು. ಬಸವಣ್ಣನವರಿಂದ ( ) | | | |
| | | | ೨೮—೧—೯೦. ಖರ್ಚು. ಸಿಂಗೇಗೌಡರಿಗೆ ( ) | ೧೭೫ | ೦ | ೦ |
| | | | ೩೦—೧—೯೦. ಖರ್ಚು. ರಾಮಯ್ಯನವರಿಗೆ( ) | ೧೦೦ | ೦ | ೦ |
| ೭ | ೮ | ೦ | ಜಮು ರಾಮಯ್ಯನವರಿಂದ( ) | | | |
| | | | ಖರ್ಚು. ಅಂಗಡಿ ಬಾಡಿಗೆ ( ) | ೨೦ | ೦ | ೦ |
| ೧೦೦ | ೦ | ೦ | ೩೧—೧—೯೦. ಜಮು ಲಿಂಗಪ್ಪನವರಿಂದ ( ) | | | |
| ೧೬೦ | ೦ | ೦ | ಜಮು. ಬಿಕರಿ ಬಾಬತು ( ) | | | |

## ಜಿನಸಿಯು ವರ್ಗ—ಸಣ್ಣಕ್ಕಿ.

| ರೂ. | ಆ | ಪೈ. | | ರೂ. | ಆ. | ಪೈ. |
|---|---|---|---|---|---|---|
| | | | ೧—೧—೯೦. ಬಂಡವಾಳ ಅಕ್ಕಿ ಪ. ೨೦ಕ್ಕೆ( ) | ೨೦೦ | ೦ | ೦ |
| ೪೨ | ೦ | ೦ | ಬಿಕರಿ ಪಲ್ಲ ೪ಕ್ಕೆ ( ) | | | |
| ೫೩ | ೦ | ೦ | ೫—೧—೯೦. ಬಿಕರಿ ಪಲ್ಲ ೫ಕ್ಕೆ. ( ) | | | |
| ೨೨ | ೦ | ೦ | ೬—೧—೯೦. ಬಿಕರಿ ಪಲ್ಲ ೨ಕ್ಕೆ. ( ) | | | |
| ೨೨ | ೦ | ೦ | ೧೫—೧—೯೦. ಸ್ವಂತ ಖರ್ಚು ಪ ೨ಕ್ಕೆ ( ) | | | |
| | | | ಕೊಂಡುಕೊಂಡ ಪ ೩೦ಕ್ಕೆ( ) | ೩೨೫ | ೦ | ೦ |
| ೬೦ | ೦ | ೦ | ೨೨—೧—೯೦. ಬಿಕರಿ ಪಲ್ಲ ೫ಕ್ಕೆ. ( ) | | | |
| ೧೧೫ | ೦ | ೦ | ೩೧—೧—೯೦ ಬಿಕರಿ ಪಲ್ಲ ೧೦ಕ್ಕೆ. ( ) | | | |

ಈ ಮೂರು ಮಾರ್ಗಗಳಲ್ಲಿಯೂ ನಗದು ಜಮಾ ಖರ್ಚುಗಳಿಗೆ ಮಾತ್ರ ಎರಡು ಸಾಲಿದ್ದರೆ ಸಾಕು ಜಿನಸಿ ಜಮಾ ಖರ್ಚಿನ ಮಾತನ್ನು ಇಲ್ಲಿ ಬರೆಯಬೇಕಾಗುವುದಿಲ್ಲ.

ಮೇಲೆ ಕೊನೆಯಲ್ಲಿ ತೋರಿಸುವ ಮೇರೆಗೆ ಅಂಗಡಿಯಲ್ಲಿರುವ ಬೇರೆ ಬೇರೆ ಜಿನಸಿಗಳಿಗೆ ಒಂದೊಂದು ವರ್ಗವನ್ನು ಬರೆಯಬಹುದು ಆದರೆ ಅನೇಕ ಪದಾರ್ಥಗಳಲ್ಲಿ ವ್ಯಾಪಾರ ಮಾಡುವವರು ಹೀಗೆ ಬರೆದುಕೊಳ್ಳಬೇಕಾದರೆ ಬಹಳ ತೊಂದರೆಯುಂಟಾಗುವುದು. ಅದಕ್ಕೆ ತಕ್ಕ ಪ್ರಯೋಜನವೇನೂ ಇಲ್ಲ ಸಾಧ್ಯವಾದವುಟ್ಟಿಗ ವರ್ಗವನ್ನಿಟ್ಟರೆ, ಯಾವ ಯಾವ ಸರಕು ಅಂಗಡಿಯಲ್ಲಿಷ್ಟಿರಬೇಕೋ, ಅದರಲ್ಲಿ ಆದಾಯವಾಗಲಿ ನಷ್ಟವಾಗಲಿ ಎಷ್ಟುವುಟ್ಟಿಗೆ ಬಂದಿರುವುದೋ ಎಂಬ ಸಂಗತಿಯನ್ನು ಸುಲಭವಾಗಿ ತಿಳಿದುಕೊಳ್ಳುವುದಕ್ಕೆ ಅವಕಾಶವಾಗುವುದು.

47. ದೊಡ್ಡ ದೊಡ್ಡ ಅಂಗಡಿಗಳಲ್ಲಿ ಮೇಲೆ ತೋರಿಸುವ ಸಂಗತಿಗಳನೆಲ್ಲಾ ಅನೇಕ ಪುಸ್ತಕಗಳಲ್ಲಿ ಬರೆಯುತಾರೆ. ವಿಶೇಷ ವ್ಯಾಪಾರ ನಡೆಯುವಾಗ ಕ್ರಮವಾದ ಲೆಕ್ಕದಲ್ಲೆಲ್ಲಾ ಬರೆದುಕೊಳ್ಳುವುದಕ್ಕೆ ವ್ಯವಧಾನವಿಲ್ಲದೆಯೋ ಬರೆಯುವುದು ಸರಿಯಾಗಿ ತಿಳಿಯದರಿಂದಲೋ ನಡೆಯುವ ಲೇವಾದೇವಿಗಳನ್ನು ಬೇರೆ ಗುರ್ತು ಹಾಕಿಕೊಳ್ಳಬೇಕಾಗುತದೆ. ಇಂತಾ ಪುಸ್ತಕಕ್ಕೆ 'ಕಚ್ಚಾರೋಜ್' ಎಂದು ಹೆಸರು ವಾಡಿಕೆಯಾಗಿದೆ. ನಗದು ಲೇವಾದೇವಿಗಳನ್ನು ಮಾತ್ರ 'ನಗದೀರೋಜ್' ಎಂಬ ಒಂದು ಪುಸ್ತಕದಲ್ಲಿಯೂ, ಜಿನಸಿಯ ಜಮಾ ಖರ್ಚನ್ನು 'ಜಿನಸಿಯ ರೋಜ್' ಎಂಬ ಮತ್ತೊಂದು ಬುಕ್ಕಿನಲ್ಲಿಯೂ ಬರೆಯುತಾರೆ. ಮತ್ತು ಕೆಲವು ಅಂಗಡಿಗಳಲ್ಲಿ ಇಂಗ್ಲೀಷ್ ವರ್ತಕರ ಪದ್ಧತಿಯನ್ನನುಸರಿಸಿ, ಜಿನಸಿಯನ್ನು ಸಾಲಕ್ಕೆ ಮಾರುವುದನ್ನು ಮಾತ್ರ 'ಡೇ ಬುಕ್' ಎಂಬ ಒಂದರಲ್ಲಿಯೂ ತಮಗೆ ಜಿನಸಿಯು ಜಮಾಬರುವುದೆಲ್ಲಾ 'ಇನ್‌ವಾಯಿಸ್ ಬುಕ್' ಎಂಬ ಮತ್ತೊಂದು ಬುಕ್ಕಿನಲ್ಲಿಯೂ ಇಟ್ಟುಕೊಂಡಿರುತಾರೆ. ಅಥವಾ ತಮ್ಮ ಅಂಗಡಿಗೆ ಜಮ ಬರುವ ಜಿನಸಿಗಳ ಮೊತ್ತವನ್ನು ಮಾತ್ರ ಒಟ್ಟಿಗೆ ರೋಜು ಬುಕ್ಕಿನಲ್ಲಿ ಬರೆದುಕೊಂಡು ತಮಗೆ ಮಾಲು ಕೊಟ್ಟವರಿಂದ ಬಂದ ಪಟ್ಟಿಗಳನ್ನು ಬೇರೇ ಇಟ್ಟುಕೊಂಡಿರಬಹುದು.

48. ವ್ಯವಹಾರ ಬಿದ್ದಾಗ ಲೆಕ್ಕಗಳು ಎಷ್ಟು ಕ್ರಮವಾಗಿ ಇಡ ಲ್ಪಟ್ಟಿದ್ದರೆ ಅವು ಅಷ್ಟು ಹೆಚ್ಚಾದ ನಂಬುಗೆಗೆ ಅರ್ಹವಾಗಿರುವುವು. ತಮ್ಮ ಲೆಕ್ಕದ ಸಂಗತಿಗಳು ಕ್ರಮವಾಗಿಯೂ ಫಲಿತಾಂಶ ಸುಲಭವಾಗಿ ಕಾಣ ಬರುವಂತೆಯೂ ಇರತಕ್ಕದ್ದು ಸರಿಯಾದ ವರ್ತಕರಿಗೆಲ್ಲಾ ಅ ತ್ಯಾವಶ್ಯಕವಾದ ವಿಷಯು. ಇತರರಿಗೆ ಮೋಸಮಾಡಬೇಕೆಂದು ದುರಾ ಲೋಚನೆಯಿಂದ ನಡೆಯುವವರು ತಮ್ಮ ಲೆಕ್ಕಗಳನ್ನು ಇತರರಿಗೆ ಜೇ ವಾಳ ತಿಳಿಯದಂತೆ ತೊಟಕಾಗಿ ತಯಾರ್ಮಾಡಬೇಕೆಂದು ಕೋರುವರೇ ಹೊರತು, ನ್ಯಾಯವಾದ ಮಾರ್ಗದಲ್ಲಿ ಹೋಗುವವರಿಗೆ ಅದರಿಂದ ಯಾವ ಲಾಭವೂ ಇಲ್ಲ. ಲೆಕ್ಕದ ಬುಕ್ಕುಗಳನ್ನು ಬಿಚ್ಚಿ ಮಧ್ಯೆ ಹಾಳಗಳ ನ್ನು ಬದಲಾಯಿಸುವುದಕ್ಕೆ ಅವಕಾಶವಿಲ್ಲದೆ ಅವು ಭದ್ರವಾದ ರಟ್ಟುಗಳಿಂ ದ ಕಟ್ಟಲ್ಪಟ್ಟಿರಬೇಕು. ಹಾಳಗಳಿಗೆ ಮೊದಲೇ ಸರಿಯಾಗಿ ಪುಟ ಸಂಖ್ಯೆ ಯನ್ನು ಹಾಕಿರಬೇಕು. ತೊಗಲಿನ ರಟ್ಟುಕಟ್ಟಿ ದಪ್ಪ ಕಾಗದಗಳನ್ನು ಹಾಕಿ ಮಾರುವ ಬುಕ್ಕುಗಳು ಇದಕ್ಕೆ ಬಹಳ ಅನುಕೂಲವಾದುವು. ಅವುಗಳಿಗೆ ಸರಿಯಾಗಿ ಗೆರೆಗಳನ್ನು ಹಾಕಿ ಅಚ್ಚಿನ ಅಂಕಿಗಳಿಂದ ಹಾಳ ಗಳ ಸಂಖ್ಯೆಯನ್ನು ಮೊದಲೇ ಹಾಕಿರುವವು ಇನ್ನೂ ಮೇಲಾಗಿರು ವವು.

49. ಇಂಗ್ಲೀಷ್ ವರ್ತಕರ ಅಂಗಡಿಗಳಲ್ಲಿ ಸಾಧಾರಣವಾಗಿ ವರ್ಷಕ್ಕೊಂದು ಸಲ ಸರಕಿನ ಝಡ್ತಿಯನ್ನು ಮಾಡುತ್ತಾರೆ. ಹೀಗೆ ಮಾಡುವುದರಿಂದ ವರ್ತಕನಿಗೆ ತನ್ನ ಸ್ಥಿತಿಯು ಚೆನ್ನಾಗಿ ಗೊತ್ತಾಗು ವುದು. ಅದರಿಂದ ಈ ಪದ್ಧತಿಯನ್ನನುಸರಿಸಿ ಆಗಾಗ ನಮ್ಮವರೂ ನಡಿಸುವುದರಲ್ಲಿ ಗುಣವುಂಟು. ಆದರೆ ದೊಡ್ಡ ದೊಡ್ಡ ಅಂಗಡಿಗಳಲ್ಲಿ ಮಾತ್ರ ಇದು ಅವಶ್ಯಕವಾಗಿರುವುದು.

50. ಮೇಲೆ ಹೇಳಿರುವ ಸಂಗತಿಗಳನ್ನೆಲ್ಲಾ ಚೆನ್ನಾಗಿ ಓದಿ ತಿಳಿ ದುಕೊಂಡವರಿಗೆ ಇತರ ಲೆಕ್ಕಗಳನ್ನು ಬರೆಯುವ ಮಾರ್ಗವನ್ನು ಗ್ರ ಹಿಸುವುದು ಕಷ್ಟವಾಗಿರಲಾರದು. ಇನ್ನು ಕೆಲವು ನಮೂನೆಗಳನ್ನು ಈ ಕೆಳಗೆ ಸೂಕ್ಷ್ಮವಾಗಿ ತೋರಿಸಿಡೆ.

## ೫.

## ಶಂಕರಶೆಟ್ಟಿಯ ಅಂಗಡಿಯ ಕಚ್ಚಾರೋಜ್ ಬುಕ್ಕು.

| ಜನವರಿ, ೧೮೯೦. | | ರೂ. | ಆ. | ಪೈ. |
|---|---|---|---|---|
| ೧ | ರಂಗಣ್ಣನವರಿಗೆ | | | |
| | ಕೊನ್ನಾರ್ಡು ಸೀರೆ ೧ಕ್ಕೆ ............ ೧೫—೬—೦ | | | |
| | ರವಿಕೆ ಕಣ ೪ ಕ್ಕೆ ............ ೧—೧೨—೦ | | | |
| | ಪಂಚೆ ಜೊತೆ ೧ ಕ್ಕೆ ............ ೫—೩—೬ | | | |
| | | ೨೨ | ೫ | ೬ |
| | ಇವರಿಂದ ಜಮು ............ | ೧೨ | ೦ | ೦ |
| | ರಾಮರಾಯರಿಗೆ | | | |
| | ಅಮಾನತ್ತು ಕಂಚೀ ಸೀರೆ ೧ ಕ್ಕೆ ............ ೧೨—೮—೦ | | | |
| | ಕೊನ್ನಾರ್ಡು ಸೀರೆ ೧ ಕ್ಕೆ ............ ೧೪—೩—೦ | | | |
| ೨ | ಕೆಂಪಯ್ಯನವರಿಗೆ | | | |
| | ನಗದು ಸಾಲ ............ | ೨೦ | ೦ | ೦ |
| | ರಾಮಪ್ಪನವರ ಹುಂಡಿ ಬಾಬತು | | | |
| | ರಾಜಾರಾಯರಿಗೆ ನಗದು ............ | ೨೧೦ | ೦ | ೦ |
| | ಲಿಂಗಪ್ಪನವರಿಂದ ನಗದು ಕೊಟ್ಟು ತೆಗೆದುಕೊಂಡ ಜವಳಿ | | | |
| | ನಿಂಬಾವಳಿ ಸೀರೆ ೧ಕ್ಕೆ ............ ೧೪—೦—೦ | | | |
| | ರೇಷ್ಮೆ ವಸ್ತ್ರಗಳು ೮ಕ್ಕೆ ............ ೧೪—೦—೦ | | | |
| | ಮುಂಗುಟಗಳು ೨ಕ್ಕೆ ............ ೫೦—೦—೦ | ೧೦೫ | ೦ | ೦ |
| | ರಂಗಯ್ಯನಿಂದ ಜವಳಿ ದಳ್ಳಾಳಿ ಮಾರಾಟಕ್ಕೆ ತೆಗೆದುಕೊಂಡದ್ದು. | | | |
| | ರುದ್ರಗಂಟಿ ಸೀರೆ ೧೨ | | | |
| | ಬುಗಡಿ ಅಂಚಿನ ಪಂಚೆ ಜೊತೆ ೧೦. | | | |

ಈ ಲೆಕ್ಕವನ್ನು ಬರೆಯುವುದರಲ್ಲಿ ಒಂದು ಆದಮೇಲೆ ಕಾಲಕ್ರಮದಲ್ಲಿ ಮತ್ತೊಂದು ಸಂಗತಿಯನ್ನು ಸುಮ್ಮನೆ ಬರೆದುಕೊಂಡು ಹೋಗುವುದೇ ಮುಖ್ಯವಾಗಿರುವುದು. ಜೆನಸಿಯ ಜಮಾ ಖರ್ಚು, ನಗದು ಜಮಾ ಖರ್ಚು, ಸಾಲ, ನಗದು ಬಿಕರಿ ಮುಂತಾದ ಎಲ್ಲಾ ಸಂಗತಿಗಳನ್ನೂ ಬೇರೆ ಬೇರೆ ವಿಂಗಡಿಸಬೇಕೆಂಬ ನಿರ್ಬಂಧವಿಲ್ಲದೆ ಬರೆದುಕೊಂಡು ಹೋಗಬೇಕು. ಕೆಲವರು ಸಾಲವಾಗಿ ನಗದಾಗಲಿ ಜೆನಸಿಯಾಗಲಿ ಕೊಡುವಾಗ ಈ ಲೆಕ್ಕದಲ್ಲಿ ತೆಗೆದುಕೊಳ್ಳುವವರಕೈಯಿಂದಲೇ ಅದನ್ನು ಬರಿಸುತ್ತಾರೆ. ಇದು ಒಳ್ಳೇ ಪದ್ಧತಿಯೇ; ಆದರೆ ಒಂದು ಸಲ ಹಾಗೆ ಮೊದಲು ಮಾಡಿದರೆ ಕೊನೆಯವರೆಗೂ ಹಾಗೆಯೇಮಾಡಬೇಕು. ಇಲ್ಲದಿದ್ದರೆ ಸಂದೇಹಾಸ್ಪದವಾಗುವುದು. ಅವರ ರುಜು ಹಾಕಿಸಿದರೆ ಒಂದು ಆಣೆಯ ಸ್ಟಾಂಪನ್ನು ಹಚ್ಚಿ ಅದರಮೇಲೆ ರುಜು ಹಾಕಿಸಿಕೊಳ್ಳುವುದು ಮೇಲು. ಇದಲ್ಲದೆ ಇನ್ನೂ ಒಂದು ಬುಕ್ಕಿನಲ್ಲಿ ಗುರ್ತುಹಾಕಿಕೊಂಡು ಅದರಿಂದ ಮೊದಲು ಕಚ್ಚಾರೋಜಿಗೆ ತರುವಾಗ ಪಕ್ಕಾರೋಜಿಗೆ ಬರೆದುಕೊಳ್ಳುವುದುಂಟು. ಹೀಗೆ ಲೆಕ್ಕಗಳನ್ನು ಸುಮ್ಮನೆ ಹೆಚ್ಚು ಮಾಡುವುದು ತಪ್ಪು.

## ೬.

## ನಗದಿ ಜಮಾ ಖರ್ಚು ಬುಕ್ಕು.

| ತಾರೀಖು | ಜಮ. | ರೂ. | ಆ. | ಪೈ. | ತಾರೀಖು | ಖರ್ಚು. | ರೂ. | ಆ. | ಪೈ. |
|---|---|---|---|---|---|---|---|---|---|
| | | | | | ೧ | ಖರ್ಚು ಇಲ್ಲ. | | | |
| ೧ | ನಗದು ಹಾಜರು. | ೫೦೦ | ೦ | ೦ | | ಮುಂದಿನ ತಾರೀಖಿಗೆ ಸಿಲ್ಕು........ | ೫೪೪ | ೦ | ೦ |
| | ನಗದು ಬಿಕರಿ.... | ೪೪ | ೦ | ೦ | | | ೫೪೪ | ೦ | ೦ |
| | | ೫೪೪ | ೦ | ೦ | ೫ | ಮುಂದಿನ ತಾರೀಖಿಗೆ ಸಿಲ್ಕು... | ೬೦೧ | ೦ | ೦ |
| ೫ | ಹಿಂದಿನ ಸಿಲ್ಕು. | ೫೪೪ | ೦ | ೦ | | | | | |
| | ನಗದು ಬಿಕರಿ .. | ೫೭ | ೦ | ೦ | ೬ | ಮುಂದಕ್ಕೆ ಸಿಲ್ಕು | ೬೧೩ | ೮ | ೦ |
| ೬ | ಹಿಂದಿನ ಸಿಲ್ಕು. | ೬೦೧ | ೦ | ೦ | ೧೫ | ಸ್ವಂತಕ್ಕೆ ತೆಗೆದು ಕೊಂಡದ್ದು.... | ೫೦ | ೦ | ೦ |
| | ನಗದು ಬಿಕರಿ.... | ೧೨ | ೮ | ೦ | | | | | |
| ೧೫ | ಹಿಂದಿನ ಸಿಲ್ಕು. | ೬೧೩ | ೮ | ೦ | | ಅಕ್ಕಿ ಕೊಂಡದ್ದು ಪಲ್ಲ ೧೦ಕ್ಕೆ.... | ೧೦೫ | ೦ | ೦ |
| ೧೬ | ಹಿಂದಿನ ಸಿಲ್ಕು. | ೪೫೮ | ೮ | ೦ | | | | | |
| | ನಗದು ಬಿಕರಿ ದಪ್ಪಕ್ಕಿ ಪಲ್ಲ. ೧೨ಕ್ಕೆ ....... | ೧೦೭ | ೦ | ೦ | | ಮುಂದಕ್ಕೆ ಸಿಲ್ಕು | ೪೫೮ | ೮ | ೦ |
| | | | | | | | ೬೧೩ | ೮ | ೦ |
| ೨೫ | ರಾಮಯ್ಯನವರಿಂದ........ | ೨೦ | ೦ | ೦ | | | | | |
| ೨೬ | ಸಿಂಗೇಗೌಡರ ಬಾಬತು ರಾಗಿ ಬಿಕರಿ ಪಲ್ಲ ೬೪ ಕ್ಕೆ........ | ೨೪೭ | ೦ | ೦ | ೨೩ | ರಾಮಯ್ಯನವರಿಗೆ ಸಾಲ.......... | ೨೫ | ೦ | ೦ |

| ಜನವರಿ ೧೮೯೦ | ಜಮು | ರೂ. | ಆ. | ಪೈ. | ಜನವರಿ ೧೮೯೦ | ಖರ್ಚು | ರೂ. | ಆ. | ಪೈ. |
|---|---|---|---|---|---|---|---|---|---|
| | ವಳ್ಕಿ............ | ೮ | ೪ | ೦ | ೨೮ | ಸಿಂಗೇಗೌಡರಿಗೆ ನಗದು..... | ೧೬೫ | ೦ | ೦ |
| ೨೬ | ಬಸವಣ್ಣನವರಿಂದ ಇವರ ಲೆಕ್ಕಕ್ಕೆ | ೧೫೦ | ೦ | ೦ | ೩೦ | ರಾಮಯ್ಯನವರಿಗೆ ಪತ್ರದ ಬಗೆ...... | ೧೦೦ | ೦ | ೦ |
| ೩೦ | ರಾಮಯ್ಯನವರಿಂದ ಪತ್ರದ ಬಡ್ಡಿ ಬಗೆ........ | ೬ | ೮ | ೦ | ೩೧ | ಅಂಗಡಿ ಬಾಡಿಗೆ........ | ೨೦ | ೦ | ೦ |
| ೩೧ | ಲಿಂಗಪ್ಪನವರಿಂದ, | ೧೦೦ | ೦ | ೦ | | | ೩೨೦ | ೦ | ೦ |
| | ನಗದು ಬಿಕರಿ ಸಣ್ಣಕ್ಕಿ ೧೦ ಪಲ್ಲ...... .. | ೧೧೫ | ೦ | ೦ | | ಮುಂದಿನ ತಿಂಗಳಿಗೆ ಸಿಲ್ಕು. | ೯೪೩ | ೧೨ | ೦ |
| | ನಗದು ಬಿಕರಿ ದಪ್ಪಕ್ಕಿ........ | ೪೨೧ | ೦ | ೦ | | | | | |
| | | ೧೨೬೩ | ೧೨ | ೦ | | | ೧೨೬೩ | ೧೨ | ೦ |

ಮೇಲೆ ತೋರಿಸಿರುವ ನಗದಿ ರೋಜ್ ಬುಕ್ಕಿನಲ್ಲಿ ಜಮೆಯನ್ನು ಒಂದು ಕಡೆ ಖರ್ಚನ್ನು ಅದಕ್ಕೆ ಎದುರಿಗೆ ಬೇರೆ ಬೇರೆ ತೋರಿಸಿದೆ. ಒಂದೇ ಕಡೆ ಇಡುವುದಕ್ಕಿಂತ ಇದರಲ್ಲಿ ಸ್ವಲ್ಪ ಅನುಕೂಲ್ಯ ಹೆಚ್ಚು. ಹಾಳೆ ಚಿಕ್ಕದಾಗಿದ್ದರೆ ಪುಸ್ತಕದ ಎದುರು ಬದರು ಪುಟಗಳಲ್ಲಿ ಎಡಗಡೆ ಜಮ ಬಲಗಡೆ ಖರ್ಚು ಹೀಗೆ ಬರೆಯಬಹುದು.

ಕೆಲವರು ಮೇಲೆ ತೋರಿಸಿರುವಂತೆ ಪ್ರತಿ ದಿನವೂ ಸಿಲ್ಕು ಕಟ್ಟಿಕೊಂಡು ಹೋಗುತ್ತಾರೆ. ಬಹಳ ದೊಡ್ಡ ವ್ಯಾಪಾರಗಳಲ್ಲಿ ವಿನಾ ಇದು ಅನಾವಶ್ಯಕ. ಕೊನೆಯಲ್ಲಿ ತೋರಿಸಿರುವಂತೆ ತಿಂಗಳಿಗೊಂದು ಸಾರಿ ಸಿಲ್ಕು ತೇಲಿಸಿಕೊಂಡರೆ ಸಾಕಾಗಿರುವುದು.

ರೋಜು ಹೀಗೆ ಬರೆದಾಗ ವರ್ಗವನ್ನೂ ಇದೇ ನಮೂನೆಯ ಪ್ರಕಾರ ಖರ್ಚು ಒಂದು ಕಡೆ ಜಮ ಒಂದು ಕಡೆ ತಿಳಿಯುವಂತೆ ಬರೆಯಬೇಕು.

ವರ್ಗದ ಬಾಕಿಯನ್ನೂ ಪ್ರತಿ ಆಸಾಮಿಯ ವರ್ಗಕ್ಕೂ ಹೊಸ ವರ್ಗವನ್ನು ಹಾಕಬೇಕಾದರೆ ಮೇಲೆ ಸಿಲ್ಕು ತೇಲಿಸುವಂತೆ ತೇಲಿಸಿಕೊಳ್ಳಬೇಕು. ಹಿಂದೆ ೪ನೇ ನಮೂನೆಯಲ್ಲಿ ಬಸವಣ್ಣನ ವರ್ಗಕ್ಕೆ ಬಾಕಿ ತೇಲಿಸಿದೆ.

ಈ ನಮೂನೆಯಲ್ಲಿ ಪ್ರತಿ ದಿನವೂ ಸಿಲ್ಕು ಕಟ್ಟುವುದನ್ನು ಮೇಲುಗಡೆ ತೋರಿಸಿದೆ. ತಿಂಗಳಿನಕೊನೆಯಲ್ಲಿ ಮಾತ್ರ ಕಟ್ಟಿದರೆ ಕೊನೆಯಲ್ಲಿ ತೋರಿಸಿರುವಂತೆ ಸಾಕು. ಆದರೆ ಮೊದಲಿಂದ ಯಾವ ಪದ್ಧತಿಯನ್ನಿಟ್ಟುಕೊಂಡರೆ ಕೊನೆಯ ವರೆಗೂ ಹಾಗೆಯೇ ನಡಿಸಬೇಕು. ಸಿಲ್ಕು ಕಟ್ಟಿದಮೇಲೆ ಒಳಗಿನ ಲೆಕ್ಕವನ್ನು ಬದಲಾಯಿಸುವುದಕ್ಕೆ ಆಗುವುದಿಲ್ಲವಾದ್ದರಿಂದ ಹೀಗೆ ಸಿಲ್ಕು ಕಟ್ಟುವುದು ಒಳ್ಳೇ ಪದ್ಧತಿಯಾಗಿರುವುದು.

ಹೀಗೆ ಜಮೆಗೂ ಖರ್ಚಿಗೂ ಬೇರೆ ಬೇರೆ ಪಕ್ಕಗಳನ್ನು ಬಿಟ್ಟಾಗ ಒಂದು ತಾರೀಖಿನ ಎರಡು ಬಾಬುಗಳೂ ಒಂದೇ ಸ್ಥಳದಲ್ಲಿ ಹೊದಲಾಗುವಂತೆ ಬರೆಯಬೇಕು. ಒಂದು ಕಡೆ ಬರೀ ಸ್ಥಳ ಉಳಿದರೆ ಅದರ ಮೇಲೆ ಗೆರೆ ಎಳೆದು ಬಿಟ್ಟುಬಿಡಬೇಕು.

## ೩.

## ಜಿನಸಿಯ ರೋಜ್‌ವಾರ್ ಬುಕ್ಕು.

| ಜನವರಿ, ೧೮೯೦. | | ರೂ. | ಆ. | ಪೈ. | ರೂ. | ಆ. | ಪೈ. |
|---|---|---|---|---|---|---|---|
| ೧ | ರಾಮಯ್ಯನವರಿಗೆ | | | | | | |
| | ಸರಿಗೆ ಕೆಂಪು ರುಮಾಲು ೧........... | ೨೦ | ೦ | ೦ | | | |
| | ಮಲ್ ತಾನು ೧ಕ್ಕೆ........... | ೭ | ೮ | ೦ | | | |
| | ಸಕಲಾತಿ ಗಜ ೪ಕ್ಕೆ........... | ೧೨ | ೯ | ೦ | ೪೦ | ೧ | ೦ |
| ೨ | ರಂಗಣ್ಣನವರಿಗೆ | | | | | | |
| | ಪಂಚೆ ಜೊತೆ ೧ಕ್ಕೆ........... | | | | ೩ | ೬ | ೦ |
| ೩ | ತಾಮಪ್ಪನವರಿಗೆ | | | | | | |
| | ಅಕ್ಕಿ ಪಲ್ಲಾ ೨ಕ್ಕೆ........... | ೧೮ | ೮ | ೦ | | | |
| | ತೊಗರೀಬೇಳೆ ಸೇ. ೨೭ಕ್ಕೆ........... | ೨ | ೮ | ೦ | | | |
| | ಬೆಲ್ಲ ಮಣ ೪ಕ್ಕೆ........... | ೭ | ೪ | ೦ | | | |
| | ಕಡ್ಲೆ ಸೇ. ೧೦ಕ್ಕೆ........... | ೦ | ೧೭ | ೦ | ೨೩ | ೩ | ೦ |

ಈ ನಮೂನೆಯಲ್ಲಿ ಒಬ್ಬನೇ ಆಸಾಮಿಗೆ ಒಂದೇಸಾರಿ ಅನೇಕ ಪದಾರ್ಥಗಳನ್ನು ಕೊಟ್ಟಿದ್ದರೆ ಅವುಗಳ ಬೆಲೆಗಳನ್ನೆಲ್ಲಾ ಒಳಸಾಲಿನಲ್ಲಿ ಹಾಕಿ ಒಟ್ಟನ್ನು ಹೊರಗಿನ ಸಾಲಿನಲ್ಲಿ ಹಾಕಬೇಕು. ಒಂದೇ ಪದಾರ್ಥ ಖರ್ಚಾಗಿದ್ದರೆ, ಅದರ ಬೆಲೆಯನ್ನು ಕಡೆಯ ಸಾಲಿನಲ್ಲಿ ಮಾತ್ರ ಬರೆಯತಕ್ಕದ್ದು.

ಹೀಗೆ ಜಿನಸಿಗೆ ಬೇರೆ ನಗದಿಗೆ ಬೇರೆ ಲೆಕ್ಕವನ್ನಿಡುವವರು ತಾವು ಸಾಮಾನನ್ನು ವ್ಯಾಪಾರಕ್ಕೆ ಕೊಂಡುಕೊಳ್ಳುವುದನ್ನೆಲ್ಲಾ ಬೇರೆ ಪುಸ್ತಕದಲ್ಲಿ ಬರೆದಿಡುವುದೇ ಮೇಲು.

ಬೇರೆ ಬೇರೆ ರೋಜುವಾರ್ ಬುಕ್ಕುಗಳನ್ನಿಟ್ಟರೂ ವರ್ಗ ಮಾತ್ರ ಒಂದೇ ಇರತಕ್ಕದ್ದು. ಅದರಲ್ಲಿ ಪ್ರತಿಯೊಬ್ಬ ಆಸಾಮಿಯದೂ ಸಮಸ್ತ ವಿಧವಾದ ಲೇವಾದೇವಿಗಳೆಲ್ಲಾ ಒಂದೇ ಕಡೆ ಸಿಕ್ಕಬೇಕು.

## ೮.

ವರ್ಗದ ಬುಕ್ಕು ಬಹಳ ದೊಡ್ಡದಾಗಿರುವಾಗ ಆಸಾಮಿಗಳ ಲೆಕ್ಕ ಬೇಗ ಸಿಕ್ಕಬೇಕಾದರೆ ಪುಸ್ತಕದ ಆದಿಯಲ್ಲಿ ಅಕ್ಷರಮಾಲಿಕೆಯನ್ನನುಸರಿಸಿ ಹೆಸರುಗಳನ್ನು ಬರೆದು ಅವು ಇರುವ ಪುಟಸಂಖ್ಯೆಯನ್ನು ಹೀಗೆ ಬರೆಯಬೇಕು.

| ಆಸಾಮಿಗಳ ಹೆಸರು | ಪುಟ. |
|---|---|
| ಅಪ್ಪಯ್ಯ ಸೆಟ್ಟರು. | .... |
| ಕಾಂತಪ್ಪನವರು. | .... |
| ದಳ್ಳಾಳಿ. | .... |
| ನಗದು. | .... |
| ಬಸವಪ್ಪ ಸೆಟ್ಟರು. | .... |
| ............................ | .... |
| ............................ | .. |
| ............................ | .... |